ಶುಕ್ರವಾರ, ಜನವರಿ 6, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಅಭಿನಂದನೆ**
ಕೇಂದ್ರ ಗೃಹ ಇಲಾಖೆಯ 2020ನೇ ಸಾಲಿನ ಪದಕ ಪಡೆದ ಡಿವೈಎಸ್ಪಿ (ನಿ) ಎಸ್‌.ಕೆ. ಉಮೇಶ್ ಅವರನ್ನು ಮಗಳು, 'ಕಾಂತಾರ' ನಟಿ ಸಪ್ತಮಿ ಗೌಡ ಅಭಿನಂದಿಸಿದರು.



## ವೀಸಾ ನಿಯಮ ಉಲ್ಲಂಘನೆ: ಶಿಕ್ಷೆ

**ಕಾರವಾರ:** ವೀಸಾ ನಿಯಮ ಉಲ್ಲಂಘಿಸಿದ ಆರೋಪದಡಿ ಭಟ್ಕಳದ ದಂಪತಿಗೆ ಜೈಲು ಶಿಕ್ಷೆ ವಿಧಿಸಿ ಇಲ್ಲಿನ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಗುರುವಾರ ಆದೇಶಿಸಿದೆ.

ಭಟ್ಕಳ ಪಟ್ಟಣದ ಮೌಲಾನಾ ಆಜಾದ್ ರಸ್ತೆಯ ನಿವಾಸಿ ಮಹಮದ್ ಇಲಿಯಾಸ್ ಪಿಲ್ಲೂರ ಮತ್ತು ಆತನ ಪತ್ನಿ ಪಾಕಿಸ್ತಾನ ಮೂಲದವರಾದ ನಾಸಿರಾ ಪರವೀನ್ ಇಲಿಯಾಸ್ ಶಿಕ್ಷೆಗೆ ಗುರಿಯಾದವರು.

ಭಟ್ಕಳದ ಯುವಕ ಇಲಿಯಾಸ್ ಜತೆ ವಿವಾಹವಾಗಿ ಭಾರತಕ್ಕೆ ಬಂದಿದ್ದ ನಾಸಿರಾ ವೀಸಾ ಅವಧಿ ಮುಗಿದರೂ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡದೆ 2014ರಲ್ಲಿ ವೀಸಾ ಅವಧಿ ವಿಸ್ತರಣೆಗೆ ಪತಿಯೊಂದಿಗೆ ದೆಹಲಿಗೆ ತೆರಳಿದ್ದರು.

ಪ್ರಕರಣದ ಮೊದಲ ಆರೋಪಿ ಇಲಿಯಾಸ್ ಗೆ ಒಂದು ತಿಂಗಳ ಜೈಲು, ₹10 ಸಾವಿರ ದಂಡ, ಎರಡನೇ ಆರೋಪಿ ನಾಸಿರಾಗೆ ಆರು ತಿಂಗಳು ಜೈಲು, ₹10 ಸಾವಿರ ದಂಡ ವಿಧಿಸಿ ಆದೇಶಿಸಿದ್ದಾರೆ.

### 2025– 26ಕ್ಕೆ ಬೆಂಗಳೂರು– ಕಡಪ– ವಿಜಯವಾಡ ಕಾರಿಡಾರ್ ಪೂರ್ಣ ನಿರೀಕ್ಷೆ: ಸಚಿವ ಗಡ್ಕರಿ

# ‘10 ಸಾವಿರ ಕಿ.ಮೀ ಹೆದ್ದಾರಿ ಅಭಿವೃದ್ಧಿ’

ಪ್ರಜಾವಾಣಿ ವಾರ್ತೆ

**ರಾಮನಗರ:** ಭಾರತ್ ಮಾಲಾ ಯೋಜನೆ ಅಡಿ ದೇಶದಲ್ಲಿ ಅಂದಾಜು ₹4.5 ಲಕ್ಷ ಕೋಟಿ ವೆಚ್ಚದಲ್ಲಿ ಒಟ್ಟು 10 ಸಾವಿರ ಕಿ.ಮೀ ಉದ್ದದ 27 ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್ ವೇ ಮತ್ತು ಕಾರಿಡಾರ್ ನಿರ್ಮಿಸುತ್ತಿದ್ದು, ಆ ಪೈಕಿ ಒಂದು ಎಕ್ಸ್‌ಪ್ರೆಸ್ ವೇ ಹಾಗೂ ಎರಡು ಆರ್ಥಿಕ ಕಾರಿಡಾರ್ ಕರ್ನಾಟಕದ ಮೂಲಕ ಹಾದುಹೋಗಲಿವೆ ಎಂದು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದರು.

‘ಈ 10 ಸಾವಿರ ಕಿ.ಮೀ ಪೈಕಿ ಮೊದಲ ಹಂತದಲ್ಲಿ ₹2.78 ಲಕ್ಷ ಕೋಟಿ ವೆಚ್ಚದಲ್ಲಿ 6,138 ಕಿ.ಮೀ ಉದ್ದದ ಕಾಮಗಾರಿಗಳಿಗೆ ಈಗಾಗಲೇ ಅನುಮೋದನೆ ನೀಡಲಾಗಿದೆ. ಉಳಿದ ಕಾಮಗಾರಿಗಳಿಗೆ 2023-24ನೇ ಸಾಲಿನಲ್ಲಿ ಅನುಮೋದನೆ ನೀಡಲಾಗುವುದು’ ಎಂದು ಸುದ್ದಿ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.


ಕರ್ನಾಟಕ-ಆಂಧ್ರಪ್ರದೇಶ ನಡುವಿನ 342 ಕಿ.ಮೀ ಉದ್ದದ ಬೆಂಗಳೂರು- ಕಡಪ- ವಿಜಯವಾಡ ಕಾರಿಡಾರ್ ಅನ್ನು ₹13,600 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಇದರಲ್ಲಿ 275 ಕಿ.ಮೀ ಉದ್ದದ ಕಾಮಗಾರಿಗೆ ಈಗಾಗಲೇ ಟೆಂಡರ್ ಆಹ್ವಾನಿಸಲಾಗಿದೆ. 2025- 26ರ ವೇಳೆಗೆ ಈ ಕಾಮಗಾರಿ ಮುಗಿಯುವ ನಿರೀಕ್ಷೆ ಇದೆ. ಈ ಯೋಜನೆಯಿಂದಾಗಿ ಈ ನಗರಗಳ ನಡುವಿನ ಅಂತರ 75 ಕಿ.ಮೀ ನಷ್ಟು ಕಡಿಮೆ ಆಗಲಿದ್ದು, ಪ್ರಯಾಣದ ಅವಧಿ 5 ಗಂಟೆಯಷ್ಟು ಕಡಿಮೆ ಆಗಲಿದೆ ಎಂದರು.

ಮುಂಬೈ ಮತ್ತು ಕನ್ಯಾಕುಮಾರಿ ನಡುವಿನ 1620 ಕಿ.ಮೀ ಉದ್ದದ ಕರಾವಳಿ ಹೆದ್ದಾರಿ ಸಹ ನಿರ್ಮಾಣ ಹಂತದಲ್ಲಿದೆ. 261 ಕಿ.ಮೀ ಉದ್ದದ ಎರಡು ಪ್ಯಾಕೇಜ್ ಕಾಮಗಾರಿ ಮುಗಿದಿದೆ. ಮಂಗಳೂರು ಬೈಪಾಸ್ ಮತ್ತು ಕುಮಟಾ ಬೈಪಾಸ್‌ನ ಎರಡು ಪ್ಯಾಕೇಜ್ ಕಾಮಗಾರಿ ಡಿಪಿಆರ್ ಹಂತದಲ್ಲಿದ್ದು, ಇದಕ್ಕೆ ₹3,500 ಕೋಟಿ ವೆಚ್ಚ ಅಂದಾಜಿಸಲಾಗಿದೆ. ಕರ್ನಾಟಕದಲ್ಲಿ ಈ ಹೆದ್ದಾರಿ ಉತ್ತರ ಕನ್ನಡ, ಉಡುಪಿ, ದಕ್ಷಿಣ ಜಿಲ್ಲೆಗಳಲ್ಲಿ ಹಾದುಹೋಗಲಿದೆ ಎಂದು ಅವರು ಹೇಳಿದರು.

**ಸೋಲಾಪುರ- ಕರ್ನೂಲ್- ಚೆನ್ನೈ ಆರ್ಥಿಕ ಕಾರಿಡಾರ್:** ಸೂರತ್- ಚೆನ್ನೈ ಎಕ್ಸ್‌ಪ್ರೆಸ್ ವೇ ಭಾಗವಾಗಿ ಈ ಕಾರಿಡಾರ್ ನಿರ್ಮಾಣ ಆಗುತ್ತಿದ್ದು, ಕರ್ನಾಟಕ ಸೇರಿ ಆರು ರಾಜ್ಯಗಳಲ್ಲಿ ಹಾದುಹೋಗಲಿದೆ. 1,270 ಕಿ.ಮೀ ಉದ್ದದ ಈ ಯೋಜನೆಗೆ ಒಟ್ಟು ₹47,000 ಕೋಟಿ ವೆಚ್ಚ ಅಂದಾಜಿಸಲಾಗಿದೆ.

ಈ ಕಾರಿಡಾರ್ ಅಡಿ ಸೋಲಾಪುರ- ಕರ್ನೂಲ್ ಎಕ್ಸ್‌ಪ್ರೆಸ್ ವೇ ತಲೆ ಎತ್ತಲಿದೆ. ಇದರಿಂದಾಗಿ ಈ ಎರಡು ನಗರಗಳ ಪ್ರಯಾಣದ ಅವಧಿಯು 10 ಗಂಟೆಯಿಂದ 4 ಗಂಟೆಗೆ ಇಳಿಕೆ ಆಗಲಿದೆ. ಕಲಬುರ್ಗಿ, ಯಾದಗಿರಿ, ರಾಯಚೂರು ಮಾರ್ಗವಾಗಿ ಇದು ಸಂಪರ್ಕಿಸಲಿದೆ. ರಾಜ್ಯದಲ್ಲಿ ಒಟ್ಟು 4 ಪ್ಯಾಕೇಜ್‌ಗಳಲ್ಲಿ 223 ಕಿ.ಮೀ ಉದ್ದದ ರಸ್ತೆಯನ್ನು ₹7,446 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ. 2025ರ ಜೂನ್ ವೇಳೆಗೆ ಈ ಕಾಮಗಾರಿ ಮುಗಿಯುವ ನಿರೀಕ್ಷೆ ಇದೆ ಎಂದು ಸಚಿವರು ಮಾಹಿತಿ ನೀಡಿದರು.

### ಭಾರತ್‌ಮಾಲಾ ಯೋಜನೆ: ಪುಣೆ– ಬೆಂಗಳೂರು ಹೊಸ ಹೆದ್ದಾರಿ ನಿರ್ಮಾಣ



ಭಾರತ್‌ಮಾಲಾ ಯೋಜನೆಯ ಎರಡನೇ ಹಂತದಲ್ಲಿ ಪುಣೆ- ಬೆಂಗಳೂರು ನಡುವೆ ಹೊಸ ಗ್ರೀನ್‌ಫೀಲ್ಡ್ ಹೆದ್ದಾರಿ ನಿರ್ಮಿಸಲು ಉದ್ದೇಶಿಸಲಾಗಿದೆ. 6 ಪಥಗಳ ಈ ಹೆದ್ದಾರಿಯು 700 ಕಿ.ಮೀ ಉದ್ದ ಇರಲಿದ್ದು, ಕರ್ನಾಟಕದಲ್ಲಿ 500 ಕಿ.ಮೀ ಹಾಗೂ ಮಹಾರಾಷ್ಟ್ರದಲ್ಲಿ 200 ಕಿ.ಮೀ ಹಾದು ಹೋಗಲಿದೆ. ಇದಕ್ಕೆ ₹45 ಸಾವಿರ ಕೋಟಿ ವೆಚ್ಚ ಅಂದಾಜಿಸಲಾಗಿದೆ. ಈ ಹೊಸ ಹೆದ್ದಾರಿಯು ಮುಂಬೈ- ಪುಣೆ ಎಕ್ಸ್‌ಪ್ರೆಸ್ ವೇ ಹಾಗೂ ಬೆಂಗಳೂರು- ಚೆನ್ನೈ ಎಕ್ಸ್‌ಪ್ರೆಸ್ ವೇ ಅನ್ನು ಬೆಸೆಯಲಿದೆ ಎಂದು ಸಚಿವ ನಿತಿನ್ ಗಡ್ಕರಿ ಮಾಹಿತಿ ನೀಡಿದರು.


## ಸುದ್ದಿ 2 ನಿಮಿಷ

### ‘ಮೀಸಲಾತಿ: ಸ್ಪಷ್ಟಪಡಿಸದಿದ್ದರೆ ಜ.13ರಿಂದ ಹೋರಾಟ’

**ಬೆಳಗಾವಿ:** ‘ಪಂಚಮಸಾಲಿ ಸಮುದಾಯಕ್ಕೆ 2ಎ ಅಥವಾ ಅದಕ್ಕೆ ಸಮನಾದ ಮೀಸಲಾತಿ ಕಲ್ಪಿಸುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 24 ಗಂಟೆಯೊಳಗೆ ಸ್ಪಷ್ಟಪಡಿಸಬೇಕು. ಜ.12ರೊಳಗೆ ಗೆಜೆಟ್ ನೋಟಿಫಿಕೇಷನ್ ಕೂಡ ಹೊರಡಿಸಬೇಕು. ಇಲ್ಲದಿದ್ದರೆ ಜ.13ರಂದು ಹಾವೇರಿ ಜಿಲ್ಲೆಯ ಶಿಗ್ಗಾವಿಯಲ್ಲಿರುವ ಬೊಮ್ಮಾಯಿ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು’ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ ನೀಡಿದರು.

ನಗರದಲ್ಲಿ ಗುರುವಾರ ನಡೆದ ಪಂಚಮಸಾಲಿ ಸಮುದಾಯದ ಜನಪ್ರತಿನಿಧಿಗಳು ಹಾಗೂ ಪದಾಧಿಕಾರಿಗಳ ರಾಜ್ಯ ಕಾರ್ಯಕಾರಿಣಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸರ್ಕಾರ ಈಗ ಕೊಟ್ಟಿರುವ 2ಡಿ ಮೀಸಲಾತಿಯಲ್ಲಿ ಗೊಂದಲವಿದೆ. ಅದನ್ನು ಒಪ್ಪಿಕೊಳ್ಳಲಾಗದು. ಸಮುದಾಯದವರೆಲ್ಲ ಸೇರಿ ಚರ್ಚಿಸಿ ಒಮ್ಮತದಿಂದ ಈ ತೀರ್ಮಾನ ಕೈಗೊಂಡಿದ್ದೇವೆ’ ಎಂದರು.

‘ಶಿಗ್ಗಾವಿಯಲ್ಲಿ 30 ಸಾವಿರಕ್ಕೂ ಹೆಚ್ಚು ಮಂದಿ ಹೋರಾಟ ಮಾಡುತ್ತೇವೆ. ಅಂದು ಬೇಡಿಕೆ ಈಡೇರದಿದ್ದರೆ ಚಳವಳಿಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ಕುರಿತು ನಿರ್ಧಾರ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.



### ನಾರಾಯಣ ಗುರು ನಿಗಮ: ಭರವಸೆ

**ಬೆಂಗಳೂರು:** ಮುಂಬರುವ ಬಜೆಟ್ ಅಧಿವೇಶನದಲ್ಲಿ ನಾರಾಯಣ ಗುರು ಅಭಿವೃದ್ಧಿ ನಿಗಮ ಸ್ಥಾಪನೆಯ ಘೋಷಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ ಎಂದು ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ ತಿಳಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಂ.ತಿಮ್ಮೇಗೌಡ, ‘ಹಿಂದುಳಿದ ವರ್ಗಗಳ 2ಎ ಪ್ರವರ್ಗಕ್ಕೆ ಸೇರಿದ ಈಡಿಗ ಸಮುದಾಯಕ್ಕೆ ನಾರಾಯಣ ಗುರು ಅಭಿವೃದ್ಧಿ ಕೋಶದ ಬದಲಾಗಿ ನಾರಾಯಣ ಗುರು ಅಭಿವೃದ್ಧಿ ನಿಗಮ ಸ್ಥಾಪಿಸಿ ₹500 ಕೋಟಿ ಅನುದಾನವನ್ನು ಮೀಸಲಿಡಬೇಕು’ ಎಂದು ಒತ್ತಾಯಿಸಿದರು.

‘2ಎ ಪ್ರವರ್ಗದಲ್ಲಿರುವ ಈಡಿಗ ಸಮುದಾಯವು 25 ಉಪ ಜಾತಿಗಳನ್ನು ಒಳಗೊಂಡಿದ್ದು, 50 ಲಕ್ಷ ಜನಸಂಖ್ಯೆಯನ್ನು ಹೊಂದಿದೆ. ಇವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ಕುಲ ಕಸುಬು ಆಧರಿಸಿದ ಜಾತಿಗಳಾಗಿವೆ. ಪ್ರವರ್ಗ 2ಎ ಮೀಸಲಾತಿ ಸೌಲಭ್ಯಕ್ಕೆ ಯಾವುದೇ ಧಕ್ಕೆಯಾಗಬಾರದು. ಹಿಂದುಳಿದ ವರ್ಗಗಳ ಆಯೋಗದ ಕಾಂತರಾಜ್ ವರದಿಯನ್ನು ಈ ಕೂಡಲೇ ಜಾರಿಗೊಳಿಸಬೇಕು. ಸರ್ಕಾರ ಸಿಗಂದೂರು ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡಬಾರದು’ ಎಂದು ಆಗ್ರಹಿಸಿದರು.

**ಪಾದಯಾತ್ರೆ ನಿಲ್ಲದು (ಮಂಗಳೂರು ವರದಿ):** ಬಿಲ್ಲವ, ಈಡಿಗ, ನಾಮಧಾರಿ ಸಮುದಾಯಗಳ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಇದೇ 6ರಿಂದ ಮಂಗಳೂರಿನಿಂದ ಬೆಂಗಳೂರಿಗೆ ಹಮ್ಮಿಕೊಂಡಿರುವ 41 ದಿನಗಳ ಪಾದಯಾತ್ರೆ ನಡೆದೇ ನಡೆಯುತ್ತದೆ. ಒತ್ತಡ, ಬೆದರಿಕೆಗಳಿಗೆ ಹೆದರುವುದಿಲ್ಲ ಎಂದು ಕರದಾಳು ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿ ಪೀಠದ ಪ್ರಣವಾನಂದ ಸ್ವಾಮೀಜಿ ಹೇಳಿದರು.



**ತೆಪ್ಪೋತ್ಸವ** ಕೊಪ್ಪಳದ ಗವಿಸಿದ್ದೇಶ್ವರ ಮಠದ ಜಾತ್ರೆಯ ಅಂಗವಾಗಿ ಮಠದ ಆವರಣದಲ್ಲಿರುವ ಕೆರೆಯಲ್ಲಿ ಗುರುವಾರ ನಡೆದ ತೆಪ್ಪೋತ್ಸವ ವಿದ್ಯುತ್ ದೀಪಗಳ ಬೆಳಕಿನ ಹೊಳಪಿನಲ್ಲಿ ಕಂಡು ಬಂದಿದ್ದು ಹೀಗೆ

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

## ₹6 ಸಾವಿರ ಕೋಟಿ ಬಾಕಿ ಬಿಡುಗಡೆಗೆ ಗುತ್ತಿಗೆದಾರರ ಆಗ್ರಹ

ಪ್ರಜಾವಾಣಿ ವಾರ್ತೆ

**ಧಾರವಾಡ:** ‘ಸರ್ಕಾರದ ವಿವಿಧ ಇಲಾಖೆಗಳ ಮೂಲಕ ನಡೆಸಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರಾಜ್ಯದಾದ್ಯಂತ ಸರ್ಕಾರ ₹6 ಸಾವಿರ ಕೋಟಿ ಬಾಕಿ ಉಳಿಸಿಕೊಂಡಿದೆ. ಇದರಲ್ಲಿ ಉತ್ತರ ಕರ್ನಾಟಕದ ಗುತ್ತಿಗೆದಾರರ ಪಾಲು ₹3 ಸಾವಿರ ಕೋಟಿಯಾಗಿದ್ದು, ಸರ್ಕಾರ ಕೂಡಲೇ ಬಿಡುಗಡೆ ಮಾಡಬೇಕು’ ಎಂದು ಉತ್ತರ ಕರ್ನಾಟಕ ಸಿವಿಲ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸುಭಾಸ ಪಾಟೀಲ ಆಗ್ರಹಿಸಿದರು.

‘ಸಣ್ಣ ನೀರಾವರಿ, ಲೋಕೋಪಯೋಗಿ, ಬೃಹತ್ ನೀರಾವರಿ, ಜಿಲ್ಲಾ ಪಂಚಾಯ್ತಿ ಹೀಗೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರ ಹಣ ಕೋಟಿಗಟ್ಟಲೇ ಬಾಕಿ ಇದ್ದು, ಕೂಡಲೇ ಬಿಡುಗಡೆ ಮಾಡಬೇಕು’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಗುತ್ತಿಗೆದಾರರು ಟೆಂಡರ್‌ಗಳಲ್ಲಿ ಸರ್ಕಾರ ನಿಗದಿಪಡಿಸಿದ ಎಸ್‌ಆರ್ ದರಕ್ಕಿಂತ ಶೇ 5ಕ್ಕಿಂತ ಹೆಚ್ಚಿನ ದರಗಳನ್ನು ನಮೂದಿಸಿದಲ್ಲಿ ಅದನ್ನು ಸರ್ಕಾರಕ್ಕೆ ಕಳುಹಿಸುವ ನಿಯಮವಿದೆ. ಈ ನಿಯಮ ಬದಲಿಸಿ ಮೊದಲಿನ ನಿಯಮ ಜಾರಿಗೆ ತರಬೇಕು. ಇಂತಹ ಚಿಕ್ಕಪುಟ್ಟ ಬದಲಾವಣೆ ಮಾಡಲು ವಲಯ ಕಾರ್ಯನಿರ್ವಾಹಕ ಎಂಜಿನಿಯರ್ ಮಟ್ಟದಲ್ಲೇ ಕ್ರಮ ಕೈಗೊಳ್ಳುವಂತೆ ಅಧಿಕಾರವನ್ನು ವಿಕೇಂದ್ರೀಕರಿಸಬೇಕು’ ಎಂದು ಪಾಟೀಲ ಒತ್ತಾಯಿಸಿದರು.

‘ರಾಜ್ಯದಾದ್ಯಂತ ಕ್ರಷರ್ ಮಾಲೀಕರು ಪ್ರತಿಭಟನೆ ನಡೆಸುತ್ತಿದ್ದು, ಅವರ ಸಮಸ್ಯೆಯನ್ನು ಸರ್ಕಾರ ಬಗೆಹರಿಸಬೇಕು. ವಿವಿಧ ಕಾಮಗಾರಿಗಳಿಗೆ ಅಗತ್ಯವಿರುವ ಜಲ್ಲಿಕಲ್ಲು ಸಿಗುವಂತೆ ಮಾಡಬೇಕು. ಒಂದು ವಾರದೊಳಗೆ ಬೇಡಿಕೆ ಈಡೇರದಿದ್ದರೆ ಜನಪ್ರತಿನಿಧಿಗಳ ಮನೆ ಎದುರು ಪ್ರತಿಭಟನೆ ನಡೆಸಲಾಗುವುದು’ ಎಂದು ಎಚ್ಚರಿಕೆ ನೀಡಿದರು.

## ಕುಕ್ಕರ್ ಸ್ಫೋಟ ಪ್ರಕರಣ: ವಿದ್ಯಾರ್ಥಿ ಎನ್‌ಐಎ ವಶಕ್ಕೆ

**ಮುಡಿಪು (ದಕ್ಷಿಣ ಕನ್ನಡ):** ಮಂಗಳೂರಿನ ನಾಗುರಿಯಲ್ಲಿ ತಿಂಗಳ ಹಿಂದೆ ನಡೆದ ಆಟೊರಿಕ್ಷಾದಲ್ಲಿ ಕುಕ್ಕರ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ)ದ ಅಧಿಕಾರಿಗಳು ಗುರುವಾರ ಕೈರಂಗಳ ಗ್ರಾಮದ ನಡುಪದವು ಪಿ.ಎ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಡುಪಿ ಮೂಲದ ಒಬ್ಬ ವಿದ್ಯಾರ್ಥಿಯನ್ನು ವಶಕ್ಕೆ ಪಡೆದಿದ್ದಾರೆ.

ಬಾಂಬ್ ಸ್ಫೋಟಿಸುವ ಪ್ರಯೋಗದ ಆರೋಪದ ಮೇಲೆ ಶಿವಮೊಗ್ಗದಲ್ಲಿ ಬಂಧಿಸಿದ್ದ ಶಂಕಿತ ಉಗ್ರ ಮಾಝ್ ಮುನೀರ್, ಪಿ.ಎ. ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಯಾಗಿದ್ದ. ಈ ಹಿನ್ನೆಲೆಯಲ್ಲಿ ಕಾಲೇಜಿನಲ್ಲಿ ಆತನ ದಾಖಲೆ ಇನ್ನಿತರ ಮಾಹಿತಿಗಳನ್ನು ಬೆಂಗಳೂರಿನಿಂದ ಬಂದಿದ್ದ ಏಳು ಅಧಿಕಾರಿಗಳ ತಂಡ ಪರಿಶೀಲಿಸಿತು.

**ಹೊನ್ನಾಳಿಯಲ್ಲೂ ಒಬ್ಬ ವಶಕ್ಕೆ (ದಾವಣಗೆರೆ ವರದಿ):** ಕುಕ್ಕರ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳ(ಎನ್‌ಐಎ)ದ ಅಧಿಕಾರಿಗಳು ಗುರುವಾರ ಹೊನ್ನಾಳಿಯಲ್ಲೂ ಒಬ್ಬರನ್ನು ವಶಕ್ಕೆ ಪಡೆದಿದ್ದಾರೆ. ಶಿವಮೊಗ್ಗದ ಮಂಜುನಾಥ್ ಬಡಾವಣೆಯ ತಾಜುದ್ದೀನ್ ಫರ್ಹಾನ್ ಎಂಬುವವರ ಮನೆಯನ್ನೂ ಎನ್‌ಐಎ ಶೋಧಿಸಿದೆ.

## ಎಸ್‌ಸಿ ಮೀಸಲಾತಿ ನೀಡಲು ಕೋರಿಕೆ

### ಅನುದಾನ ಹಿಂಪಡೆಯಿರಿ: ಸರ್ಕಾರಕ್ಕೆ ಬಸವ ಮಾಚಿದೇವ ಸ್ವಾಮೀಜಿ ಒತ್ತಾಯ

ಪ್ರಜಾವಾಣಿ ವಾರ್ತೆ

**ಚಿತ್ರದುರ್ಗ:** ‘ಮಡಿವಾಳ ಸಮುದಾಯ ಹಾಗೂ ಮಠಕ್ಕೆ ನೀಡಿದ ಎಲ್ಲ ಅನುದಾನವನ್ನು ಸರ್ಕಾರ ಹಿಂಪಡೆದು ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲಿ. ಇದು ಸಮುದಾಯದ ವಿನಮ್ರ ಮನವಿಯೇ ವಿನಾ ಆಗ್ರಹವಲ್ಲ’ ಎಂದು ಮಡಿವಾಳ ಗುರುಪೀಠದ ಬಸವ ಮಾಚಿದೇವ ಸ್ವಾಮೀಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕೋರಿದರು.

ಇಲ್ಲಿನ ಮಡಿವಾಳ ಗುರುಪೀಠದಲ್ಲಿ ಸ್ವಾಮೀಜಿ ಅವರ 5ನೇ ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ಗುರುವಾರ ಏರ್ಪಡಿಸಿದ್ದ ‘ಕಾಯಕ ಜನೋತ್ಸವ’ದಲ್ಲಿ ಅವರು ಮಾತನಾಡಿದರು.

‘ಮಠಕ್ಕೆ ₹ 3 ಕೋಟಿ ಅನುದಾನ ನೀಡಿರುವುದಕ್ಕೆ ಸರ್ಕಾರಕ್ಕೆ ಕೃತಜ್ಞರಾಗಿರುತ್ತೇವೆ. ಆದರೆ, ಸಮುದಾಯದ ಪ್ರಮುಖ ಬೇಡಿಕೆಯಾದ ಪರಿಶಿಷ್ಟ ಜಾತಿ ಮೀಸಲಾತಿ ಸೌಲಭ್ಯವನ್ನು ಈಡೇರಿಸಿದರೆ ಇನ್ನಷ್ಟು ಅನುಕೂಲವಾಗಲಿದೆ. ಡಾ.ಅನ್ನಪೂರ್ಣಮ್ಮ ಅವರ ಕುಲಶಾಸ್ತ್ರೀಯ ಅಧ್ಯಯನದ ವರದಿಯನ್ನು ಸರ್ಕಾರ ಈಗಲಾದರೂ ಪರಿಗಣಿಸಲಿ’ ಎಂದರು.

‘ಮಡಿವಾಳ ಸಮುದಾಯದ ಶೇ 98ರಷ್ಟು ಜನರು ಇನ್ನೂ ಕುಲಕಸುಬು ನಂಬಿ ಬದುಕು ಸಾಗಿಸುತ್ತಿದ್ದಾರೆ. ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಕ್ಕೆ ಮುಂದಿನ ಬಜೆಟ್‌ನಲ್ಲಿ ಕನಿಷ್ಠ ₹ 500 ಕೋಟಿ ಅನುದಾನ ನೀಡಬೇಕು. ಸಹೋದರ ಸಮುದಾಯಕ್ಕೆ ನೀಡಿರುವ ಉಚಿತ ವಿದ್ಯುತ್ ಸೌಲಭ್ಯವನ್ನು ಮಡಿವಾಳ ಸಮುದಾಯಕ್ಕೂ ಕಲ್ಪಿಸಬೇಕು’ ಎಂದು ಅವರು ಹೇಳಿದರು.

### ವರದಿ ಪರಿಶೀಲಿಸುವೆ: ಸಿ.ಎಂ

‘ಡಾ.ಅನ್ನಪೂರ್ಣಮ್ಮ ವರದಿಯನ್ನು ಕಾನೂನಾತ್ಮಕವಾಗಿ ಪರಿಶೀಲಿಸಿ ನ್ಯಾಯ ಕೊಡಿಸುವ ಕಾರ್ಯವನ್ನು ಮಾಡುತ್ತೇವೆ. ಸಂವಿಧಾನದ ಚೌಕಟ್ಟಿನಲ್ಲಿ ಸಾಮಾಜಿಕ ನ್ಯಾಯ ಒದಗಿಸಲು ಸರ್ಕಾರ ಸಿದ್ಧವಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶ್ವಾಸನೆ ನೀಡಿದರು.

‘ಕುಲಶಾಸ್ತ್ರೀಯ ಅಧ್ಯಯನದ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿ ಎಂಟು ವರ್ಷಗಳು ಕಳೆದಿವೆ. ಈವರೆಗೆ ಅಧಿಕಾರ ನಡೆಸಿದ ಯಾವ ಸರ್ಕಾರವೂ ವರದಿಯ ಪುಟ ತಿರುಗಿಸಿ ನೋಡಿಲ್ಲ. ಸಮುದಾಯಕ್ಕೆ ಒಳ್ಳೆಯ ದಿನಗಳು ಬಂದಿವೆ. ಮತ್ತೊಬ್ಬರಿಗೆ ಅನ್ಯಾಯ ಆಗದ ರೀತಿಯಲ್ಲಿ ನ್ಯಾಯ ಒದಗಿಸುತ್ತೇವೆ’ ಎಂದರು.

## ಟಿಕೆಟ್ ಆಕಾಂಕ್ಷಿಗಳಿಂದ ತೀರ್ಥ ಕ್ಷೇತ್ರ ಪ್ರವಾಸ

ಪ್ರಜಾವಾಣಿ ವಾರ್ತೆ

**ಮೈಸೂರು/ಮಂಡ್ಯ:** ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಆಕಾಂಕ್ಷೆ ಹೊಂದಿರುವವರು ಮತದಾರರ ಮನಗೆಲ್ಲಲು ದೇಗುಲ ಪ್ರವಾಸ, ಕ್ರೀಡಾಕೂಟ ಆಯೋಜನೆಗೆ ಹಣ ಹಾಗೂ ಪ್ರಾಯೋಜಕತ್ವ ನೀಡುತ್ತಿರುವುದು ಅಲ್ಲಲ್ಲಿ ಕಂಡುಬರುತ್ತಿದೆ.

ಹುಣಸೂರು ಕ್ಷೇತ್ರದಲ್ಲಿ ಜೆಡಿಎಸ್ ಘೋಷಿತ ಅಭ್ಯರ್ಥಿ ಜಿ.ಡಿ.ಹರೀಶ್ ಗೌಡ, ಹಾಲಿ ಶಾಸಕ ಕಾಂಗ್ರೆಸ್‌ನ ಎಚ್.ಪಿ.ಮಂಜುನಾಥ್ ಅಯ್ಯಪ್ಪ ಸ್ವಾಮಿ ದರ್ಶನಕ್ಕೆ ತೆರಳುವ 10ರಿಂದ 15 ಜನರ ಪ್ರತಿ ತಂಡಕ್ಕೆ ₹25ಸಾವಿರ ನೀಡುತ್ತಿದ್ದಾರೆ. ತಂಡಕ್ಕೆ ಅನುಗುಣವಾಗಿ ಪ್ರವಾಸಕ್ಕೆ ಇಂತಿಷ್ಟು ಹಣ ಕೊಡುತ್ತಿದ್ದಾರೆ.

ಮಂಡ್ಯದಲ್ಲಿ ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಟಿಕೆಟ್ ಆಕಾಂಕ್ಷಿಗಳು ಜನರನ್ನು ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಮಲೆಮಹದೇಶ್ವರ ಬೆಟ್ಟ ಕ್ಷೇತ್ರಗಳಿಗೆ ಕಳುಹಿಸುತ್ತಿದ್ದಾರೆ. ಮಂಡ್ಯ ಕ್ಷೇತ್ರದಲ್ಲೇ ಈವರೆಗೆ ಸಾವಿರಾರು ಜನರನ್ನು ದರ್ಶನಕ್ಕೆ ಕಳುಹಿಸಲಾಗಿದೆ.

## ಬಿಜೆಪಿ ಮುಖಂಡರು ನರಿಗಳು: ಧರ್ಮಸೇನಾ

ಪ್ರಜಾವಾಣಿ ವಾರ್ತೆ

**ಬಾಗಲಕೋಟೆ:** ‘ಬಿಜೆಪಿ ಮುಖಂಡರು ನರಿಗಳು’ ಎಂದು ಕೆಪಿಸಿಸಿ ಪರಿಶಿಷ್ಟ ಘಟಕದ ರಾಜ್ಯ ಅಧ್ಯಕ್ಷ ಆರ್. ಧರ್ಮಸೇನಾ ಟೀಕಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ, ‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ನಾಯಿ ಎಂದದ್ದು ಸರಿಯೇ’ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ನಾಯಿ ನಿಯತ್ತಿನ ಪ್ರಾಣಿ. ನಾಯಿ ಸರಿಯಾಗುವುದಿಲ್ಲ. ಬಿಜೆಪಿಯವರು ನರಿಗಳು’ ಎಂದು ವಾಗ್ದಾಳಿ ನಡೆಸಿದ್ದಾರೆ.

‘ಬಿಜೆಪಿ ಸರ್ಕಾರ ನಾಯಿಯಂತೆ ನಿಯತ್ತಿನಿಂದ ರಾಜ್ಯದ ಜನತೆ ಕೆಲಸ ಮಾಡದೆ ಮೋಸ ಮಾಡುತ್ತಿದೆ. ಜನರಿಗೆ ನಿಯತ್ತು ತೋರಿಸಿದರೆ ವಿಷಾದ ವ್ಯಕ್ತಪಡಿಸಬಹುದು’ ಎಂದರು.

### ‘ಮುಖ್ಯಮಂತ್ರಿಗೆ ನಾಯಿ ಮರಿ ಎಂದಿಲ್ಲ’

**ಮಂಗಳೂರು:** ‘ಮುಖ್ಯಮಂತ್ರಿಯನ್ನು ನಾಯಿಮರಿ ಎಂದು ಹೇಳಿಲ್ಲ. ರಾಜ್ಯಕ್ಕೆ ಬೇಕಾದಷ್ಟು ಅನುದಾನ ತರಲು ಕೇಂದ್ರದ ಜೊತೆ ಮಾತನಾಡುವ ಧೈರ್ಯ ಬೇಕು ಎಂದಷ್ಟೆ ಹೇಳಿದ್ದೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಗುರುವಾರ ಪ್ರತಿಕ್ರಿಯಿಸಿದರು.

ಪತ್ರಕರ್ತರ ಜತೆ ಅವರು ಮಾತನಾಡಿದರು. ‘ಲವ್ ಜಿಹಾದ್’ ಕುರಿತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, 'ನಳಿನ್ ಕುಮಾರ್ ಪೆದ್ದು ಪೆದ್ದಾಗಿ ಮಾತನಾಡಿ ಬಿಜೆಪಿಯ ಜೋಕರ್ ಎನಿಸಿಕೊಂಡಿದ್ದಾರೆ. ನನ್ನನ್ನು ಜೈಲಿಗೆ ಕಳುಹಿಸುವುದಾಗಿ ಹೇಳಲು ಅವರು ಯಾರು? ಜೈಲಿಗೆ ಕಳುಹಿಸುವುದು ನ್ಯಾಯಾಲಯವೇ ಹೊರತು ನಳಿನ್ ಕುಮಾರ್ ಅಲ್ಲ. ಕಾನೂನು ತಿಳಿಯದೆ ಮಾತನಾಡಿ ವಿದೂಷಕನಂತಾಗಿದ್ದಾರೆ’ ಎಂದರು.

## ರಾಜಕಾರಣ ಕೀಳು ಮಟ್ಟಕ್ಕೆ ಕೊಂಡೊಯ್ದ ಸಿದ್ದರಾಮಯ್ಯ: ನಡ್ಡಾ

**ತುಮಕೂರು:** ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ನಾಯಿಗೆ ಹೋಲಿಸುವ ಮೂಲಕ ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ರಾಜಕಾರಣವನ್ನು ಕೀಳು ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಇದರಿಂದ ಬೇಸರವಾಗಿದೆ’ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹೇಳಿದರು.

ನಗರದಲ್ಲಿ ಗುರುವಾರ ಬಿಜೆಪಿ ಹಮ್ಮಿಕೊಂಡಿದ್ದ ಶಕ್ತಿ ಕೇಂದ್ರದ ಪ್ರಮುಖರು ಹಾಗೂ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ಪ್ರಧಾನಿ ಮೋದಿ ದೇಶದ ರಾಜನೀತಿ, ರಾಜಕಾರಣವನ್ನು ಮೇಲು ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಆದರೆ, ಸಿದ್ದರಾಮಯ್ಯ ರಾಜಕಾರಣವನ್ನು ಕೀಳು ಮಟ್ಟಕ್ಕೆ ಇಳಿಸಿರುವುದು ದುಃಖಕರ ಸಂಗತಿ’ ಎಂದರು.

### ‘ಸಿದ್ದರಾಮಯ್ಯ ನಿಜವಾದ ಪಪ್ಪಿ’

**ರಾಮನಗರ:** ‘ಸಿದ್ದರಾಮಯ್ಯ ಅವರೇ ನಿಜವಾದ ಪಪ್ಪಿ’ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಲೇವಡಿ ಮಾಡಿದರು. ‘ಆತ್ಮಸಾಕ್ಷಿ ಇರುವ ಯಾರೇ ಆದರೂ ಒಂದು ಕ್ಷಣವೂ ಕಾಂಗ್ರೆಸ್ ನಲ್ಲಿ ಇರುವುದಿಲ್ಲ. ಇವರಿಗೆ ಆತ್ಮಸಾಕ್ಷಿ ಇದ್ದರೆ ಕೂಡಲೇ ರಾಜೀನಾಮೆ ನೀಡಬೇಕು’ ಎಂದರು.

### ಎಲ್ಲ ಸಮುದಾಯದವರನ್ನು ಯಾತ್ರೆಗೆ ಕಳುಹಿಸಿ: ಕಾಂಗ್ರೆಸ್ ಆಗ್ರಹ

## ಓಂ ಶಕ್ತಿ ಯಾತ್ರೆಗೆ ಈಶ್ವರಪ್ಪ ನೆರವು

• ವೆಂಕಟೇಶ್ ಜಿ.ಎಚ್

**ಶಿವಮೊಗ್ಗ:** ಶಾಸಕ ಕೆ.ಎಸ್. ಈಶ್ವರಪ್ಪ ನೆರವಿನಿಂದ ಶಿವಮೊಗ್ಗದ 6,251 ಮಂದಿ ತಮಿಳು ಸಮುದಾಯದವರು ಶುಕ್ರವಾರ ತಮಿಳುನಾಡಿನ ಮೇಲ್ ಮರುವತ್ತೂರಿನ ಓಂ ಶಕ್ತಿ ಕ್ಷೇತ್ರಕ್ಕೆ ಯಾತ್ರೆ ತೆರಳಿದರು.

ಇಲ್ಲಿನ ಶರಾವತಿ ನಗರದಲ್ಲಿರುವ ಶುಭಮಂಗಳ ಕಲ್ಯಾಣ ಮಂಟಪದ ಆವರಣದಿಂದ ಯಾತ್ರಾರ್ಥಿಗಳನ್ನು ಹೊತ್ತ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 112 ಬಸ್‌ಗಳು ತಮಿಳುನಾಡಿನತ್ತ ಸಾಗಿದವು.

ವಿನೋಬ ನಗರದ ಫ್ರೀಡಂ ಪಾರ್ಕ್‌ನಲ್ಲಿ ಬುಧವಾರ ರಾತ್ರಿ ಓಂ ಶಕ್ತಿ ದೇವಸ್ಥಾನ ಟ್ರಸ್ಟ್ ಆಯೋಜಿಸಿದ್ದ ಧಾರ್ಮಿಕ ಕಾರ್ಯಕ್ರಮದಲ್ಲಿ ಶಾಸಕ ಕೆ.ಎಸ್. ಈಶ್ವರಪ್ಪ ಹಾಗೂ ಚಿತ್ರದುರ್ಗ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಯಾತ್ರೆಗೆ ಚಾಲನೆ ನೀಡಿದರು.

**ಏಳು ದಿನಗಳ ಯಾತ್ರೆ:** ಶಿವಮೊಗ್ಗದಿಂದ ಹೊರಟ ಭಕ್ತರು ಶ್ರೀರಂಗಪಟ್ಟಣ, ನಂಜನಗೂಡು, ತಮಿಳುನಾಡಿನ ರಾಮೇಶ್ವರಂ ಸೇರಿ 30ಕ್ಕೂ ಹೆಚ್ಚು ದೇವಸ್ಥಾನಗಳ ದರ್ಶನ ಮಾಡಲಿದ್ದಾರೆ. ಒಟ್ಟು 6 ರಾತ್ರಿ, 7 ಹಗಲು ಈ ಯಾತ್ರೆ ನಡೆಯಲಿದೆ. ಯಾತ್ರೆಗೆ ಹೊರಟವರಲ್ಲಿ ಮಹಿಳೆಯರು, ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿದ್ದರು.

‘ಓಂಶಕ್ತಿ ಕ್ಷೇತ್ರಕ್ಕೆ ಈ ಮೊದಲು ಸ್ವಂತ ಹಣದಲ್ಲಿ ಹೋಗಿದ್ದೇನೆ. ಆದರೆ, ಈ ಬಾರಿ ಈಶ್ವರಪ್ಪ ಅವರ ನೆರವಿನಿಂದ ಕುಟುಂಬ ಸಮೇತ ಹೊರಟಿದ್ದೇನೆ. ಇಷ್ಟೊಂದು ಜನರನ್ನು ಕಳುಹಿಸುವುದು ಸಣ್ಣ ಮಾತಲ್ಲ. ಹಣ ಇದ್ದವರೆಲ್ಲರೂ ಈ ಕೆಲಸ ಮಾಡುವುದಿಲ್ಲ’ ಎಂದು ಯಾತ್ರೆಗೆ ಹೊರಟಿದ್ದ ಶಿವಮೊಗ್ಗದ ಗೋಪಾಳ ನಿವಾಸಿ, ಮೇಸ್ತ್ರಿ ಕೆಲಸ ಮಾಡುವ ಕಾರ್ತಿಕ್ ಜಯರಾಮ್ ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ತಿಕ್ ತಾಯಿ ಉಮ್ಮಣಮ್ಮ ಅವರಲ್ಲೂ ಯಾತ್ರೆಗೆ ಹೊರಟ ಸಂಭ್ರಮ ಮನೆಮಾಡಿತ್ತು.

ಕೆ.ಎಸ್. ಈಶ್ವರಪ್ಪ ಅವರು ಸಹ ಕುಟುಂಬ ಸಮೇತ ಜ. 8ರಂದು ಮೇಲ್‌ಮರುವತ್ತೂರಿಗೆ ತೆರಳಿ ಪೂಜೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

### ‘ಪೂರಾ ಹಣ ನಾನು ಭರಿಸಲ್ಲ’

‘ಚುನಾವಣಾ ರಾಜಕಾರಣಕ್ಕೂ ಇದಕ್ಕೂ ಸಂಬಂಧವಿಲ್ಲ. 14 ವರ್ಷಗಳಿಂದ ಈ ಕೆಲಸ ಮಾಡುತ್ತಿದ್ದೇನೆ. ಯಾತ್ರೆಗೆ ಪೂರಾ ಹಣ ನಾನು ಕೊಡುತ್ತಿಲ್ಲ. ಮಹಿಳೆಯರು ಪ್ರತಿ ತಿಂಗಳು ಹಣ ಉಳಿಸಿ ವರ್ಷಕ್ಕೊಮ್ಮೆ ಯಾತ್ರೆ ಮಾಡುತ್ತಾರೆ. ಅವರಿಗೆ ಕಡಿಮೆ ಬಿದ್ದ ಹಣವನ್ನು ನಾನು ಭರಿಸುತ್ತೇನೆ’ ಎಂದು ಶಾಸಕ ಕೆ.ಎಸ್. ಈಶ್ವರಪ್ಪ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಧರ್ಮ ಜಾಗೃತಿ ಕಾರ್ಯಕ್ಕೆ ಈ ಕೆಲಸ ಮಾಡುತ್ತಿದ್ದೇನೆ. ತಮಿಳರು ಮಾತ್ರವಲ್ಲ; ಎಲ್ಲಾ ಜಾತಿಯವರೂ ಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ’ ಎಂದರು.

### ‘ಎಲ್ಲ ಜಾತಿ– ಧರ್ಮದವರನ್ನು ಕಳುಹಿಸಿ’

‘ಈಶ್ವರಪ್ಪ ಮತದಾರರನ್ನು ತೀರ್ಥಕ್ಷೇತ್ರಕ್ಕೆ ಕಳುಹಿಸುವುದಕ್ಕೆ ನಮ್ಮ ವಿರೋಧವಿಲ್ಲ. ಹೀಗೆ ಕಳುಹಿಸುವುದರಿಂದ ಅವರಿಗೆ ಒಳ್ಳೆಯದಾಗುವುದಿದ್ದರೆ ಶಿವಮೊಗ್ಗದ ಎಲ್ಲ ಜಾತಿ-ಧರ್ಮದವರನ್ನು ಅವರ ನಂಬುಗೆಯ ಧರ್ಮಕ್ಷೇತ್ರಗಳಿಗೆ ಕಳುಹಿಸಿಕೊಡಲಿ’ ಎಂದು ಕಾಂಗ್ರೆಸ್ ಸೇವಾ ದಳದ ಜಿಲ್ಲಾ ಘಟಕದ ಅಧ್ಯಕ್ಷ ವೈ.ಎಚ್. ನಾಗರಾಜ್ ಒತ್ತಾಯಿಸುತ್ತಾರೆ.

## ಚಿತಾಭಸ್ಮ: ಕೂಡಲಸಂಗಮ, ಗೋಕರ್ಣದಲ್ಲಿ 8ರಂದು ವಿಸರ್ಜನೆ

ಪ್ರಜಾವಾಣಿ ವಾರ್ತೆ

**ವಿಜಯಪುರ:** ಜ್ಞಾನಯೋಗಾಶ್ರಮದ ಸಿದ್ದೇಶ್ವರ ಶ್ರೀಗಳ ಚಿತಾಭಸ್ಮವನ್ನು ಗುರುವಾರ ಮುಂಜಾನೆ ಎರಡು ಮಡಿಕೆಗಳಲ್ಲಿ ಸಂಗ್ರಹಿಸಲಾಯಿತು.

ಜ್ಞಾನಯೋಗಾಶ್ರಮದ ಅಧ್ಯಕ್ಷ ಬಸವಲಿಂಗ ಶ್ರೀಗಳ ನೇತೃತ್ವದಲ್ಲಿ ಆಶ್ರಮದ ಶಿಷ್ಯರು ಚಿತಾಭಸ್ಮ ಸಂಗ್ರಹಕ್ಕೂ ಮೊದಲು ನೀರು, ಹಾಲು, ತುಪ್ಪ ಹಾಕಿ ಅಗ್ನಿಯನ್ನು ಆರಿಸಿ, ಆರತಿ ಬೆಳಗಿ ಚಿತಾಭಸ್ಮವನ್ನು ಸಂಗ್ರಹಿಸಿದರು.

ಶ್ರೀಗಳ ಅಂತಿಮ ಇಚ್ಛೆಯಂತೆ ಅವರ ಅಸ್ಥಿ ಮತ್ತು ಚಿತಾಭಸ್ಮವನ್ನು ಬಾಗಲಕೋಟೆ ಜಿಲ್ಲೆಯ ಸುಕ್ಷೇತ್ರ ಕೂಡಲಸಂಗಮದಲ್ಲಿ ಕೃಷ್ಣೆಯಲ್ಲಿ ಹಾಗೂ ಉತ್ತರಕನ್ನಡ ಜಿಲ್ಲೆ ಗೋಕರ್ಣದ ಬಳಿ ಅರಬ್ಬಿ ಸಮುದ್ರದಲ್ಲಿ ಜನವರಿ 8ರಂದು ವಿಸರ್ಜನೆ ಮಾಡಲು ನಿರ್ಧರಿಸಲಾಗಿದೆ ಎಂದು ಆಶ್ರಮದ ಅಧ್ಯಕ್ಷ ಬಸವಲಿಂಗ ಸ್ವಾಮೀಜಿ ತಿಳಿಸಿದರು.

ಜ.8 ರಂದು ಬೆಳಿಗ್ಗೆ 7ಕ್ಕೆ ಕೂಡಲಸಂಗಮದಲ್ಲಿ ಮೊದಲಿಗೆ ಅಸ್ಥಿ ವಿಸರ್ಜನೆ ಮಾಡಿದ ಬಳಿಕ ಅಲ್ಲಿಂದ ಹೊರಟು ಗೋಕರ್ಣದಲ್ಲಿ ಅದೇ ದಿನ ಸಂಜೆ 5ಕ್ಕೆ ಸಮುದ್ರದಲ್ಲಿ ಪೂಜೆ ಸಲ್ಲಿಸಿ ವಿಸರ್ಜನೆ ಮಾಡಲು ನಿರ್ಧರಿಸಲಾಗಿದೆ ಎಂದರು.

‘ಶ್ರೀಗಳ ಚಿತಾಭಸ್ಮವನ್ನು ಈ ಮೊದಲು ನದಿ, ಸಮುದ್ರ ಸೇರಿದಂತೆ ಐದು ಕಡೆ ವಿಸರ್ಜಿಸಲಾಗುವುದು ಎಂದು ಆಶ್ರಮದಿಂದ ತಿಳಿಸಲಾಗಿತ್ತು. ಆದರೆ, ಇದೀಗ ಎರಡು ಕಡೆ ಮಾತ್ರ ಚಿತಾಭಸ್ಮವನ್ನು ವಿಸರ್ಜಿಸಲು ನಿರ್ಧರಿಸಲಾಗಿದೆ’ ಎಂದರು.

ಶ್ರೀಗಳ ಅಂತಿಮ ಯಾತ್ರೆ, ಅಂತಿಮ ಸಂಸ್ಕಾರವನ್ನು ವ್ಯವಸ್ಥಿತವಾಗಿ, ಅಚ್ಚುಕಟ್ಟಾಗಿ ನಡೆಯಲು ಸಹಕರಿಸಿದ ರಾಜ್ಯ ಸರ್ಕಾರ, ಜಿಲ್ಲಾಡಳಿತ, ಜನ ಪ್ರತಿನಿಧಿಗಳು, ಸಂಘ–ಸಂಸ್ಥೆಗಳಿಗೆ ಹಾಗೂ ಭಕ್ತರಿಗೆ ಆಶ್ರಮದ ವತಿಯಿಂದ ಕೃತಜ್ಞತೆ ಸಲ್ಲಿಸಿದರು.

ಗುರುವಾರವೂ ಸಹಸ್ರಾರು ಭಕ್ತರು ತಂಡೋಪತಂಡವಾಗಿ ಆಶ್ರಮಕ್ಕೆ ಭೇಟಿ ನೀಡಿದರು. ಶ್ರೀಗಳ ಅಂತ್ಯಕ್ರಿಯೆ ನಡೆದ ಸ್ಥಳದ ದರ್ಶನ ಮಾಡಿ ನಮಿಸಿ, ಕಣ್ಣೀರಾದರು.

### ಮೊದಲ ಬಾರಿ ಹಕ್ಕು ಪಡೆದವರು 7 ಲಕ್ಷ

## 5 ಕೋಟಿ ದಾಟಿದ ಮತದಾರರ ಸಂಖ್ಯೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇದೇ ವರ್ಷದ ಏಪ್ರಿಲ್–ಮೇ ತಿಂಗಳಿನಲ್ಲಿ ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ಹೊಸ ಸರ್ಕಾರವನ್ನು ಚುನಾಯಿಸುವ ಅರ್ಹ ಮತದಾರರ ಸಂಖ್ಯೆ ಐದು ಕೋಟಿ ದಾಟಿದೆ.

224 ವಿಧಾನಸಭಾ ಕ್ಷೇತ್ರಗಳ ಪೈಕಿ 221 ಕ್ಷೇತ್ರಗಳ ಮತದಾರರ ಅಂತಿಮ ಪಟ್ಟಿಯನ್ನು ಚುನಾವಣಾ ಆಯೋಗ ಪ್ರಕಟಿಸಿದೆ. 57,388 ಮತಗಟ್ಟೆಗಳನ್ನು ಗುರುತಿಸಲಾಗಿದ್ದು, 5,05,48,553 ಮಂದಿ ಮತದಾನದ ಅರ್ಹತೆ ಪಡೆದಿದ್ದಾರೆ.

ಶಿವಾಜಿ ನಗರ, ಚಿಕ್ಕಪೇಟೆ ಹಾಗೂ ಮಹದೇವಪುರ ವಿಧಾನಸಭಾ ಕ್ಷೇತ್ರಗಳ ಪಟ್ಟಿಯನ್ನು ಜ.15ರ ಒಳಗೆ ಅಂತಿಮಗೊಳಿಸಲಾಗುವುದು ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.



ಪಟ್ಟಿಯಲ್ಲಿ 2,54,49,725 ಪುರುಷ, 2,50,94,326 ಮಹಿಳೆ, 47,814 ಸೇವಾ ಮತದಾರರು ಹಾಗೂ 4,502 ಲಿಂಗತ್ವ ಅಲ್ಪಸಂಖ್ಯಾತರು ಇದ್ದಾರೆ.

ಆಯೋಗ ಕಳೆದ ನವೆಂಬರ್‌ನಲ್ಲಿ ಪ್ರಕಟಿಸಿದ ಕರಡು ಮತದಾರರ ಪಟ್ಟಿಗಿಂತ 6,13,823 ಹೆಚ್ಚುವರಿ ಮತದಾರರು ಅಂತಿಮ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಮತದಾರರು ಜಾಲತಾಣ https://ceo.karnataka.gov.in ನಲ್ಲಿ ಪರಿಶೀಲಿಸಬಹುದು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ಅತಿ ಹೆಚ್ಚು ಅಂದರೆ 6,50,532 ಹಾಗೂ ಶೃಂಗೇರಿ ವಿಧಾನಸಭಾ ಕ್ಷೇತ್ರ ಅತಿ ಕಡಿಮೆ ಅಂದರೆ 1,66,521 ಮತದಾರರನ್ನು ಹೊಂದಿದೆ.

**ನಾಮಪತ್ರ ಸಲ್ಲಿಕೆವರೆಗೂ ಅವಕಾಶ:** ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಲು ನಾಮಪತ್ರ ಸಲ್ಲಿಕೆ ಆರಂಭಕ್ಕೆ 10 ದಿನ ಇರುವವರೆಗೂ ಅವಕಾಶ ನೀಡಲಾಗುವುದು. ಮತದಾನ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಮಾಹಿತಿ ನೀಡಿದರು.

**7 ಲಕ್ಷ ಹೊಸ ಮತದಾರರು:** 18 ವರ್ಷ ತುಂಬಿದ 7,01,243 ಮತದಾರರು ಇದೇ ಮೊದಲ ಬಾರಿಗೆ ಮತದಾನದ ಹಕ್ಕು ಪಡೆದಿದ್ದಾರೆ. ಅವರಲ್ಲಿ 3.38 ಲಕ್ಷ ಯುವಕ, 3.13 ಲಕ್ಷ ಯುವತಿಯರು ಇದ್ದಾರೆ. 17 ವರ್ಷ ಮೇಲ್ಪಟ್ಟ 25,299 ಮತದಾರರು ಮುಂಗಡ ನೋಂದಣಿ ಮಾಡಿಕೊಂಡಿದ್ದಾರೆ. ಮೊದಲು ಜನವರಿ 1ಕ್ಕೆ 18 ವರ್ಷ ತುಂಬಿದವರು ನೋಂದಣಿ ಮಾಡಿಕೊಳ್ಳಲು ಅವಕಾಶ ಇತ್ತು. ಈಗ ನಿಯಮ ಸಡಿಲಿಸಲಾಗಿದೆ. ದಾಖಲೆಗಳ ಪ್ರಕಾರ ಜನವರಿ 1ಕ್ಕೆ 18 ವರ್ಷ ತುಂಬಿದ 9.80 ಲಕ್ಷ ಜನರು ಇದ್ದು, ಉಳಿದವರ ಸೇರ್ಪಡೆಗೆ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ವಿವರ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿಗಳಾದ ಆರ್.ವೆಂಕಟೇಶ್, ರಾಜೇಂದ್ರ ಚೋಳನ್ ಇದ್ದರು.

### 6.18 ಲಕ್ಷ ಹೆಸರು ಪಟ್ಟಿಯಿಂದ ಹೊರಗೆ

ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದ 2,62,854 ಮೃತ ಮತದಾರರು ಹಾಗೂ ಈಗಾಗಲೇ ಬೇರೆ ಸ್ಥಳಗಳಿಗೆ ವರ್ಗಾಯಿಸಿಕೊಂಡಿರುವ, ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಹೆಸರಿದ್ದ ಒಟ್ಟು 6,18,965 ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ.

## ದಿವ್ಯಾ, ಮೇಳಕುಂದಿ ಸೇರಿ 27 ಜನರಿಗೆ ಜಾಮೀನು

ಪ್ರಜಾವಾಣಿ ವಾರ್ತೆ

**ಕಲಬುರಗಿ:** ಪಿಎಸ್‌ಐ ನೇಮಕಾತಿ ಅಕ್ರಮದ ಪ್ರಮುಖ ಆರೋಪಿಗಳಾದ ಬಿಜೆಪಿ ನಾಯಕಿ ದಿವ್ಯಾ ಹಾಗರಗಿ, ಡಿವೈಎಸ್ಪಿಯಾಗಿದ್ದ ಮಲ್ಲಿಕಾರ್ಜುನ ಸಾಲಿ, ಕೆಎಸ್‌ಆರ್‌ಪಿ ಸಹಾಯಕ ಕಮಾಂಡೆಂಟ್ ಆಗಿದ್ದ ವೈಜನಾಥ ಕಲ್ಯಾಣಿ ರೇವೂರ, ನೀರಾವರಿ ನಿಗಮದ ಎಂಜಿನಿಯರ್ ಆಗಿದ್ದ ಮಂಜುನಾಥ ಮೇಳಕುಂದಿ ಸೇರಿದಂತೆ 27 ಆರೋಪಿಗಳಿಗೆ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಗುರುವಾರ ಜಾಮೀನು ಮಂಜೂರು ಮಾಡಿದೆ.

ಕಳೆದ ನವೆಂಬರ್ 19ರಂದು ಜಾಮೀನು ಅರ್ಜಿಯ ವಿಚಾರಣೆ ನಡೆಸಿದ್ದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಕೃಷ್ಣಾಜಿ ಪಾಟೀಲ ಅವರು ಜಾಮೀನು ಕುರಿತ ಆದೇಶವನ್ನು ಗುರುವಾರಕ್ಕೆ ಕಾಯ್ದಿರಿಸಿದ್ದರು.

ದಿವ್ಯಾ ಹಾಗರಗಿ ಎಂಟು ತಿಂಗಳಿಂದ ಜೈಲಿನಲ್ಲಿದ್ದರು. ಇತ್ತೀಚೆಗೆ ಅವರ ಪತಿ ರಾಜೇಶ್ ಹಾಗರಗಿ, ಪ್ರಕರಣದ ಪ್ರಮುಖ ಆರೋಪಿ ಆರ್.ಡಿ.ಪಾಟೀಲ ಸಹ ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು.

ನಗರದ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಬ್ಲೂಟೂತ್ ನೆರವಿನಿಂದ ಉತ್ತರ ಹೇಳಿಸುವ ಮೂಲಕ ಹಾಗೂ ಉತ್ತರ ಪತ್ರಿಕೆಯ ಒಎಂಆರ್ ಶೀಟ್‌ನಲ್ಲಿ ಉತ್ತರ ಬರೆಸುವ ಮೂಲಕ ಅಕ್ರಮ ಎಸಗಿರುವ ಬಗ್ಗೆ ದೂರು ದಾಖಲಾಗಿತ್ತು.

ಶಾಲೆಯ ಪ್ರಾಂಶುಪಾಲ ಕಾಶಿನಾಥ ಚಿಲ್ಲ, ಶಿಕ್ಷಕರು ಹಾಗೂ ಅಭ್ಯರ್ಥಿಗಳಿಗೆ ಸಹ ಷರತ್ತುಬದ್ಧ ಜಾಮೀನು ಮಂಜೂರಾಗಿದೆ.

ಶುಕ್ರವಾರ, ಜನವರಿ 6, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಕುಶಲವೇ?**

ಕೋಲ್ಕತ್ತದಲ್ಲಿ ಗುರುವಾರ ನಡೆದ 65ನೇ ಅಖಿಲ ಭಾರತ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಮಾವೇಶದ ಉದ್ಘಾಟನೆ ಸಮಾರಂಭದಲ್ಲಿ ನಟ ವಿದ್ಯಾಬಾಲನ್ ಪಾಲ್ಗೊಂಡಿದ್ದರು



## ಗ್ರಾಹಕರ ಹೆಸರಿನಲ್ಲಿ ₹ 2.75 ಕೋಟಿ ಅಕ್ರಮ ವಹಿವಾಟು

ಬೆಂಗಳೂರು: ಗ್ರಾಹಕರ ಖಾತೆಗಳ ಮೂಲಕ ₹ 2.75 ಕೋಟಿ ಅಕ್ರಮ ವಹಿವಾಟು ನಡೆಸಿ ವಂಚಿಸಿರುವ ಆರೋಪದಡಿ ಐಡಿಬಿಐ ಬ್ಯಾಂಕ್ ವ್ಯವಸ್ಥಾಪಕಿ ಸಜಿಲಾ ಗುರುಮೂರ್ತಿ ವಿರುದ್ಧ ಉಪ್ಪಾರಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಬ್ಯಾಂಕ್‌ನ ಗಾಂಧಿನಗರ ಶಾಖೆಯ ಮುಖ್ಯಸ್ಥ ವೈ.ಎಸ್. ಪ್ರಮೋದ್‌ಕುಮಾರ್ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಸಾಜಿಲಾ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗಾಂಧಿನಗರ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದ ಸಾಜಿಲಾ, 2022ರ ಮಾ. 23ರಿಂದ ಡಿ. 12ರವರೆಗೆ ಗ್ರಾಹಕರ ಖಾತೆಗಳ ಮೂಲಕ ಅಕ್ರಮ ವಹಿವಾಟು ನಡೆಸಿದ್ದಾರೆ. ಇತ್ತೀಚೆಗೆ ಲೆಕ್ಕ ಪರಿಶೋಧನೆ ನಡೆಸಿದಾಗ, ಕೃತ್ಯ ಪತ್ತೆಯಾಗಿದೆ. ದೂರುದಾರ ಲೆಕ್ಕದ ವರದಿಯನ್ನೂ ನೀಡಿದ್ದಾರೆ' ಎಂದು ತಿಳಿಸಿವೆ.

### 25 ವಿಧಾನಸಭೆ ಕ್ಷೇತ್ರಗಳಲ್ಲಿ 82 ಲಕ್ಷಕ್ಕೂ ಹೆಚ್ಚು ಮತದಾರರು; 7,721 ಮತಗಟ್ಟೆ

# 80 ಸಾವಿರ ಮತದಾರರು ಹೆಚ್ಚಳ

ಪ್ರಜಾವಾಣಿ ವಾರ್ತೆ

**25 ವಿಧಾನಸಭೆ ಕ್ಷೇತ್ರಗಳ ಮತದಾರರ ವಿವರ**

| 82,29,375 | 81,48,989 | 84,94,461 |
|---|---|---|
| ಜ.5, 2023 | ನ.9, 2022 (ಕರಡು) | ಜ.13, 2022 |

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 25 ವಿಧಾನಸಭೆ ಕ್ಷೇತ್ರಗಳ ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಾಗಿದ್ದು, 82 ಲಕ್ಷಕ್ಕೂ ಅಧಿಕ ಮತದಾರರಿದ್ದಾರೆ. ಕರಡು ಪಟ್ಟಿಗೆ ಹೋಲಿಸಿದರೆ, 80 ಸಾವಿರ ಮತದಾರರು ಹೆಚ್ಚಾಗಿದ್ದಾರೆ.

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ-2023ರ ಅಂತಿಮ ಮತದಾರರ ಪಟ್ಟಿಯನ್ನು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಗುರುವಾರ ಪ್ರಕಟಿಸಿದರು. ಶಿವಾಜಿನಗರ, ಚಿಕ್ಕಪೇಟೆ ಹಾಗೂ ಮಹದೇವಪುರ ವಿಧಾನಸಭೆ ಕ್ಷೇತ್ರಗಳ ಮತದಾರರ ಪಟ್ಟಿ ಶೇ 100ರಷ್ಟು ಪರಿಷ್ಕರಣೆಯಾಗುತ್ತಿರುವುದರಿಂದ ಅದು ಜ.15ರಂದು ಪ್ರಕಟವಾಗಲಿದೆ.

25 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 82,29,375 ಮತದಾರರಿದ್ದಾರೆ. ಅದರಲ್ಲಿ 42,65,140 ಪುರುಷರು, 39,62,712 ಮಹಿಳೆಯರಿದ್ದಾರೆ. 80 ಸಾವಿರ ಯುವಜನರಿದ್ದರೂ 18 ರಿಂದ 19 ವರ್ಷದೊಳಗಿನವರಲ್ಲಿ 48,542 ಜನ ಮಾತ್ರ ಮತಪಟ್ಟಿಯಲ್ಲಿದ್ದಾರೆ. ಮಾರ್ಚ್‌ನಲ್ಲಿ 18 ವರ್ಷ ತುಂಬುವವರು ಕೂಡ ನೋಂದಣಿ ಮಾಡಿಸಿಕೊಳ್ಳಬಹುದು ಎಂದರು.



1.5 ಲಕ್ಷ ಅಂಗವಿಕಲರ ಪೈಕಿ 34,941 ಮಂದಿ ಪಟ್ಟಿಯಲ್ಲಿದ್ದು, ಪ್ರತಿ ವಾರ್ಡ್‌ನಲ್ಲಿ ಅಂಗವಿಕಲರ ಕಲ್ಯಾಣ ಇಲಾಖೆಯ ವತಿಯಿಂದ ನೋಡಲ್ ಅಧಿಕಾರಿಯನ್ನು ನೇಮಿಸಿ ಉಳಿದವರನ್ನು ಪಟ್ಟಿಗೆ ಸೇರಿಸಲು ಅಭಿಯಾನ ನಡೆಸಲಾಗುತ್ತದೆ. 9,182 ಲಿಂಗತ್ವ ಅಲ್ಪಸಂಖ್ಯಾತರ ಪೈಕಿ 9,085 ಮಂದಿ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ. ಉಳಿದವರನ್ನು ಸೇರಿಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಅಭಿಯಾನ ನಡೆಸಲಾಗುತ್ತದೆ. ಶಾಲೆ–ಕಾಲೇಜು ಸೇರಿ 2,929 ಚುನಾವಣಾ ಸಾಕ್ಷರತಾ ಕ್ಲಬ್‌ಗಳನ್ನು ಸ್ಥಾಪಿಸಲಾಗಿದ್ದು, ಜಾಗೃತಿ ಮೂಡಿಸಲಾಗುತ್ತಿದೆ. 7,721 ಮತಗಟ್ಟೆಗಳಿವೆ. ಒಟ್ಟಾರೆ ಜನಸಂಖ್ಯೆಗೆ ಹೋಲಿಸಿದರೆ ಶೇ 55.47ರಷ್ಟು ಮಾತ್ರ ಮತದಾರರಿದ್ದಾರೆ ಎಂದು ಮಾಹಿತಿ ನೀಡಿದರು.

ಅಂತಿಮ ಮತದಾರರ ಪಟ್ಟಿ ವೆಬ್‌ಸೈಟ್ http://www.ceokarnataka.kar.nic.in ಮತ್ತು www.bbmp.gov.in ನಲ್ಲಿ ಪ್ರಕಟಿಸಲಾಗಿದೆ. ಮತದಾರರ ಪಟ್ಟಿ ನಿರಂತರ ಪರಿಷ್ಕರಣೆಯಲ್ಲಿರಲಿದ್ದು, ಸೇರ್ಪಡೆ ತಿದ್ದುಪಡಿ, ಸ್ಥಳಾಂತರ ಹಾಗೂ ಮತದಾರರ ಪಟ್ಟಿಯಿಂದ ತೆಗೆದುಹಾಕುವಿಕೆ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಈ ಪೈಕಿ ಮೊಬೈಲ್ ತಂತ್ರಾಂಶ ವೋಟರ್ ಹೆಲ್ಪ್‌ಲೈನ್ ಆ್ಯಪ್, ಪೋರ್ಟಲ್ www.nvsp.in, 1950 ಸಹಾಯವಾಣಿ, www.voterportal.eci.gov.in ಮೂಲಕ ಅರ್ಜಿ ಸಲ್ಲಿಸಬಹುದು ಎಂದರು.

25 ವಿಧಾನಸಭೆ ಕ್ಷೇತ್ರಗಳಲ್ಲಿ ಬೆಂಗಳೂರು ದಕ್ಷಿಣದಲ್ಲಿ ಅತಿ ಹೆಚ್ಚು ಮತದಾರರಿದ್ದು, ರಾಜಾಜಿನಗರದಲ್ಲಿ ಅತಿ ಕಡಿಮೆ ಮತದಾರರಿದ್ದಾರೆ. ಬೆಂಗಳೂರು ದಕ್ಷಿಣದಲ್ಲಿ ಕರಡು ಪಟ್ಟಿಯಲ್ಲಿ ಇದ್ದುದಕ್ಕಿಂತ ಅತಿ ಹೆಚ್ಚು (9,066) ಮತದಾರರು ಸೇರ್ಪಡೆಯಾಗಿದ್ದಾರೆ.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಉಜ್ವಲ್ ಕುಮಾರ್ ಘೋಷ್, ಹೆಚ್ಚುವರಿ ಜಿಲ್ಲಾ ಚುನಾವಣಾ ಅಧಿಕಾರಿಗಳಾದ ದಯಾನಂದ್, ಡಾ. ಹರೀಶ್ ಕುಮಾರ್, ಜಗದೀಶ್ ನಾಯ್ಕ್, ವೆಂಕಟಾಚಲಪತಿ, ಚುನಾವಣಾ ವಿಭಾಗದ ಸಹಾಯಕ ಆಯುಕ್ತ ಉಮೇಶ್ ಇದ್ದರು.

**ಮತದಾರರ ವಿವರ**

| ಕ್ಷೇತ್ರ | ಮತದಾರರು |
|---|---|
| ರಾಜರಾಜೇಶ್ವರಿನಗರ | 4,62,423 |
| ಶಾಂತಿನಗರ | 2,12,740 |
| ಗಾಂಧಿನಗರ | 2,19,934 |
| ರಾಜಾಜಿನಗರ | 2,01,287 |
| ಚಾಮರಾಜಪೇಟೆ | 2,20,337 |
| ಕೆ.ಆರ್.ಪುರ | 4,87,546 |
| ಮಹಾಲಕ್ಷ್ಮಿ ಲೇಔಟ್ | 2,77,043 |
| ಮಲ್ಲೇಶ್ವರ | 2,16,774 |
| ಹೆಬ್ಬಾಳ | 2,69,609 |
| ಪುಲಕೇಶಿನಗರ | 2,32,154 |
| ಸರ್ವಜ್ಞನಗರ | 3,52,977 |
| ಸಿ.ವಿ.ರಾಮನ್‌ನಗರ | 2,63,367 |
| ಗೋವಿಂದರಾಜನಗರ | 2,81,098 |
| ವಿಜಯನಗರ | 2,90,082 |
| ಬಸವನಗುಡಿ | 2,21,654 |
| ಪದ್ಮನಾಭನಗರ | 2,69,297 |
| ಬಿಟಿಎಂ ಲೇಔಟ್ | 2,64,553 |
| ಜಯನಗರ | 2,01,625 |
| ಬೊಮ್ಮನಹಳ್ಳಿ | 4,32,752 |
| ಯಲಹಂಕ | 4,07,217 |
| ಬ್ಯಾಟರಾಯನಪುರ | 4,69,806 |
| ಯಶವಂತಪುರ | 5,15,716 |
| ದಾಸರಹಳ್ಳಿ | 4,32,751 |
| ಬೆಂಗಳೂರು ದಕ್ಷಿಣ | 6,50,532 |
| ಆನೇಕಲ್ | 3,76,101 |

## ಸುದ್ದಿ 2 ನಿಮಿಷ

### 'ಡಬಲ್ ಡೆಕ್ಕರ್ ಬಸ್, ಕೇಬಲ್ ಕಾರ್ ಆರಂಭಕ್ಕೆ ಚಿಂತನೆ'

ಬೆಂಗಳೂರು: ಮೆಟ್ರೊ ರೈಲಿಗೆ ಫೀಡರ್ ಸೇವೆಯಾಗಿ ಸಮೂಹ ಸಾರಿಗೆ ಉತ್ತೇಜಿಸಲು ಡಬಲ್ ಡೆಕ್ಕರ್ ಬಸ್, ಕೇಬಲ್ ಕಾರ್, ಪಾಡ್ ಟ್ಯಾಕ್ಸಿ ಪರಿಚಯಿಸುವ ಬಗ್ಗೆ ಆಲೋಚನೆ ನಡೆಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, 'ಈ ಯೋಜನೆಗಳ ಕಾರ್ಯಸಾಧ್ಯತೆ ಬಗ್ಗೆ ಅಧ್ಯಯನ ನಡೆಸಲು ತಜ್ಞರನ್ನು ನಿಯೋಜನೆ ಮಾಡಲು ತೀರ್ಮಾನಿಸಲಾಯಿತು. ನಗರದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಸಾಧ್ಯವಿರುವ ಕಡೆಗಳಲ್ಲಿ ಫ್ಲೈಓವರ್‌ಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿದೆ' ಎಂದರು.

**ಪೀಣ್ಯ ಮೇಲ್ಸೇತುವೆ ಶೀಘ್ರ ದುರಸ್ತಿ:** ತುಮಕೂರು ರಸ್ತೆ ಪೀಣ್ಯ ಬಳಿಯ ಶಿವಕುಮಾರಸ್ವಾಮಿ ಮೇಲ್ಸೇತುವೆ ದುರಸ್ತಿ ಕಾರ್ಯವನ್ನು ಆದಷ್ಟು ಬೇಗ ಆರಂಭಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು.

ನಿರ್ದಿಷ್ಟ ವಿನ್ಯಾಸ ರೂಪಿಸಿ ಅದಕ್ಕೆ ಅನುಗುಣವಾಗಿ ಕೂಡಲೇ ಕಾಮಗಾರಿ ಆರಂಭಿಸಲು ಸಚಿವರು ಅಧಿಕಾರಿಗಳಿಗೆ ತಿಳಿಸಿದ್ದಾರೆ ಎಂದರು.

### 20ರಿಂದ ಸಿರಿಧಾನ್ಯ ಅಂತರರಾಷ್ಟ್ರೀಯ ಮೇಳ




ಬೆಂಗಳೂರು: ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ ನಗರದ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಜ. 20ರಿಂದ 22ರವರೆಗೆ ನಡೆಯಲಿದೆ.

'ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ (ಕೆಪಿಪಿಇಸಿ) ಮತ್ತು ಅಂತರರಾಷ್ಟ್ರೀಯ ಸಾವಯವ ಕೃಷಿ ಸ್ಪರ್ಧಾತ್ಮಕ ಕೇಂದ್ರದ(ಐಸಿಸಿಒಎ) ಸಹಯೋಗದಲ್ಲಿ ಈ ಮೇಳ ಆಯೋಜಿಸಲಾಗುತ್ತಿದೆ. ಮೇಳದ ಅಂಗವಾಗಿ ಆಯೋಜಿಸಿರುವ ವಸ್ತುಪ್ರದರ್ಶನದಲ್ಲಿ 300ಕ್ಕೂ ಹೆಚ್ಚು ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ –ಸವಾಲುಗಳ ನಡುವೆ ಅವಕಾಶಗಳು ಕುರಿತು ಅಂತರರಾಷ್ಟ್ರೀಯ ಸಮ್ಮೇಳನ ಸಹ ಆಯೋಜಿಸಲಾಗಿದೆ. ಜತೆಗೆ, ಮೇಳದಲ್ಲಿ ಅಂತರರಾಷ್ಟ್ರೀಯ ಸಾವಯವ ಉತ್ಪನ್ನಗಳ ಕಂಪನಿಗಳು ಸಹ ಭಾಗವಹಿಸಲಿವೆ. ಕರ್ನಾಟಕ ಪೆವಿಲಿಯನ್‌ನಲ್ಲಿ ರಾಜ್ಯದ ಕೃಷಿ ನೀತಿಗಳು, ಕೃಷಿ ಪದ್ಧತಿಗಳು ಮತ್ತು ತಾಂತ್ರಿಕತೆಯನ್ನು ಪ್ರದರ್ಶಿಸಲಾಗುವುದು' ಎಂದರು. 'ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಪಾಲ್ಗೊಳ್ಳಲಿದ್ದಾರೆ' ಎಂದರು.

# 'ದಕ್ಲ ಕಥಾ' ನಾಟಕ ಪ್ರದರ್ಶನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಳಸಮುದಾಯಗಳ ಕುಲ ಪುರಾಣಗಳನ್ನು ಕಥಾವಸ್ತುವನ್ನಾಗಿ ಹೊಂದಿದ 'ದಕ್ಲ ಕಥಾ ದೇವಿ ಕಾವ್ಯ' ಎಂಬ ವಿಶಿಷ್ಟ ನಾಟಕದ ಪ್ರದರ್ಶನವನ್ನು ಇದೇ 7ರಂದು (ಶನಿವಾರ) ರಾತ್ರಿ 7ಕ್ಕೆ, ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಏರ್ಪಡಿಸಲಾಗಿದೆ.

ಪುರಾಣವನ್ನು ವರ್ತಮಾನದ ನೆಲೆಯಲ್ಲಿ ಕಲೆಗೆ ಒಗ್ಗಿಸುವ ಕೆಲಸ ಕನ್ನಡ ರಂಗಭೂಮಿಗೆ ಹೊಸದೇನಲ್ಲ. ಆದರೆ, ತಳಸಮುದಾಯಗಳ ಕುಲ ಪುರಾಣಗಳನ್ನು ನಾಟಕವಾಗಿ ಕಟ್ಟಿ, ಕುಣಿದ ಉದಾಹರಣೆಗಳು ಕನ್ನಡ ಶಿಷ್ಟ ರಂಗಪರಂಪರೆಯಲ್ಲಿ ವಿರಳ.



ಕೆ.ಬಿ. ಸಿದ್ದಯ್ಯ ಅವರ ಬದುಕನ್ನೂ, ಕಾವ್ಯವನ್ನೂ, ಬರಹವನ್ನೂ, ಅವುಗಳ ಜೀವಾಳವನ್ನೂ ಆಧಾರವಾಗಿಟ್ಟುಕೊಂಡು, ದಲಿತರ ಕುಲಪುರಾಣವನ್ನು ಈ ನಾಟಕದಲ್ಲಿ ಹೊಸದಾಗಿ ಕಾಣಿಸಲಾಗುತ್ತಿದೆ.

ಸಿದ್ದಯ್ಯ ಅವರ ಬಾಲ್ಯದ ಕಥನದೊಂದಿಗೆ ಆರಂಭವಾಗುವ ನಾಟಕ ದಕ್ಲ ದೇವಿ, ದಕ್ಲ, ದಕ್ಲನ ಎಡ-ಬಲ ಮಕ್ಕಳ ಕಥೆಗಳ ಮೂಲಕ ಹಾದು ಹೋಗುತ್ತದೆ. ಮನುಷ್ಯನನ್ನು ಮನುಷ್ಯನನ್ನಾಗಿ ಕಾಣಿಸುವಂತಹ ಬೆಳಕಿಗಾಗಿಯೂ ನಾಟಕ ಹಂಬಲಿಸುತ್ತದೆ. ಅರೆ, ತಮಟೆಗಳ ಕಂಪನ ಆರಂಭದಿಂದ ಕೊನೆಯವರೆಗೂ ಈ ಪ್ರಯೋಗದಲ್ಲಿ ಆವರಿಸಿಕೊಂಡು ನಾಟಕಕ್ಕೊಂದು ವಿಶಿಷ್ಟ ಅನುಭೂತಿ ನೀಡುತ್ತದೆ. ಲಕ್ಷ್ಮಣ ಕೆ.ಪಿ. ಅವರು ರಚಿಸಿ, ನಿರ್ದೇಶಿಸಿದ ಈ ನಾಟಕದಲ್ಲಿ ಕಲಾವಿದರಾದ ಬಿಂದು ರಕ್ಷಿದಿ, ರಮಿಕ ಚೈತ್ರ, ಸಂತೋಷ್ ದಿಂಡಗೂರು, ನರಸಿಂಹರಾಜು ಬಿ.ಕೆ., ಭರತ್ ಡಿಂಗ್ರಿ ಅಭಿನಯಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಅಪರಾಧ ತನಿಖೆ ಹಾಗೂ ಕಾರ್ಯಾಚರಣೆಯಲ್ಲಿ ಅತ್ಯುತ್ತಮ ಕೆಲಸ ಮಾಡಿದ್ದ ರಾಜ್ಯದ ಪೊಲೀಸ್ ಅಧಿಕಾರಿಗಳಿಗೆ ಬೆಂಗಳೂರಿನ ಕೋರಮಂಗಲದ ಕೆಎಸ್‌ಆರ್‌ಪಿ ಮೈದಾನದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 2018, 2019, 2020, 2021ನೇ ಸಾಲಿನ ಕೇಂದ್ರ ಗೃಹ ಸಚಿವರ ಪದಕ ಪ್ರದಾನ ಮಾಡಲಾಯಿತು. ಗೃಹಸಚಿವರ ಜೊತೆ ಪದಕ ಪುರಸ್ಕೃತರು ಫೋಟೊ ತೆಗೆಸಿಕೊಂಡರು. (ಕುಳಿತವರು ಎಡದಿಂದ) ಹಿರಿಯ ಅಧಿಕಾರಿಗಳಾದ ಸೌಮೇಂದ್ರ ಮುಖರ್ಜಿ, ಸೀಮಂತಕುಮಾರ್ ಸಿಂಗ್, ಪ್ರತಾಪ್ ರೆಡ್ಡಿ, ಪಿ.ಎಸ್. ಸಂಧು, ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಗೃಹ ಸಚಿವ ಆರಗ ಜ್ಞಾನೇಂದ್ರ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಪಿ. ರವೀಂದ್ರನಾಥ್, ಕಮಲ್ ಪಂತ್ ಹಾಗೂ ಎಂ.ಎನ್. ಅನುಚೇತ್ ಇದ್ದರು – ಪ್ರಜಾವಾಣಿ ಚಿತ್ರ

# ವಿಧಾನಸೌಧದಲ್ಲಿ ₹ 10 ಲಕ್ಷ ಜಪ್ತಿ: ಬಂಧನ

ಪ್ರಜಾವಾಣಿ ವಾರ್ತೆ



ಜೆ. ಜಗದೀಶ್

ಬೆಂಗಳೂರು: ವಿಧಾನಸೌಧಕ್ಕೆ ಬಂದಿದ್ದ ಲೋಕೋಪಯೋಗಿ ಇಲಾಖೆಯ ಕಿರಿಯ ಎಂಜಿನಿಯರ್ ಜೆ.ಜಗದೀಶ್ ಬ್ಯಾಗ್‌ನಲ್ಲಿ ₹ 10 ಲಕ್ಷ ಪತ್ತೆಯಾಗಿದ್ದು, ಪ್ರಕರಣ ಸಂಬಂಧ ಅವರನ್ನು ವಿಧಾನಸೌಧ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

'ಮಂಡ್ಯದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಜಗದೀಶ್, ಹಣವಿದ್ದ ಬ್ಯಾಗ್ ಸಮೇತ ಬುಧವಾರ ಸಂಜೆ 4.15ರ ಸುಮಾರಿಗೆ ವಿಧಾನಸೌಧದ ಒಳಗೆ ಹೋಗಲು ಪಶ್ಚಿಮ ಪ್ರವೇಶ ದ್ವಾರಕ್ಕೆ ಬಂದಿದ್ದರು. ಅವರನ್ನು ತಡೆದಿದ್ದ ಭದ್ರತಾ ಸಿಬ್ಬಂದಿ, ಬ್ಯಾಗ್ ಪರಿಶೀಲಿಸಿದಾಗ ಹಣ ಪತ್ತೆಯಾಗಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್ ಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

'ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದ ಭದ್ರತಾ ಸಿಬ್ಬಂದಿ, ಹಣದ ಸಮೇತ ಜಗದೀಶ್ ಅವರನ್ನು ವಿಧಾನಸೌಧ ಠಾಣೆ ಪೊಲೀಸರ ಸುಪರ್ದಿಗೆ ನೀಡಿದ್ದಾರೆ. ಯಾವುದೇ ದಾಖಲೆ ನೀಡದಿದ್ದರಿಂದ ಅಕ್ರಮವಾಗಿ ಹಣ ಸಾಗಿಸುತ್ತಿದ್ದ ಆರೋಪದಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಜಪ್ತಿ ಮಾಡಿದ ಹಣ ಯಾರಿಗೆ ಸೇರಿದ್ದು? ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದರು? ಎಂಬುದನ್ನು ತಿಳಿಯಲು ಆರೋಪಿಯನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗುವುದು' ಎಂದು ಹೇಳಿದರು.

**ನೋಟಿಸ್ ನೀಡಿ ವಿಚಾರಣೆ:** 'ಆರೋಪಿ ಜಗದೀಶ್ ಅವರನ್ನು ಬುಧವಾರ ಪ್ರಾಥಮಿಕ ವಿಚಾರಣೆಗೆ ಒಳಪಡಿಸಲಾಗಿತ್ತು. ಪುನಃ ವಿಚಾರಣೆಗೆ ಬರುವಂತೆ ಹೇಳಿ ಬಿಟ್ಟು ಕಳುಹಿಸಲಾಗಿತ್ತು. ಗುರುವಾರ ಅವರು ವಿಚಾರಣೆಗೆ ಬಂದಿದ್ದರು. ಆದರೆ, ಹಣದ ಬಗ್ಗೆ ಯಾವುದೇ ಮಾಹಿತಿ ನೀಡಲಿಲ್ಲ. ತನಿಖೆಗೂ ಸಹಕರಿಸಲಿಲ್ಲ. ಹೀಗಾಗಿ, ಅವರನ್ನು ಬಂಧಿಸಲಾಗಿದೆ. ಶುಕ್ರವಾರ ನ್ಯಾಯಾಧೀಶರ ಎದುರು ಹಾಜರುಪಡಿಸಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ಗೋಡೆ ಮುಟ್ಟಿದರೆ ಕಾಂಚಾಣದ ಸದ್ದು: ಡಿಕೆಶಿ

'ವಿಧಾನಸೌಧದಿಂದ ಹಿಡಿದು ಗ್ರಾಮ ಪಂಚಾಯಿತಿವರೆಗೂ ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಗೋಡೆ ಮುಟ್ಟಿದರೆ ಸಾಕು, ಕಾಸು, ಕಾಸು ಎನ್ನುವ ಶಬ್ದ ಬರುತ್ತದೆ. ಯಾವುದೇ ಕಾಮಗಾರಿ ಬಿಲ್ ಪಾವತಿ ಆಗಬೇಕಾದರೆ ಕಮಿಷನ್ ನೀಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವಿಧಾನಸೌಧದ ಅಧಿಕಾರಿಗಳಿಂದ ಹಿಡಿದು ಮಂತ್ರಿಗಳವರೆಗೆ ಎಲ್ಲರಿಗೂ ಹಣ ನೀಡಬೇಕು. ಇಡೀ ದೇಶದಲ್ಲಿ ಕರ್ನಾಟಕದ್ದು ಅತ್ಯಂತ ಭ್ರಷ್ಟ ಸರ್ಕಾರವೆಂಬ ಕಳಂಕ ಬಂದಿದೆ' ಎಂದರು. 'ಆದರೆ, ಎಲ್ಲ ಪ್ರಕರಣಗಳನ್ನು ಸರ್ಕಾರ ಮುಚ್ಚಿಹಾಕುತ್ತಿದೆ. ಯಾವುದೇ ಪ್ರಕರಣವನ್ನು ಇ.ಡಿ.ಗಾಗಲಿ, ಬೇರೆ ತನಿಖೆಗಾಗಲಿ ವಹಿಸುವುದಿಲ್ಲ. ಮಂತ್ರಿಗಳು, ಶಾಸಕರ ಮೇಲೆ ಎಫ್‌ಐಆರ್ ದಾಖಲಾದರೂ ಅವುಗಳನ್ನು ವ್ಯವಸ್ಥಿತ ವಾಗಿ ಮುಚ್ಚಿ ಹಾಕಲಾಗುತ್ತಿದೆ. ಬೇರೆಯವರ ಮೇಲಾದರೆ ಎಫ್‌ಐಆರ್ ದಾಖಲಿಸಿ ಆರೋಪ ಪಟ್ಟಿ ಸಲ್ಲಿಸುತ್ತಾರೆ' ಎಂದರು.

**ವಿಧಾನಸೌಧದಲ್ಲಿ ಅಕ್ರಮ ಹಣ ಪತ್ತೆಯಂಥ ಪ್ರಕರಣಗಳು ಬೇಕಾದಷ್ಟಿವೆ. ಈ ಸರ್ಕಾರವನ್ನು ಗುತ್ತಿಗೆದಾರರ ಸಂಘದವರು 40 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಕರೆಯಲು ಇದುವೇ ಕಾರಣ**

**ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

**ಇಷ್ಟು ಭ್ರಷ್ಟಾಚಾರ ಹಿಂದೆಂದೂ ಕಂಡಿಲ್ಲ. ಬಹಳ ಸಚಿವರು, ಮುಖ್ಯಮಂತ್ರಿಗಳ ಜೊತೆ ಕೆಲಸ ಮಾಡಿದ್ದೇನೆ. ಆದರೆ, ಈಗ ಸುಳ್ಳು, ಭ್ರಷ್ಟಾಚಾರ, ಬಾಯಿಗೆ ಬಂದಂತೆ ಮಾತನಾಡುವುದು ಜಾಸ್ತಿಯಾಗಿದೆ**

**ಎಚ್. ವಿಶ್ವನಾಥ್,** ವಿಧಾನ ಪರಿಷತ್ ಬಿಜೆಪಿ ಸದಸ್ಯ

### 'ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ಸೇರಿದ್ದ ಹಣ'

'ಸಹಾಯಕ ಎಂಜಿನಿಯರ್ ಜಗದೀಶ್ ಬಳಿ ಸಿಕ್ಕಿರುವ ಹಣ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರೊಬ್ಬರಿಗೆ ಸೇರಿದ್ದೆಂಬುದು ಸದ್ಯದ ತನಿಖೆಯಿಂದ ಗೊತ್ತಾಗಿದೆ. ಈ ಬಗ್ಗೆಯೂ ಜಗದೀಶ್ ಯಾವುದೇ ಮಾಹಿತಿ ನೀಡುತ್ತಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

### ವಿಶ್ವವಿದ್ಯಾಲಯಕ್ಕೆ ಕಾನೂನು ಸಚಿವರ ಖಾರವಾದ ಪತ್ರ

# ಲಾ ಸ್ಕೂಲ್: ಕನ್ನಡಿಗರಿಗೆ ಸಿಗದ ನ್ಯಾಯ

• ಎಸ್.ರವಿಪ್ರಕಾಶ್

ಬೆಂಗಳೂರು: ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (ಎನ್‌ಎಲ್‌ಎಸ್‌ಐಯು) ಕಳೆದ ಎರಡು ವರ್ಷಗಳಿಂದ ವಿದ್ಯಾರ್ಥಿಗಳ ಪ್ರವೇಶದಲ್ಲಿ ಕನ್ನಡಿಗ ವಿದ್ಯಾರ್ಥಿಗಳಿಗೆ ಶೇ 25 ರಷ್ಟು ಸೀಟುಗಳನ್ನು (ಸ್ಥಳೀಯ ಕೋಟಾ) ಮೀಸಲಿಡುವ ಸರ್ಕಾರದ ನಿಯಮವನ್ನು ಗಾಳಿಗೆ ತೂರಿದೆ. ಈ ಕುರಿತು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ವಿಶ್ವವಿದ್ಯಾಲಯದ ಕುಲಪತಿಗೆ ಖಾರವಾದ ಪತ್ರ ಬರೆದಿದ್ದಾರೆ.

ಕರ್ನಾಟಕದ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಶೇ 25 ರಷ್ಟು ಮೀಸಲು ನೀಡುವ ಸಂಬಂಧ 2020ರಲ್ಲಿ 'ಎನ್‌ಎಲ್‌ಎಸ್‌ಐಯು ಕಾಯ್ದೆ'ಗೆ ತಿದ್ದುಪಡಿ ಮಾಡಲಾಗಿದೆ. ಆದರೆ, ಎರಡು ವರ್ಷಗಳಿಂದ ಇದನ್ನು ಸರಿಯಾಗಿ ಜಾರಿ ಮಾಡಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ಸಹಿಸಲು ಸಾಧ್ಯವಿಲ್ಲ ಎಂದು ಕಾನೂನು ಸಚಿವರು ಪತ್ರದಲ್ಲಿ ತಿಳಿಸಿದ್ದಾರೆ.

ಕನ್ನಡಿಗ ವಿದ್ಯಾರ್ಥಿಗಳಿಗೆ ಶೇ 25 ರಷ್ಟು ಮೀಸಲಾತಿ ನೀಡುವ ಬದಲು ಈ ಮೀಸಲಾತಿಯನ್ನು ವಿಭಾಗೀಕರಿಸಲಾಗಿದೆ (compartmentalize). ಅಖಿಲ ಭಾರತ ರ‍್ಯಾಂಕಿಂಗ್‌ನಲ್ಲಿ ಉತ್ತಮ ಸ್ಥಾನಗಳನ್ನು ಗಳಿಸಿರುವ ಕನ್ನಡಿಗ ವಿದ್ಯಾರ್ಥಿಗಳನ್ನು ಮೀಸಲಾತಿ ಅಡಿ ತಂದು ಸೇರಿಸಲಾಗುತ್ತಿದೆ. ಮೆರಿಟ್ ಆಧಾರದಲ್ಲಿ ಸೀಟು ಪಡೆಯುವ ಅರ್ಹತೆ ಇದ್ದ ಸಾಮಾನ್ಯ ವರ್ಗದ ವಿದ್ಯಾರ್ಥಿಗಳನ್ನು ಸ್ಥಳೀಯ ಕೋಟಾಗೆ ಸೇರಿಸಿರುವುದು ಸರಿಯಲ್ಲ. ಇದು ಮೀಸಲಾತಿಯ ಆಶಯಕ್ಕೆ ವಿರುದ್ಧವಾಗಿದೆ ಎಂದು ಅವರು ಕಿಡಿಕಾರಿದ್ದಾರೆ.

ಅಖಿಲ ಭಾರತ ರ‍್ಯಾಂಕಿಂಗ್‌ನಲ್ಲಿ ಯಾವುದೇ ಸಾಮಾನ್ಯ ಕೋಟಾದಡಿ ಆಯ್ಕೆ ಆಗದ ವಿದ್ಯಾರ್ಥಿಗಳಿಗಾಗಿ ಮೀಸಲಾತಿ ನಿಗದಿಯ ಉದ್ದೇಶವಾಗಿದೆ. ಸಾಮಾನ್ಯ ಕೋಟಾದ ವಿದ್ಯಾರ್ಥಿಗಳು ಕರ್ನಾಟಕ ಸ್ಥಳೀಯ ಕೋಟಾದ ಜತೆಗೆ ಸೇರಿಸಲು ಸಾಧ್ಯವಿಲ್ಲ. ಕರ್ನಾಟಕದಲ್ಲಿ 10 ವರ್ಷ ಶಿಕ್ಷಣ ಪಡೆ ದವರು ಈ ಕೋಟಾಗೆ ಅರ್ಹರಾಗು ತ್ತಾರೆ. ವಿಧಾನಮಂಡಲದ ಉಭಯ ಸದನಗಳಲ್ಲಿ ಒಮ್ಮತದಿಂದ ಅಂಗೀಕರಿಸಿದ ಕಾಯ್ದೆಯನ್ನು ಗಾಳಿಗೆ ತೂರುವ ವಿಶ್ವವಿದ್ಯಾಲಯದ ಈ ನಡವಳಿಕೆಯಿಂದ ಆಘಾತವಾಗಿದೆ ಎಂದು ಹೇಳಿದ್ದಾರೆ.

2023–24 ನೇ ಸಾಲಿನ ಪ್ರವೇಶದಲ್ಲಿ ಅಖಿಲ ಭಾರತ ರ‍್ಯಾಂಕಿಂಗ್‌ನಲ್ಲಿ ಮೆರಿಟ್ ಆಧಾರದಲ್ಲಿ ಅರ್ಹತೆ ಪಡೆದವರನ್ನು ಈ ವರ್ಗಕ್ಕೆ ಸೇರಿಸದೇ, ಶೇ 25 ರಷ್ಟು ಕನ್ನಡಿಗ ವಿದ್ಯಾರ್ಥಿಗಳಿಗೆ ಸೀಟು ಕೊಡಬೇಕು. ಇದಕ್ಕಾಗಿ ಪ್ರವೇಶದ ಸಂದರ್ಭದಲ್ಲಿ ನೋಂದಣಿಯನ್ನು ತಕ್ಷಣವೇ ಆರಂಭಿಸಬೇಕು ಎಂದೂ ಮಾಧುಸ್ವಾಮಿ ಸೂಚಿಸಿದ್ದಾರೆ.

### 2 ವರ್ಷದಲ್ಲಿ ಕನ್ನಡಿಗರಿಗಾದ ಖೋತಾ

2021ರಲ್ಲಿ 5 ವರ್ಷಗಳ ಬಿಎ ಎಲ್‌ಎಲ್‌ಬಿ ಕೋರ್ಸ್‌ಗೆ 120 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿತ್ತು. ಇವರಲ್ಲಿ 30 ವಿದ್ಯಾರ್ಥಿಗಳು ಕರ್ನಾಟಕದವರು. ಆದರೆ, ಈ 30 ವಿದ್ಯಾರ್ಥಿಗಳಲ್ಲಿ 12 ವಿದ್ಯಾರ್ಥಿಗಳು (9 ಸಾಮಾನ್ಯವರ್ಗ,1 ಅಂಗವಿಕಲ ಸಾಮಾನ್ಯ, 2 ಎಸ್‌ಸಿ) ಅಖಿಲ ಭಾರತ ಮಟ್ಟದಲ್ಲಿ ಉತ್ತಮ ರ‍್ಯಾಂಕಿಂಗ್ ಪಡೆದವರು. ಆದರೆ, ಇಷ್ಟೂ ಮಂದಿಯನ್ನು ಸ್ಥಳೀಯ ಮೀಸಲಾತಿ ಕೋಟಾಗೆ ತಂದು, ಕೇವಲ 18 ಮಂದಿಗೆ ಮಾತ್ರ ಸ್ಥಳೀಯ ಕೋಟಾದಡಿ ಪ್ರವೇಶ ನೀಡಲಾಗಿದೆ. ಶೇ 15 ರಷ್ಟು ಕನ್ನಡಿಗ ವಿದ್ಯಾರ್ಥಿಗಳಿಗೆ ಮೀಸಲಾತಿ ನೀಡಲಾಗಿದೆ.

2022 ರಲ್ಲಿ 180 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. 45 ವಿದ್ಯಾರ್ಥಿಗಳು ಕರ್ನಾಟಕದವರು. ಈ ಪೈಕಿ 13 ವಿದ್ಯಾರ್ಥಿಗಳು (9 ಸಾಮಾನ್ಯ, 1 ಅಂಗವಿಕಲ–ಸಾಮಾನ್ಯ, 2 ಎಸ್‌ಸಿ) ಅಖಿಲ ಭಾರತ ರ‍್ಯಾಂಕಿಂಗ್‌ನಲ್ಲಿ ಉತ್ತಮ ಸ್ಥಾನ ಪಡೆದಿದ್ದರು. ಇವರನ್ನು ಸ್ಥಳೀಯ ಕೋಟಾಗೆ ಸೇರಿಸಲಾಗಿದೆ. ಉಳಿದ 32 ವಿದ್ಯಾರ್ಥಿಗಳಿಗೆ ಮಾತ್ರ ಸ್ಥಳೀಯ ಕೋಟಾದಡಿ ಪ್ರವೇಶ ನೀಡಲಾಗಿದೆ. ಕೇವಲ ಶೇ 17.7 ರಷ್ಟು ವಿದ್ಯಾರ್ಥಿಗಳಿಗೆ ಮಾತ್ರ ಮೀಸಲು ನೀಡಿದಂತಾಗಿದೆ.

## ನಗರದಲ್ಲಿ ಇಂದು

**ಆರಿದ್ರೋತ್ಸವ ಪೂಜಾ ಕೈಂಕರ್ಯ:** ಬೆಳಿಗ್ಗೆ 5ಕ್ಕೆ ಪಂಚಾಮೃತ ಅಭಿಷೇಕ, 9.30ಕ್ಕೆ ತಾಂಡವೇಶ್ವರ ಸ್ವಾಮಿಗೆ ಪೂಜೆ, ಮಹಾಮಂಗಳಾರತಿ, ರಾಜಬೀದಿ ಉತ್ಸವ, ಪ್ರಸಾದ ವಿನಿಯೋಗ, ಬೆಳಿಗ್ಗೆ 11ಕ್ಕೆ ಭರತನಾಟ್ಯ: ಮನಿಷಾ ಮಂಜುನಾಥ್, ಎಸ್.ಎನ್. ಅನನ್ಯಾ, ಉಪಸ್ಥಿತಿ: ಸಿ. ನಾರಾಯಣಸ್ವಾಮಿ, ಆಯೋಜನೆ: ಬೆಂಗಳೂರು ಅಯೋಧ್ಯಾ ನಗರದ ಶಿವಾಚಾರ ವೈಶ್ಯ (ನಗರ್ತ) ಸಮಿತಿ, ಸ್ಥಳ: ನಗರೇಶ್ವರಸ್ವಾಮಿ ದೇವಾಲಯದ ಆವರಣ, ನಗರ್ತರಪೇಟೆ

**ವಿಜ್ಞಾನ ಉತ್ಸವ:** ಅತಿಥಿಗಳು: ಎಸ್.ಎಸ್. ಅಯ್ಯಂಗಾರ್, ಎ.ಎಚ್. ರಾಮಾ ರಾವ್, ಎಸ್.ಎನ್. ನಾಗರಾಜ ರೆಡ್ಡಿ, ಸದಾನಂದ ಪಿ. ಮಯ್ಯ, ಆಯೋಜನೆ: ಬಿವಿ ಜಗದೀಶ್ ಸೈನ್ಸ್ ಸೆಂಟರ್, ಜವಾಹರಲಾಲ್ ನೆಹರೂ ತಾರಾಲಯ, ಸ್ಥಳ: ಮಲ್ಟಿಮೀಡಿಯಾ ಹಾಲ್, ಬಿ.ವಿ. ಜಗದೀಶ್ ಸೈನ್ಸ್ ಸೆಂಟರ್, ದಿ ನ್ಯಾಷನಲ್ ಕಾಲೇಜ್, ಜಯನಗರ, ಬೆಳಿಗ್ಗೆ 10.30

**ರೊನಾಲ್ಡ್ ಕೊಲಾಕೊ ಅವರಿಗೆ ಸನ್ಮಾನ:** ಅತಿಥಿಗಳು: ವೀರೇಂದ್ರ ಶರ್ಮಾ, ಸಿದ್ದರಾಮಯ್ಯ, ಡಿ.ವಿ. ಸದಾನಂದಗೌಡ, ಗೋವಿಂದ ಕಾರಜೋಳ, ಎಸ್. ಎಲ್. ಭೋಜೇಗೌಡ, ಅಧ್ಯಕ್ಷತೆ: ಸಿ.ಟಿ. ರವಿ, ಸ್ಥಳ: ಓಶನ್ ಹಾಲ್, ಕ್ಲಾರ್ಕ್ಸ್ ಎಕ್ಸೋಟಿಕಾ, ದೇವನಹಳ್ಳಿ, ಬೆಳಿಗ್ಗೆ 10.30

**ರಜತ ಮಹೋತ್ಸವ:** ಅಧ್ಯಕ್ಷತೆ: ಆರ್. ಮಂಜುನಾಥ, ಅತಿಥಿಗಳು: ಆಂಜಿನಪ್ಪ, ಡಿ. ರೂಪಾ, ಉಪಸ್ಥಿತಿ: ಡಿ.ವಿ. ಸದಾನಂದಗೌಡ, ಬಿ.ಸಿ. ನಾಗೇಶ, ಮುನಿರಾಜು, ಲೋಹಿತೇಶ್ವರ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರೌಢಶಾಲೆ, ಬಾಗಲಗುಂಟೆ, ಬೆಂಗಳೂರು ಉತ್ತರವಲಯ, ಬೆಳಿಗ್ಗೆ 11

**ಜನಪದ ವೈಭವ ಮತ್ತು ವಾರ್ಷಿಕೋತ್ಸವ:** ಅತಿಥಿ: ಬಿ.ಎ. ಬಸವರಾಜ, ಡಿ.ಆರ್. ರಾಮಮೂರ್ತಿ, ಅಧ್ಯಕ್ಷತೆ: ಕೆ.ವಿ. ಮುನಿಸ್ವಾಮಿ, ಆಯೋಜನೆ ಮತ್ತು ಸ್ಥಳ: ವೆಂಕಟೇಶ್ವರ ಆಂಗ್ಲ ನರ್ಸರಿ, ಪ್ರಾಥಮಿಕ ಮತ್ತು ಪ್ರೌಢ ಶಾಲಾ ಆವರಣ, ಕೆ.ಆರ್. ಪುರ, ಸಂಜೆ 4

**'ಜ್ಞಾನಯೋಗಿ ಸಿದ್ಧೇಶ್ವರ ಸ್ವಾಮೀಜಿ' ಅವರಿಗೆ ವಚನ ನುಡಿನಮನ:** ಆಯೋಜನೆ: ವೀರಲೋಕ, ವಚನ ಜ್ಯೋತಿ ಬಳಗ, ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಸಂಜೆ 5

**'ರಂಗಮಿಲನ' ನಾಟಕೋತ್ಸವ:** ಉದ್ಘಾಟನೆ: ಶರತ್ ಲೋಹಿತಾಶ್ವ, ಅಧ್ಯಕ್ಷತೆ: ರಾಘವೇಂದ್ರ ಎಲ್., ಅತಿಥಿಗಳು: ಸಿ.ಕೆ. ಗುಂಡಣ್ಣ, ವಿಜಯಕುಮಾರ್ ಎಂ.ಎನ್., ನಾಗಭೂಷಣ ಕೆ., ಮುಕುಂದ ಎನ್., ಆಯೋಜನೆ: ಎಸ್.ಇ.ಜಿ. ಲಲಿತಕಲಾ ಸಂಘ, ಸ್ಥಳ: ಎ.ಡಿ.ಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

**ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕರ್ಯ ಮತ್ತು ಸಂಗೀತೋತ್ಸವದ ಉದ್ಘಾಟನೆ:** ವಿ.ಆರ್. ಗೌರಿಶಂಕರ್, ಎಲ್. ಸುಬ್ರಹ್ಮಣ್ಯಮ್, ಆಯೋಜನೆ: ಸದ್ಗುರು ತ್ಯಾಗಬ್ರಹ್ಮ ಕೈಂಕರ್ಯ ಟ್ರಸ್ಟ್, ಸ್ಥಳ: ಶೃಂಗೇರಿ ಶಂಕರ ಮಠ, ಶಂಕರಪುರ, ಚಾಮರಾಜಪೇಟೆ, ಸಂಜೆ 6

**'ಸ್ವರ ಲಯ ಮಾಧುರ್ಯ' ಸಂಗೀತ ಕಾರ್ಯಕ್ರಮ:** ಅಧ್ಯಕ್ಷತೆ: ಬಿ.ಕೆ. ಶಿವರಾಮ್, ಅತಿಥಿ: ಆರ್.ಎ. ರಮಾಮಣಿ, ತಬಲ: ರಿಂಪಾ ಶಿವಾ, ಹಾರ್ಮೋನಿಯಂ: ಸತೀಶ್ ಕೊಳ್ಳಿ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡು ಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30

**'ಕಾಂತ ಮತ್ತು ಕಾಂತ' ನಾಟಕ ಪ್ರದರ್ಶನ:** ಅಭಿನಯ: 'ಮುಖ್ಯಮಂತ್ರಿ' ಚಂದ್ರು, ಸಿಹಿಕಹಿ ಚಂದ್ರು, ರಚನೆ: ವಿನ್ಯಾಸ ಮತ್ತು ನಿರ್ದೇಶನ: ಎಸ್. ಸುರೇಂದ್ರನಾಥ, ಆಯೋಜನೆ: ಸಂಕೇತ್ ನಾಟಕ, ಸ್ಥಳ: ರಂಗ ಶಂಕರ, ಸಂಜೆ 7.30

### ಮೇಲ್ಸೇತುವೆ, ಕೆಳ ಸೇತುವೆ ನಿರ್ಮಿಸಲು ₹1 ಸಾವಿರ ಕೋಟಿ: ಬೊಮ್ಮಾಯಿ

# ನಾಲ್ಕು ನಗರಗಳಲ್ಲಿ ರಿಂಗ್ ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಚೂರು, ಕೊಪ್ಪಳ, ಗದಗ, ಶಿವಮೊಗ್ಗ ರಿಂಗ್ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಇದೇ ವರ್ಷದಲ್ಲಿ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ ಯೋಜನೆಗಳ ಕುರಿತು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈ ರಸ್ತೆಗಳ ಅಭಿವೃದ್ಧಿಗೆ ಭೂಸ್ವಾಧೀನ ಮಾಡಿಕೊಡುವ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲಿದೆ. ಅದನ್ನು ನಿರ್ವಹಿಸಲು ಒಪ್ಪಿಗೆ ಸೂಚಿಸಲಾಗಿದೆ' ಎಂದರು.

'ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಶೇ 50ರಷ್ಟು ಅನುದಾನವನ್ನು ರಾಜ್ಯ ಸರ್ಕಾರ ಭರಿಸುತ್ತಿದೆ. ಈ ಪದ್ಧತಿಯನ್ನು ಬದಲಾಯಿಸುವ ಬಗ್ಗೆ ಚರ್ಚೆ ನಡೆಸಲಾಯಿತು. ಅನುದಾನ ಒದಗಿಸುವ ಬದಲು ಕಾಮಗಾರಿಗೆ ಪೂರೈಸುವ ಮರಳು, ಜಲ್ಲಿ ಮೇಲೆ ರಾಯಲ್ಟಿ ಮತ್ತು ಕಾಮಗಾರಿ ಮೇಲೆ ಜಿಎಸ್‌ಟಿ ವಿಧಿಸದೆ ಸಹಕಾರ ನೀಡುವ ಬಗ್ಗೆ ಚರ್ಚೆ ನಡೆದಿದೆ' ಎಂದು ತಿಳಿಸಿದರು.

ಹೊಸಪೇಟೆ-ಬಳ್ಳಾರಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಅರ್ಧಕ್ಕೆ ನಿಂತಿದೆ. ಗುತ್ತಿಗೆದಾರರನ್ನು ಬದಲಿಸಿ ಹೊಸದಾಗಿ ಟೆಂಡರ್ ಕರೆಯಲು ನಿರ್ಧರಿಸಲಾಗಿದ್ದು, ಫೆಬ್ರುವರಿಯಲ್ಲಿ ಕಾಮಗಾರಿ ಆರಂಭವಾಗಲಿದೆ ಎಂದು ಹೇಳಿದರು.



ಬೆಂಗಳೂರು–ಮೈಸೂರು ಎಕ್ಸ್ ಪ್ರೆಸ್ ವೇ ಕಾಮಗಾರಿಯನ್ನು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಗುರುವಾರ ವೈಮಾನಿಕ ವೀಕ್ಷಣೆ ಮಾಡಿದರು

ರೈಲ್ವೆ ಹಳಿಗಳ ಮೇಲೆ ರಸ್ತೆಗಳು ಹಾದು ಹೋಗಿರುವ ರಾಜ್ಯದ ಹಲವೆಡೆ ವಾಹನ ದಟ್ಟಣೆ ಉಂಟಾಗುತ್ತಿದೆ. ಇದನ್ನು ಪರಿಹರಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿಗಳಲ್ಲದಿದ್ದರೂ ಮೇಲ್ಸೇತುವೆ ಮತ್ತು ಕೆಳ ಸೇತುವೆ ನಿರ್ಮಿಸಲು ₹1 ಸಾವಿರ ಕೋಟಿ ಅನುದಾನ ಒದಗಿಸಲು ನಿತಿನ್ ಗಡ್ಕರಿ ಅವರು ಒಪ್ಪಿಕೊಂಡಿದ್ದಾರೆ ಎಂದು ಬೊಮ್ಮಾಯಿ ತಿಳಿಸಿದರು.

ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ₹46,840 ಕೋಟಿ ಮೊತ್ತದ ವಿವಿಧ ಕಾಮಗಾರಿಗಳು ನಡೆಯುತ್ತಿವೆ. ಇನ್ನೂ ₹1 ಲಕ್ಷ ಕೋಟಿಗೂ ಹೆಚ್ಚಿನ ಕಾಮಗಾರಿಗೆ ಪ್ರಸ್ತಾವನೆ ಸಿದ್ಧವಾಗಬೇಕಿದೆ. ಅದನ್ನು ತ್ವರಿತವಾಗಿ ಸಿದ್ಧಪಡಿಸಲು ಸೂಚಿಸಲಾಗಿದೆ ಎಂದರು.

ಶಿರಾಡಿ ಘಾಟಿಯಲ್ಲಿ ₹10 ಸಾವಿರ ಕೋಟಿ ವೆಚ್ಚದಲ್ಲಿ ಸುರಂಗ ಮಾರ್ಗ ನಿರ್ಮಿಸುವ ಯೋಜನೆಗೆ ಅನುಮೋದನೆ ನೀಡುವುದಾಗಿ ನಿತಿನ್ ಗಡ್ಕರಿ ಅವರು ಒಪ್ಪಿಗೆ ಸೂಚಿಸಿದ್ದಾರೆ. ಇದು ದೀರ್ಘಕಾಲದ ಯೋಜನೆಯಾಗಿದ್ದು, ಕರಾವಳಿ ಮತ್ತು ರಾಜಧಾನಿಗೆ ಜೀವನಾಡಿಯಾಗಿರುವ ಈ ರಸ್ತೆಯನ್ನು ಶಿರಾಡಿ ಘಾಟಿಯಲ್ಲಿ ನಾಲ್ಕು-ಪಥವಾಗಿಸುವ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ ಎಂಬ ವಿಷಯವನ್ನೂ ಅಧಿಕಾರಿಗಳು ಗಮನಕ್ಕೆ ತಂದರು ಎಂದು ವಿವರಿಸಿದರು.

ಬೆಂಗಳೂರು ನಗರದ ಸುತ್ತ 12 ಉಪನಗರಗಳ ಮೂಲಕ 288 ಕಿಲೋ ಮೀಟರ್ ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ-(ಎಸ್‌ಟಿಆರ್‌ಆರ್) ನಿರ್ಮಿಸಲಾಗುತ್ತಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಹಾದು ಹೋಗುತ್ತಿದ್ದ ಮಾರ್ಗವನ್ನು ಬದಲಿಸಲು ಸಚಿವರು ಒಪ್ಪಿಕೊಂಡಿದ್ದಾರೆ. ರಾಷ್ಟ್ರೀಯ ಉದ್ಯಾನಕ್ಕೆ ಯಾವುದೇ ಧಕ್ಕೆ ಆಗುವುದಿಲ್ಲ ಎಂದರು.

### ಫೆಬ್ರುವರಿಯಲ್ಲಿ ದಶಪಥ ಲೋಕಾರ್ಪಣೆ: ನಿತಿನ್ ಗಡ್ಕರಿ

ರಾಮನಗರ: 'ಬೆಂಗಳೂರು- ಮೈಸೂರು ನಡುವಿನ ದಶಪಥಗಳ ಹೆದ್ದಾರಿಯನ್ನು ಫೆಬ್ರುವರಿ ಅಂತ್ಯದಲ್ಲಿ ಉದ್ಘಾಟಿಸಲಾಗುವುದು' ಎಂದು ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದರು.

ಗುರುವಾರ ನೂತನ ಎಕ್ಸ್‌ಪ್ರೆಸ್ ಕಾಮಗಾರಿಯ ವೈಮಾನಿಕ ವೀಕ್ಷಣೆ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಉದ್ಘಾಟನಾ ಕಾರ್ಯಕ್ರಮಕ್ಕೆ ಪ್ರಧಾನಿ ಮೋದಿ ಇಲ್ಲವೇ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆಹ್ವಾನಿಸಲಾಗುವುದು ಎಂದರು.

ಅರಣ್ಯ ಭೂಮಿ ಸ್ವಾಧೀನಕ್ಕೆ ಸಂಬಂಧಿಸಿದಂತೆ ಇರುವ ಅನುಮತಿಗಳನ್ನು ರಾಜ್ಯ ಸರ್ಕಾರ ನೀಡಿದರೆ ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿಯನ್ನು 2024ರ ಜನವರಿ 26ರಂದು ವಾಹನ ಸಂಚಾರಕ್ಕೆ ಸಮರ್ಪಿಸಲಾಗುವುದು. ಕಾಮಗಾರಿ ಪೂರ್ಣಗೊಳಿಸಲು 2024ರ ಮಾರ್ಚ್ ತನಕ ಗಡುವಿದೆ ಎಂದರು.

# ಬನ್ನೇರುಘಟ್ಟದಲ್ಲಿ ಸುರಂಗ: ಕೈಬಿಡಲು ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸುತ್ತಮುತ್ತ ಹಾದು ಹೋಗುವ ಸ್ಯಾಟಲೈಟ್ ಟೌನ್ ರಿಂಗ್ ರಸ್ತೆಯು (ಎಸ್‌ಟಿಆರ್‌ಆರ್) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ ಹಾದು ಹೋಗುವುದನ್ನು ತಪ್ಪಿಸಲು ತೀರ್ಮಾನಿಸಲಾಗಿದೆ.

ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.

'ಈ ಹೆದ್ದಾರಿ ಯೋಜನೆಯು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ ಹಾದು ಹೋಗಲಿದೆ. ಮುಂಬೈ–ನವದೆಹಲಿ ಮಾರ್ಗದಲ್ಲಿ ಅರಣ್ಯ ಪ್ರದೇಶ ಎದುರಾಗಿತ್ತು. ಅಲ್ಲಿಯೂ ಅರಣ್ಯಕ್ಕೆ ತೊಂದರೆ ಆಗದಂತೆ ಸುರಂಗ ಕೊರೆದು ರಸ್ತೆ ನಿರ್ಮಿಸಲಾಗಿದೆ. ಅದೇ ಮಾದರಿಯನ್ನು ಇಲ್ಲಿಯೂ ಅನುಸರಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ನಿತಿನ್ ಗಡ್ಕರಿ ಅವರು ಗುರುವಾರ ಬೆಳಿಗ್ಗೆ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದರು. ಆದರೆ, ಸಂಜೆ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದು ಕೈಬಿಡಲು ಸಭೆ ತೀರ್ಮಾನಿಸಿದೆ.

ಯಾವುದೇ ಕಾರಣಕ್ಕೂ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಹೆದ್ದಾರಿ ನಿರ್ಮಿಸಬಾರದು ಎಂದು ರಾಜ್ಯ ವನ್ಯಜೀವಿ ಸಮಿತಿ ಅಭಿಪ್ರಾಯಪಟ್ಟಿದೆ. ಆದ್ದರಿಂದ ಈ ಪ್ರಸ್ತಾಪ ಕೈಬಿಟ್ಟು, ದೂರವಾದರೂ ಉದ್ಯಾನದ ವ್ಯಾಪ್ತಿಯಿಂದ ಹೊರಭಾಗದಲ್ಲಿ ರಸ್ತೆ ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

288 ಕಿಲೋ ಮೀಟರ್ ಉದ್ದದ ಈ ರಿಂಗ್ ರಸ್ತೆಯು ತಮಿಳುನಾಡಿನಲ್ಲೂ 45 ಕಿಲೋ ಮೀಟರ್ ರಸ್ತೆ ಹಾದು ಹೋಗಲಿದೆ. ಒಟ್ಟಾರೆ ₹17 ಸಾವಿರ ಕೋಟಿ ಮೊತ್ತದ ಯೋಜನೆಯಲ್ಲಿ ಈಗಾಗಲೇ ₹6 ಸಾವಿರ ಕೋಟಿ ಮೊತ್ತದಲ್ಲಿ 136 ಕಿಲೋ ಮೀಟರ್ ಮಾರ್ಗಕ್ಕೆ ಟೆಂಡರ್ ಪ್ರಕ್ರಿಯೆ ನಡೆದಿದೆ. 2025ಕ್ಕೆ ಯೋಜನೆ ಪೂರ್ಣಗೊಳಿಸುವ ಉದ್ದೇಶವಿದೆ ಎಂದು ವಿವರಿಸಿದರು.

ಈ ರಸ್ತೆಯು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಸೂಕ್ಷ್ಮ ವಲಯದಲ್ಲಿ 8.1 ಕಿಲೋ ಮೀಟರ್ ಸೇರಿ ಒಟ್ಟು 28 ಕಿಲೋ ಮೀಟರ್ ಹಾದು ಹೋಗಲಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

**ಅಧ್ಯಯನ:** ಬೆಂಗಳೂರು ನಗರಕ್ಕೆ ಸ್ಕೈಬಸ್ ಪರಿಚಯಿಸುವ ಬಗ್ಗೆ ಅಧ್ಯಯನ ನಡೆದಿದೆ ಎಂದರು.

**ಡಬಲ್ ಡೆಕ್ಕರ್ ಮೇಲ್ಸೇತುವೆ:** ಎಸ್‌ಟಿಆರ್‌ಆರ್‌ನಲ್ಲಿ ಡಬಲ್ ಡೆಕ್ಕರ್ ಮೇಲ್ಸೇತುವೆಗಳನ್ನು ನಿರ್ಮಿಸಲು ಅವಕಾಶ ಇರಿಸಿಕೊಳ್ಳುವಂತೆ ಎನ್‌ಎಚ್‌ಎಐ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ಹೇಳಿದರು.

**ತ್ಯಾಜ್ಯ ಬಳಕೆ:** ನಗರದಲ್ಲಿ ನಿತ್ಯ ಉತ್ಪಾದನೆಯಾಗುವ ತ್ಯಾಜ್ಯವನ್ನೂ ರಸ್ತೆ ನಿರ್ಮಾಣಕ್ಕೆ ಕಚ್ಚಾ ವಸ್ತುವಾಗಿ ಬಳಕೆ ಮಾಡಿಕೊಳ್ಳಲು ಚಿಂತನೆ ನಡೆದಿದೆ ಎಂದು ಗಡ್ಕರಿ ತಿಳಿಸಿದರು.

### ಎಸ್‌ಟಿಆರ್‌ಆರ್ ಸಂಪರ್ಕಿಸುವ ಪಟ್ಟಣಗಳು

ದಾಬಸ್‌ಪೇಟೆ, ದೊಡ್ಡಬಳ್ಳಾಪುರ, ದೇವನಹಳ್ಳಿ, ಸೂಲಿಬೆಲೆ, ಹೊಸಕೋಟೆ, ಸರ್ಜಾಪುರ, ಅತ್ತಿಬೆಲೆ, ಆನೇಕಲ್, ತಟ್ಟೆಕೆರೆ, ಕನಕಪುರ, ರಾಮನಗರ, ಮಾಗಡಿ.

ಶುಕ್ರವಾರ, ಜನವರಿ 6, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 6 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಬಿಗ್‌ಬಾಸ್ 9ನೇ ಆವೃತ್ತಿ ವಿಜೇತ ನಟ ರೂಪೇಶ್ ಶೆಟ್ಟಿ ಪ್ರಪಂಚದಲ್ಲೊಂದು ಸುತ್ತು...



ಆಳ-ಅಗಲ
ಹಿಮಾಲಯ ತಪ್ಪಲಿನ ಜೋಶಿಮಠ ಪಟ್ಟಣಕ್ಕೆ ಕುಸಿತದ ಭೀತಿ

ಯುಪಿಐಗೆ ಸತ್ಯ ನಾದೆಲ್ಲ ಪ್ರಶಂಸೆ 10
ವಿದೇಶಿ ವಿ.ವಿ ಕ್ಯಾಂಪಸ್ ಸ್ಥಾಪನೆ: ಯುಜಿಸಿಯಿಂದ ಕರಡು ನಿಯಮ ಪ್ರಕಟ 5

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 60,353 ▼ | 17,992 ▼ | ₹57,720 (ಬೆಂಗಳೂರು) ▲ | ₹69,700 (ಬೆಂಗಳೂರು) ▼ | 82.45 ▲ |

## ಎಚ್‌1ಬಿ ವೀಸಾ ಶುಲ್ಕ ಹೆಚ್ಚಳಕ್ಕೆ ಪ್ರಸ್ತಾವ

ವಾಷಿಂಗ್ಟನ್ (ಪಿಟಿಐ): ಎಚ್‌1ಬಿ ವೀಸಾ ಸೇರಿದಂತೆ ಇತರೆ ವಲಸೆ ವೀಸಾಗಳ ಶುಲ್ಕವನ್ನು ಹೆಚ್ಚಿಸಲು ಅಮೆರಿಕ ಪೌರತ್ವ ಮತ್ತು ವಲಸೆ ಸೇವೆಯು (ಯುಎಸ್‌ಸಿಐಎಸ್) ಬುಧವಾರ ಪ್ರಸ್ತಾವ ಮುಂದಿಟ್ಟಿದೆ. ಭಾರತದ ಐಟಿ ಉದ್ಯೋಗಿಗಳಲ್ಲಿ ಎಚ್‌1ಬಿ ವೀಸಾ ಹೆಚ್ಚು ಜನಪ್ರಿಯವಾಗಿದೆ.

ಶುಲ್ಕ ಹೆಚ್ಚಳದ ಬಗ್ಗೆ ಪರಿಶೀಲನೆ ನಡೆಸಿಯೇ ಈ ಪ್ರಸ್ತಾವವನ್ನು ಮುಂದಿಡಲಾಗಿದೆ. ಈ ಶುಲ್ಕಗಳು 2016ರಿಂದ ಬದಲಾವಣೆಯಾಗಿರಲಿಲ್ಲ. ಅಮೆರಿಕ ಪೌರತ್ವ ಮತ್ತು ವಲಸೆ ಸೇವೆಯು ತನ್ನ ಖರ್ಚು–ವೆಚ್ಚಗಳನ್ನು ವಲಸೆ ಮತ್ತು ಪೌರತ್ವ ಅರ್ಜಿದಾರರಿಂದ ಪಡೆದ ಶುಲ್ಕದಿಂದಲೇ ಭರಿಸುತ್ತದೆ ಎಂದು ಆಂತರಿಕ ಭದ್ರತಾ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಪ್ರಸ್ತಾವಕ್ಕೆ ಸಾರ್ವಜನಿಕರು ತಮ್ಮ ಪ್ರತಿಕ್ರಿಯೆ ಸಲ್ಲಿಸಲು 60 ದಿನಗಳ ಕಾಲಾವಕಾಶ ನೀಡಲಾಗಿದೆ.

### ಪಕ್ಷ ಬದಲಿಸುವ ಹಕ್ಕಿಗಳಿಗೆ ಬರಲಿದೆ ಭಾರಿ ಬೇಡಿಕೆ

# ಆಪರೇಷನ್: ಹಸ್ತ–ಕಮಲ ಸಿದ್ಧ

**ಬೆಂಗಳೂರು:** ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಶತಾಯಗತಾಯ ಅಧಿಕಾರ ಹಿಡಿಯಬೇಕೆಂಬ ಛಲ ತೊಟ್ಟಿರುವ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು, ತಮ್ಮ ವಿರೋಧಿ ಪಾಳಯದ ಶಾಸಕರು, ಪ್ರಭಾವಿ ನಾಯಕರನ್ನು ಸೆಳೆಯಲು ತಂತ್ರ ಹೆಣೆದಿದ್ದಾರೆ. ತಮ್ಮ ಶಕ್ತಿ ಕಡಿಮೆ ಇರುವ ಕ್ಷೇತ್ರಗಳಲ್ಲಿ ವಿರೋಧಿ ಪಕ್ಷಗಳಲ್ಲಿರುವ ಗೆಲ್ಲುವ 'ಸಮರ್ಥ'ರನ್ನು ಕರೆತಂದು ಕಣಕ್ಕೆ ಇಳಿಸಲು ಸಿದ್ಧತೆ ನಡೆಸಿವೆ. ಇದಕ್ಕಾಗಿ ಆಪರೇಷನ್ ನಿಪುಣರನ್ನೂ ನಿಯೋಜಿಸಲಾಗಿದೆ.

## ಶಾಸಕರ ಪಟ್ಟಿ ಕೊಟ್ಟ ಬೊಮ್ಮಾಯಿ?

ರಾಜ್ಯದ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಗೆ ಬಲ ಇಲ್ಲವೋ ಅಂತಹ ಕ್ಷೇತ್ರಗಳಲ್ಲಿರುವ ಕಾಂಗ್ರೆಸ್–ಜೆಡಿಎಸ್‌ನ ಪ್ರಭಾವಿಗಳನ್ನು ಕಮಲದ ತೆಕ್ಕೆಗೆ ತರಲು ಸಿದ್ಧತೆ ನಡೆದಿದ್ದು, ಅಂತಹವರ ಪಟ್ಟಿಯೊಂದನ್ನು ಪಕ್ಷದ ವರಿಷ್ಠರು ಸಿದ್ಧಪಡಿಸಿದ್ದಾರೆ.

ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಸೇರ ಬಯಸಿರುವ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಹಾಲಿ ಮತ್ತು ಮಾಜಿ ಶಾಸಕರ ಪಟ್ಟಿಯೊಂದನ್ನು ಮುಖ್ಯಮಂತ್ರಿ ಬೊಮ್ಮಾಯಿಯವರು ಇತ್ತೀಚೆಗೆ ದೆಹಲಿಗೆ ತೆರಳಿದ್ದ ಸಂದರ್ಭದಲ್ಲಿ ಗೃಹ ಸಚಿವ ಅಮಿತ್ ಶಾ ಅವರಿಗೆ ನೀಡಿದ್ದು, ಪಟ್ಟಿಯನ್ನು ಪಡೆದ ಶಾ ಅವರು ಎಲ್ಲರ ಬಗ್ಗೆಯೂ ಮಾಹಿತಿ ಪಡೆದು ಮುಂದೇನು ಮಾಡಬೇಕು ಎಂಬುದನ್ನು ತಾವೇ ತೀರ್ಮಾನಿಸುವುದಾಗಿ ಹೇಳಿದ್ದರೆನ್ನಲಾಗಿದೆ.

ಕರ್ನಾಟಕ
ಪ್ರಜಾ ಮತ 2023
ಜನತಂತ್ರದ ಹಬ್ಬ

ಅನ್ಯ ಪಕ್ಷಗಳಿಂದ ಬಿಜೆಪಿ ಸೇರ್ಪಡೆ ಪರ್ವ ಈಗಾಗಲೇ ಆರಂಭವಾಗಿದ್ದು, ಬಜೆಟ್ ಅಧಿವೇಶನದ ಬಳಿಕ ಸೇರ್ಪಡೆ ಮತ್ತಷ್ಟು ಬಿರುಸುಗೊಳ್ಳಲಿದೆ. ಈಗಾಗಲೇ ಕಾಂಗ್ರೆಸ್‌ನ ಮಾಜಿ ಸಂಸದ ಎಸ್.ಪಿ. ಮುದ್ದಹನುಮೇಗೌಡ, ನಟ ಶಶಿಕುಮಾರ್, ನಿವೃತ್ತ ಐಎಎಸ್ ಅಧಿಕಾರಿ ಬಿ.ಎಚ್.ಅನಿಲ್ ಕುಮಾರ್, ಕೆಪಿಸಿಸಿ ಮಾಜಿ ಸದಸ್ಯ ಎಸ್. ಸಚ್ಚಿದಾನಂದ ಮತ್ತು ಅವರ ಬೆಂಬಲಿಗರು ಬಿಜೆಪಿ ಸೇರಿದ್ದಾರೆ. ಹಳೇಮೈಸೂರು ಭಾಗದ ಜಿಲ್ಲೆಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಉದ್ದೇಶದಿಂದ ಈ ಜಿಲ್ಲೆಗಳಲ್ಲಿ 'ಆಪರೇಷನ್'ಗೆ ಬಿಜೆಪಿ ಗಮನ ಕೇಂದ್ರೀಕರಿಸಿದೆ.

## ಸಂಕ್ರಮಣಕ್ಕೆ 'ಕೈ' ಕ್ರಾಂತಿ

ಕಾಂಗ್ರೆಸ್ ಪಕ್ಷದಲ್ಲಿ ಸಂಕ್ರಮಣದ ಬಳಿಕ 'ಆಪರೇಷನ್ ಹಸ್ತ'ದ ದಾಳ ಉರುಳಿಸಲು ಆ ಪಕ್ಷದ ನಾಯಕರು ತೆರೆಮರೆಯಲ್ಲಿ ಯತ್ನ ಆರಂಭಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೇ ಈ ಸುಳಿವು ನೀಡಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಬಹುಮತ ಪಡೆಯಲು ಎಲ್ಲ ದಾರಿಗಳನ್ನು ಮುಕ್ತವಾಗಿ ಇರಿಸಿಕೊಂಡಿರುವ 'ಕೈ' ನಾಯಕರು, ಬಿಜೆಪಿ– ಜೆಡಿಎಸ್ ಶಾಸಕರನ್ನು ಸೆಳೆಯಲು ಕಾರ್ಯತಂತ್ರ ರೂಪಿಸಿದ್ದಾರೆ. ಈಗಾಗಲೇ ಕೆಲವು ಶಾಸಕರ ಜೊತೆ ಈ ಬಗ್ಗೆ ಮಾತುಕತೆಯೂ ನಡೆದಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಆ ಬೆನ್ನಲ್ಲೆ ಪ್ರತಿಕ್ರಿಯಿಸಿರುವ ಡಿ.ಕೆ. ಶಿವಕುಮಾರ್, 'ಕಾಂಗ್ರೆಸ್‌ಗೆ ಯಾರೆಲ್ಲಾ ಬರುತ್ತಾರೆ ಎಂಬುದನ್ನು ಈಗ ಹೇಳುವುದಿಲ್ಲ. ಅದೆಲ್ಲವೂ ಸಂಕ್ರಾಂತಿ ವೇಳೆಗೆ ಗೊತ್ತಾಗಲಿದೆ' ಎಂದಿದ್ದಾರೆ. ಅಧಿಕಾರದ ಚುಕ್ಕಾಣಿ ಹಿಡಿಯಲು ಹಟ ತೊಟ್ಟಿರುವ ಕಾಂಗ್ರೆಸ್ ನಾಯಕರು, 'ಆಪರೇಷನ್ ಹಸ್ತ'ಕ್ಕೆ ಚಾಲನೆ ನೀಡಿದ್ದು, ಬೆಂಗಳೂರಿನ ಇಬ್ಬರು, ಮುಂಬೈ ಕರ್ನಾಟಕ ಭಾಗದ ಇಬ್ಬರು, ಮೈಸೂರು ಭಾಗದ ಒಬ್ಬರು, ಕಲಬುರಗಿಯ ಒಬ್ಬರ ಜೊತೆ ಈಗಾಗಲೇ ಚರ್ಚೆ ನಡೆಸಿರುವ ಮಾಹಿತಿ ಸಿಕ್ಕಿದೆ.



86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಹಾವೇರಿ ನಗರದ ಹೊರವಲಯದಲ್ಲಿ ನಿರ್ಮಿಸಿರುವ ಪ್ರಧಾನ ವೇದಿಕೆ ಗುರುವಾರ ರಾತ್ರಿ ಅಲಂಕೃತ ವಿದ್ಯುದ್ದೀಪಗಳಿಂದ ಕಂಗೊಳಿಸಿದ್ದು ಹೀಗೆ ಪ್ರಜಾವಾಣಿ ಚಿತ್ರ/ ಮಾಲತೇಶ ಇಚ್ಚಂಗಿ

# ನುಡಿಜಾತ್ರೆಯ ತೇರಿಗೆ ಹಾವೇರಿಯಲ್ಲಿಂದು ಚಾಲನೆ

### 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಜ್ಜು

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: 'ಕುಲದ ಮೂಲವೇನು ಬಲ್ಲಿರೇನಯ್ಯ?' ಎಂದು ಕೇಳಿದ ಕನಕದಾಸರ ಜನ್ಮಭೂಮಿ, ಭಾವೈಕ್ಯದ ಗಾನ ಮೊಳಗಿಸಿದ ಶಿಶುನಾಳ ಶರೀಫಜ್ಜನ ಊರು ಹಾಗೂ ಜನಸಮುದಾಯದ ವಿವೇಕ ತಿದ್ದಿದ ಸರ್ವಜ್ಞನ ನಾಡಿನಲ್ಲಿ ಇದೇ 6,7 ಮತ್ತು 8ರಂದು 86ನೇ 'ನುಡಿಜಾತ್ರೆ'ಯ ತೇರನ್ನು ಎಳೆಯಲು ಕನ್ನಡಿಗರು ಸಜ್ಜಾಗಿದ್ದಾರೆ.

'ಸಂತ ಶರಣರ ನಾಡು– ಭಾವೈಕ್ಯದ ಬೀಡು' ಎಂದೇ ಹೆಸರಾದ ಹಾವೇರಿಯು ಪ್ರತ್ಯೇಕ ಜಿಲ್ಲೆಯಾಗಿ ರೂಪುಗೊಂಡ 25 ವರ್ಷಗಳ ನಂತರ ಮೊದಲ ಬಾರಿಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆತಿಥ್ಯವನ್ನು ವಹಿಸಿಕೊಂಡಿದೆ. 'ಸಾಮರಸ್ಯದ ಭಾವ– ಕನ್ನಡದ ಜೀವ' ಈ ಬಾರಿಯ ಘೋಷವಾಕ್ಯವಾಗಿದೆ.

ತಗ್ಗು– ಗುಂಡಿಬಿದ್ದ ರಸ್ತೆಗಳಿಗೆ ಡಾಂಬರು ಬಳಿದು, ಮಾಸಿ ಹೋದ ಗೋಡೆಗಳಿಗೆ ಸುಣ್ಣ– ಬಣ್ಣ ಹಚ್ಚಿ, ರಸ್ತೆ ಮತ್ತು ವೃತ್ತಗಳಿಗೆ ವಿದ್ಯುದ್ದೀಪಗಳನ್ನು ಸಿಂಗರಿಸಿ, ಗಿಡ– ಮರಗಳಿಗೆ ಕನ್ನಡ ಬಾವುಟವನ್ನು ಉಡಿಸಿ ಹಾವೇರಿ ನಗರವನ್ನು ಅಕ್ಷರ ಜಾತ್ರೆಗೆ ಮದುವಣಗಿತ್ತಿಯಂತೆ ಸಿಂಗರಿಸಲಾಗಿದೆ. ಏಲಕ್ಕಿ ನಾಡು ಕನ್ನಡದ ಕಂಪು ಬೀರಲು ಅಣಿಯಾಗಿದೆ.

4ನೇ ಪುಟ ನೋಡಿ

## ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ರಥ

ಜನವರಿ 6ರಂದು ಬೆಳಿಗ್ಗೆ 7.30ಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಹಾವೇರಿ ನಗರದ ಪುರಸಿದ್ಧೇಶ್ವರ ದೇವಸ್ಥಾನದಿಂದ ಹೊರಟು, ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಬೆಳಿಗ್ಗೆ 10.30ಕ್ಕೆ ಸಮ್ಮೇಳನದ ವೇದಿಕೆ ತಲುಪಲಿದೆ. ಸಮ್ಮೇಳನಾಧ್ಯಕ್ಷರಿಗೆ 'ಅರಮನೆ ದರ್ಬಾರ್' ಮಾದರಿ ರಥ ಮತ್ತು ಕಸಾಪ ಜಿಲ್ಲಾ ಘಟಕದ ಅಧ್ಯಕ್ಷರುಗಳಿಗೆ 11 ಸಾರೋಟುಗಳನ್ನು ಸಿದ್ಧಪಡಿಸಿರುವುದು ಈ ಸಮ್ಮೇಳನದ ವಿಶೇಷವಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಳಿಗ್ಗೆ 10.30ಕ್ಕೆ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಡಾ.ದೊಡ್ಡರಂಗೇಗೌಡ ಅವರು ಸಮ್ಮೇಳನಾಧ್ಯಕ್ಷರ ಭಾಷಣ ಮಾಡಲಿದ್ದಾರೆ. ಡಾ.ಎಚ್.ಎಸ್. ವೆಂಕಟೇಶಮೂರ್ತಿ ನಿಕಟಪೂರ್ವ ಸಮ್ಮೇಳನಾಧ್ಯಕ್ಷರ ನುಡಿಗಳನ್ನಾಡಲಿದ್ದಾರೆ. ಕಸಾಪ ಅಧ್ಯಕ್ಷ ಮಹೇಶ ಜೋಶಿ ಆಶಯ ನುಡಿಗಳನ್ನಾಡಲಿದ್ದಾರೆ. ಶಾಸಕ ಬಿ.ಎಸ್.ಯಡಿಯೂರಪ್ಪ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಸಚಿವರು, ಶಾಸಕರು, ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ




### ಇನ್ನೂ ತನಿಖಾಧಿಕಾರಿಯ ಕೈಸೇರದ ಎಫ್‌ಎಸ್‌ಎಲ್ ವರದಿ

# ಮುರುಘಾ ಶರಣರ ಪ್ರಕರಣ: ವರದಿಯಲ್ಲೇನಿದೆ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಕ್ಕಳ ಮೇಲೆ ಅತ್ಯಾಚಾರ (ಪೋಕ್ಸೊ) ಎಸಗಿದ ಆರೋಪಕ್ಕೆ ಗುರಿಯಾಗಿ ಜೈಲಿನಲ್ಲಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ವಿರುದ್ಧ ಪೊಲೀಸರು ಸಲ್ಲಿಸಿರುವ ಮಧ್ಯಂತರ ದೋಷಾರೋಪ ಪಟ್ಟಿಯ ವೈದ್ಯಕೀಯ ವರದಿ ಈಗ ಚರ್ಚೆಗೆ ಕಾರಣವಾಗಿದೆ.

ಈ ಕುರಿತ ವಿಧಿವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ವರದಿ ಬರಬೇಕಿದ್ದು, ಅದಾದ ಬಳಿಕವಷ್ಟೇ ಅಂತಿಮ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

**ವರದಿಯಲ್ಲಿ ಏನಿದೆ?:** ಈ ಪ್ರಕರಣದ ತನಿಖಾಧಿಕಾರಿಗಳು ಚಿತ್ರದುರ್ಗದ 2ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ಪಟ್ಟಿ ಸಲ್ಲಿಸಿದ್ದರು. ಅದರಲ್ಲಿ ವೈದ್ಯಕೀಯ ವರದಿ ಇದೆ. ಸಂತ್ರಸ್ತ ಬಾಲಕಿಯರನ್ನು ವೈದ್ಯಕೀಯ ಪರೀಕ್ಷೆಗೆ ಗುರಿಪಡಿಸಿದ್ದ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯ ಹಿರಿಯ ತಜ್ಞರು 2022ರ ಆಗಸ್ಟ್ ನಲ್ಲಿ ವರದಿ ಸಲ್ಲಿಸಿದ್ದರು.

'ಬಾಲಕಿಯರ ಮೇಲೆ ಸಂಭೋಗ ಆಗಿಲ್ಲ' ಎಂದೇ ವಿವರಿಸಲಾಗಿದ್ದು 'ಅಂತಿಮ ವರದಿಯನ್ನು ಕಾಯ್ದಿರಿಸಲಾಗಿದೆ' ಎಂದು ತಿಳಿಸಲಾಗಿದೆ. ವರದಿಯಲ್ಲಿ ಕಾಣಿಸಿರುವ ಅಂಶಗಳಲ್ಲಿ, 'ಸಂತ್ರಸ್ತೆಯರ ಕನ್ಯಾಪೊರೆಗೆ ಹಾನಿಯಾಗಿಲ್ಲ, ಅವರ ಗುಪ್ತಾಂಗದ ಹೊರಭಾಗದಲ್ಲೂ ಯಾವುದೇ ಗಾಯದ ಗುರುತುಗಳಿಲ್ಲ, ಯೋನಿಯ ಹೊರಪದರದಲ್ಲಿ ಯಾವುದೇ ರೀತಿಯ ಹುಣ್ಣೂ ಇಲ್ಲ...' ಎಂದು ವರದಿ ಹೇಳಿದೆ.

5ನೇ ಪುಟ ನೋಡಿ

## ಹೇಳಿಕೆ ಆಧಾರದಲ್ಲಿ ಶಿಕ್ಷೆಯಾಗಲಿ

ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗುವವರ ವಿರುದ್ಧ ತ್ವರಿತ ವಿಚಾರಣೆ ನಡೆಸಿ, ಶಿಕ್ಷೆ ಘೋಷಿಸಬೇಕು. ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತ ಮಕ್ಕಳ ಹೇಳಿಕೆ ಆಧಾರದಲ್ಲೇ ಶಿಕ್ಷೆ ನಿಗದಿ ಮಾಡಬೇಕು. ನೊಂದ ಮಕ್ಕಳು ಆಘಾತದಿಂದ ಹೊರಬರಲು ಕೌನ್ಸೆಲಿಂಗ್ ವ್ಯವಸ್ಥೆ ಮಾಡಬೇಕು. ಇಂತಹ ಪ್ರಕರಣಗಳಲ್ಲಿ ಮಕ್ಕಳಿಗೆ ಸಹಾಯ ಮಾಡಲು ಸರ್ಕಾರ ದಿನದ 24 ಗಂಟೆ ಕಾರ್ಯನಿರ್ವಹಿಸುವ ಕೌನ್ಸೆಲಿಂಗ್ ಕೇಂದ್ರಗಳನ್ನು ತೆರೆಯಬೇಕು.

**–ವಸುಂಧರಾ ಭೂಪತಿ,** ವೈದ್ಯೆ, ಸಾಹಿತಿ

5ನೇ ಪುಟ ನೋಡಿ

## ವ್ಹೀಲಿ ತಡೆಗೆ ಪೊಲೀಸರ ವಿಶೇಷ ಕಾರ್ಯಪಡೆ

ಬೆಂಗಳೂರು: ನಗರದ ಪ್ರಮುಖ ರಸ್ತೆಗಳಲ್ಲಿ ವ್ಹೀಲಿ ಮಾಡುತ್ತಿರುವ ಹಲವರು, ಜನರ ಜೀವನಕ್ಕೆ ಕುತ್ತು ತರುತ್ತಿದ್ದಾರೆ. ಈ ವ್ಹೀಲಿ ನಿಯಂತ್ರಣಕ್ಕೆ ಕಠಿಣ ಕ್ರಮ ಕೈಗೊಂಡಿರುವ ಸಂಚಾರ ಪೊಲೀಸರು, ವಿಶೇಷ ಕಾರ್ಯಪಡೆ ರಚಿಸಿದ್ದಾರೆ.

'ವ್ಹೀಲಿ ಹೆಚ್ಚು ಅಪಾಯಕಾರಿ. ಅದನ್ನು ಮಾಡುವವರನ್ನು ಪತ್ತೆ ಮಾಡಿ ಸವಾರ ಹಾಗೂ ವಾಹನ ಮಾಲೀಕರ ವಿರುದ್ಧ ಕಠಿಣ ಕ್ರಮ ಜರುಗಿಸಲು ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ಪೊಲೀಸರ ವಿಶೇಷ ಕಾರ್ಯಪಡೆ ರಚಿಸಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದರು.

### ನಾಡಪ್ರಭು ಕೆಂಪೇಗೌಡ ಬಿಡಿಎ ಬಡಾವಣೆಯಲ್ಲಿ 12 ಪ್ರಕರಣ

## 'ಸಿಎ' ನಿವೇಶನದಲ್ಲಿ ವಸತಿ ನಿವೇಶನ

• ನವೀನ್ ಮಿನೇಜಸ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 12ಕ್ಕೂ ಹೆಚ್ಚು ನಾಗರಿಕ ಸೌಲಭ್ಯದ (ಸಿಎ) ನಿವೇಶನಗಳ ಪ್ರದೇಶವನ್ನು ನಿವೇಶನಗಳನ್ನಾಗಿ ಅಕ್ರಮವಾಗಿ ನಿರ್ಮಿಸಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ.

ನಿವೇಶನ ಹಂಚಿಕೆ ಸಮಯದಲ್ಲಿ ಉದ್ಯಾನ, ಮೈದಾನ ಸೇರಿ ಸಿಎ ಸೌಲಭ್ಯದ ನಿವೇಶನಗಳನ್ನು ಗುರುತಿಸಲಾಗಿತ್ತು. ಆದರೆ, ಯಾವುದೇ ಸಾರ್ವಜನಿಕ ಪ್ರಕಟಣೆ ನೀಡದೆ ಸಿಎ ನಿವೇಶನಗಳನ್ನು ಪರಿವರ್ತಿಸಲಾಗಿದೆ.

ಪ್ರಾಥಮಿಕ ತನಿಖೆಯಲ್ಲಿ ಶೇ 35ರಷ್ಟು ಸಿಎ ನಿವೇಶನಗಳನ್ನು ಪರಿವರ್ತಿಸಲಾಗಿರುವುದು ಕಂಡುಬಂದಿದೆ. ಇದಲ್ಲದೆ, ವಾಣಿಜ್ಯ ಹಾಗೂ ದೊಡ್ಡ ವಸತಿ ಸಂಕೀರ್ಣಗಳಿಗೆ ಮೀಸಲಾದ ಪ್ರದೇಶವನ್ನು ಸಾಮಾನ್ಯ ನಿವೇಶನಗಳನ್ನಾಗಿ ಪರಿವರ್ತಿಸಿರುವುದು ಬಿಡಿಎಗೆ ದೊಡ್ಡ ನಷ್ಟವಾಗಿದೆ. ಇಂತಹ ನಿವೇಶನಗಳು ಮಾಗಡಿ ರಸ್ತೆ ಮತ್ತು ಮೈಸೂರು ರಸ್ತೆ ಸಂಪರ್ಕಿಸುವ 100 ಅಡಿ ರಸ್ತೆಗೆ ಹೊಂದಿಕೊಂಡಂತಿವೆ.

'ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಡೆದಿರುವ ಅಕ್ರಮದ ಬಗ್ಗೆ ನಗರ ಯೋಜನೆ ಇಲಾಖೆಯ ಮೂರು ಮಂದಿಯ ಸಮಿತಿಯನ್ನು ತನಿಖೆಗೆ ನೇಮಿಸಲಾಗಿದೆ. ಸಿಎ ನಿವೇಶನಗಳಲ್ಲಿ ಸಾಮಾನ್ಯ ನಿವೇಶನಗಳನ್ನು ನಿರ್ಮಿಸಿರುವುದನ್ನು ನಾವು ಗಮನಿಸಿದ್ದೇವೆ. ಇದು ಅಕ್ರಮ' ಎಂದು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಹೇಳಿದರು.

ಬಿಡಿಎ ಆಯುಕ್ತ ಕುಮಾರ್ ನಾಯಕ್ ಅವರನ್ನು ಈ ಅಕ್ರಮದ ಬಗ್ಗೆ ಸಂಪರ್ಕಿಸಿದಾಗ ಅವರು ಅಚ್ಚರಿ ವ್ಯಕ್ತಪಡಿಸಿದರು.

'ಎಂಟು ವರ್ಷದಿಂದ ಬಡಾವಣೆ 2,252 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗುತ್ತಿದೆ. 26,500ಕ್ಕೂ ಹೆಚ್ಚು ನಿವೇಶನಗಳನ್ನು ಹಂಚಿಕೆ ಮಾಡುವ ಗುರಿ ಹೊಂದಿದ್ದು, ಎಂಟು ವರ್ಷದಿಂದ ಇದು ಪೂರ್ಣಗೊಂಡಿಲ್ಲ. ಈಗಾಗಲೇ ನಿವೇಶನ ಪಡೆದಿರುವವರಿಗೆ ಇಂತಹ ಅಕ್ರಮ ಪರಿವರ್ತನೆಯಿಂದ ಹಸಿರು ಹಾಗೂ ಆಟದ ಮೈದಾನ ಲಭ್ಯವಾಗುವುದಿಲ್ಲ' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ವೇದಿಕೆಯ ಸೂರ್ಯ ಕಿರಣ್ ಹೇಳಿದರು.

## ಬೆಂಗಳೂರು– ಮೈಸೂರು ಹೆದ್ದಾರಿ ಅಕ್ಕಪಕ್ಕ ಅಭಿವೃದ್ಧಿಗೆ ಕಾಂಗ್ರೆಸ್ ಮನವಿ

ಬೆಂಗಳೂರು: 'ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಎರಡೂ ಬದಿಯ ಅವೈಜ್ಞಾನಿಕ ಸರ್ವಿಸ್ ರಸ್ತೆಗಳನ್ನು ಸರಿಪಡಿಸಬೇಕು. ಅಂಡರ್‌ಪಾಸ್ ರಸ್ತೆಗಳಲ್ಲಿ ಮಳೆ ನೀರು ನಿಲ್ಲದಂತೆ ದುರಸ್ತಿ ಮಾಡಲು ಅಧಿಕಾರಿಗಳಿಗೆ ಸೂಚಿಸಬೇಕು' ಎಂದು ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿಗೆ ಸಂಸದ ಡಿ.ಕೆ. ಸುರೇಶ್ ಮನವಿ ಸಲ್ಲಿಸಿದರು.


ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಕಾಮಗಾರಿಯನ್ನು ಗುರುವಾರ ಪರಿಶೀಲಿಸಿದ ಗಡ್ಕರಿ ಅವರಿಗೆ ಮನವಿ ಸಲ್ಲಿಸಿದ ಸುರೇಶ್, ತಮ್ಮ ಕ್ಷೇತ್ರದ ವ್ಯಾಪ್ತಿಯ ಪ್ರಮುಖ ಸ್ಥಳಗಳಲ್ಲಿ ಸುಗಮ ಸಂಚಾರಕ್ಕಾಗಿ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಆಗ್ರಹಿಸಿದರು.

'ಬೆಂಗಳೂರು–ದಿಂಡಗಲ್ ಹೆದ್ದಾರಿ 209ರ ವ್ಯಾಪ್ತಿಯಲ್ಲಿ ಕಾಮಗಾರಿಗೆ ಮಂಜೂರಾತಿ ನೀಡಬೇಕು. ಹೆದ್ದಾರಿ ಹಾದುಹೋಗುವ ಕನಕಪುರ ಬೈಪಾಸ್, ಕನಕಪುರ ಬೈಪಾಸ್‌ನ ಎಪಿಎಂಸಿ ಯಾರ್ಡ್‌ನಿಂದ ಸಮೀಪದ ಮುಖ್ಯರಸ್ತೆವರೆಗೆ, ಕನಕಪುರ ಬೈಪಾಸ್‌ನಿಂದ ಹೊರನಡೆಯುವ ಕಡೆ ಬಲಭಾಗದಲ್ಲಿ ಸರ್ವಿಸ್ ರಸ್ತೆ, ಹಾರೋಹಳ್ಳಿ ಕೈಗಾರಿಕಾ ಪ್ರದೇಶ, ಹಾರೋಹಳ್ಳಿ ಬೈಪಾಸ್‌ಗಳಲ್ಲಿ ವಾಹನ ಸಂಚಾರಕ್ಕೆ ಅಂಡರ್ ಪಾಸ್ ನಿರ್ಮಿಸಬೇಕು. ಕನಕಪುರ ಪಟ್ಟಣ ಅಭಿವೃದ್ಧಿ, ಅರ್ಕಾವತಿ ನದಿಗೆ ಬಲಭಾಗದಲ್ಲಿ ಪರ್ಯಾಯ ಸೇತುವೆ ನಿರ್ಮಾಣ, ಶನಿಮಹಾತ್ಮ ದೇವಾಲಯ, ರವಿಶಂಕರ್ ಗುರೂಜಿ ಆಶ್ರಮ, ಕಗ್ಗಲಿಪುರ ಸರ್ಕಾರಿ ಶಾಲಾ ವಲಯ, ಹಾರೋಹಳ್ಳಿ ಕೈಗಾರಿಕಾ ಪ್ರದೇಶ, ಜೈನ್ ವಿ.ವಿ, ಸಾತನೂರು ಜಂಕ್ಷನ್, ಜಕ್ಕೇಗೌಡನದೊಡ್ಡಿ ವ್ಯಾಪ್ತಿಯಲ್ಲಿ ಮೇಲ್ಸೇತುವೆ ನಿರ್ಮಿಸಬೇಕು'.

'ಬಿಡದಿಯಿಂದ ಅತ್ತಿಬೆಲೆ, ರಾ.ಹೆ.44ರ ಹಾರೋಹಳ್ಳಿ, ಜಿಗಣಿ, ಆನೇಕಲ್ ಮಾರ್ಗವಾಗಿ ಸಾಗುವ ಬೆಂಗಳೂರು–ಚೆನ್ನೈ ಹೆದ್ದಾರಿಯಲ್ಲಿ ಜಂಕ್ಷನ್‌ಗಳ ಅಭಿವೃದ್ಧಿ ಮಾಡಬೇಕು. ಚನ್ನಪಟ್ಟಣದಲ್ಲಿ ಕರಕುಶಲ ಕಲಾಗ್ರಾಮ ನಿರ್ಮಿಸಬೇಕು' ಎಂದೂ ಕೋರಿದ್ದಾರೆ.

**ಮನವಿ:** 'ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣದ ಜನರು ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯನ್ನು ಬಳಸಲು ಅವಕಾಶ ಮಾಡಿಕೊಡಬೇಕು. ಈ ಯೋಜನೆಗೆ ಭೂಮಿ ನೀಡಿದ ರೈತರಿಗೆ ಸೂಕ್ತ ಪರಿಹಾರ ನೀಡಬೇಕು. ಈ ಹೆದ್ದಾರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿಡಬೇಕು' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಮಾದೇಗೌಡ, ಮರಿತಿಬ್ಬೇಗೌಡ ಮನವಿ ಮಾಡಿದ್ದಾರೆ.





### ಮೂರು ಗೋಷ್ಠಿ, ಕವಿಗೋಷ್ಠಿ, ವ್ಯಂಗ್ಯ ಚಿತ್ರ ಪ್ರದರ್ಶನ

# 8ರಂದು ಜನ ಸಾಹಿತ್ಯ ಸಮ್ಮೇಳನ: ಮೂಡ್ನಾಕೂಡು ಉದ್ಘಾಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆ.ಆರ್.ವೃತ್ತದ ಅಲುಮ್ನಿ ಅಸೋಷಿಯೇಷನ್ ಆವರಣದ ಸಂತ ಶಿಶುನಾಳ ಶರೀಫ ಮತ್ತು ಗುರುಗೋವಿಂದ ಭಟ್ಟ ಸಭಾಂಗಣದಲ್ಲಿ ಜ.8ರಂದು ನಡೆಯಲಿರುವ ಜನ ಸಾಹಿತ್ಯ ಸಮ್ಮೇಳನವನ್ನು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಉದ್ಘಾಟಿಸಲಿದ್ದಾರೆ.

ಬೆಳಿಗ್ಗೆ 10ಕ್ಕೆ ನಡೆಯಲಿರುವ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಬಾನು ಮುಷ್ತಾಕ್ ವಹಿಸುವರು, ಪುರುಷೋತ್ತಮ ಬಿಳಿಮಲೆ ಅವರು ದಿಕ್ಸೂಚಿ ಭಾಷಣ ಮಾಡುವರು. ಎಸ್. ಜಾಫೆಟ್, ಜಾಣಗೆರೆ ವೆಂಕಟರಾಮಯ್ಯ, ಜೆನ್ನಿ, ಅಗ್ನಿ ಶ್ರೀಧರ್, ಅಕ್ಕೈ ಪದ್ಮಶಾಲಿ, ವಡ್ಡಗೆರೆ ನಾಗರಾಜಯ್ಯ ಉಪಸ್ಥಿತರಿರುವರು.

ಸಮ್ಮೇಳನದ ಸಮಾರೋಪ ಸಂಜೆ 5ಕ್ಕೆ ನಡೆಯಲಿದ್ದು, ಕೆ.ಮರುಳಸಿದ್ದಪ್ಪ ಸಮಾರೋಪ ಭಾಷಣ ಮಾಡುವರು. ಜಿ.ರಾಮಕೃಷ್ಣ ಅಧ್ಯಕ್ಷತೆ ವಹಿಸುವರು. ಸಿ.ಬಸವಲಿಂಗಯ್ಯ, ಪಿಚ್ಚಳ್ಳಿ ಶ್ರೀನಿವಾಸ್, ದು.ಸರಸ್ವತಿ, ಯು.ಟಿ. ಫರ್ಜಾನ, ವಸಂತರಾಜ್, ಅನಂತ್ ನಾಯಕ್, ರವಿಕುಮಾರ್ ಟೆಲೆಕ್ಸ್ ಭಾಗವಹಿಸುವರು. ಸಮುದಾಯ ಬೆಂಗಳೂರು ಅವರಿಂದ 'ಬೀದಿಗೆ ಬರಲಿ ಕಲೆ ಸಾಹಿತ್ಯ' ಬೀದಿ ನಾಟಕ ಪ್ರದರ್ಶನವಿರುತ್ತದೆ.


ಮೂಡ್ನಾಕೂಡು ಚಿನ್ನಸ್ವಾಮಿ

ಅಂದು ಬೆಳಿಗ್ಗೆ 9ಕ್ಕೆ ವಾಟಾಳ್ ನಾಗರಾಜ್, ಶಿವರಾಮೇಗೌಡ, ಬಿ.ಎನ್. ಜಗದೀಶ್ ಕನ್ನಡ ಧ್ವಜಾರೋಹಣ ನೆರವೇರಿಸುವರು.

9.30ಕ್ಕೆ ಬಂಡಾಯದ ಗೆರೆಗಳು: ವ್ಯಂಗ್ಯಚಿತ್ರ ಮತ್ತು ಪೋಸ್ಟರ್‌ಗಳ ಪ್ರದರ್ಶನಕ್ಕೆ ರಘುನಂದನ ಚಾಲನೆ ನೀಡುವರು. ಪಿ.ಮಹಮದ್, ದಿನೇಶ್ ಕುಕ್ಕುಜಡ್ಕ, ಸತೀಶ್ ಆಚಾರ್ಯ, ಪಂಜುಗಂಗೊಳ್ಳಿ, ಬಾದಲ್ ನಂಜುಂಡಸ್ವಾಮಿ, ಚಂದ್ರಶೇಖರ್ ಶೆಟ್ಟಿ, ಚೇತನ್ ಪುತ್ತೂರು, ಸರೋವರ್ ಬೆಂಕಿಕೆರೆ, ಉದಯ್ ಗಾಂವ್ಕರ್, ನವೀನ್ ಹಾಸನ ಮತ್ತಿತರರು ಭಾಗವಹಿಸುವರು.

ಮಧ್ಯಾಹ್ನ 12.30ರಿಂದ ವಿಚಾರಗೋಷ್ಠಿ ಆರಂಭವಾಗಲಿದೆ. ಡಾ.ಮಹಮದ್ ಮುಸ್ತಾಫಾ ಅವರು 'ಸಾಹಿತ್ಯ, ಪ್ರಭುತ್ವ ಮತ್ತು ಬಹುತ್ವ' ಕುರಿತು, ಟಿ.ಗುರುರಾಜ್ ಅವರು 'ಕನ್ನಡ ನಾಡು ನುಡಿಗೆ ಟಿಪ್ಪು ಕೊಡುಗೆಗಳು' ಕುರಿತು ವಿಷಯ ಮಂಡಿಸುವರು, ನಾ. ದಿವಾಕರ್ ಅಧ್ಯಕ್ಷತೆ ವಹಿಸುವರು. ಈ ಸಮಯದಲ್ಲಿ ಲಿಂಗದೇವರು ಹಳೆಮನೆ ಸಂಪಾದಕತ್ವದ 'ಧೀರ ಟಿಪ್ಪು ಲಾವಣಿಗಳು' ಗುರುರಾಜ್ ಅವರ 'ನಮ್ಮ ಟಿಪ್ಪು– ವಂದತಿ ಮತ್ತು ಸತ್ಯ ಸಂಗತಿ' ಪುಸ್ತಕಗಳ ಬಿಡುಗಡೆ ಮಾಡಲಾಗುತ್ತದೆ.

ಮಧ್ಯಾಹ್ನ 1.30ರಿಂದ ಆಹಾರಗೋಷ್ಠಿ ನಡೆಯಲಿದೆ. ರಂಗನಾಥ್ ಕಂಟನಕುಂಟೆ, ಪಲ್ಲವಿ ಇಡೂರ್ ಅವರು 'ಆಹಾರದ ಮೇಲಿನ ರಾಜಕಾರಣ ಮತ್ತು ದೌರ್ಜನ್ಯ ವಿಷಯ ಮಂಡನೆ ಮಾಡುವರು. ಮಧ್ಯಾಹ್ನ 2ರಿಂದ ಬಂಜಗೆರೆ ಜಯಪ್ರಕಾಶ್ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಲಿದೆ. ಮಧ್ಯಾಹ್ನ 3ರಿಂದ ಮೂರನೇ ಗೋಷ್ಠಿ ನಡೆಯಲಿದೆ. 'ಸೌಹಾರ್ದತೆ ಮತ್ತು ಕನ್ನಡತನ' ಕುರಿತು ರಾಜೇಂದ್ರ ಚೆನ್ನಿ, 'ಅಲ್ಪಸಂಖ್ಯಾತರು ಮತ್ತು ದಲಿತರ ಮೇಲಿನ ದಾಳಿ: ಸಾಹಿತ್ಯ ಲೋಪದ ಜವಾಬ್ದಾರಿಗಳು' ಕುರಿತು ಮಾವಳ್ಳಿ ಶಂಕರ್, 'ಕನ್ನಡವನ್ನು ಬೆಳಗಿಸಿದ ಕ್ರೈಸ್ತ ಮಿಷನರಿಗಳು' ಕುರಿತು ಕುಮಾರಸ್ವಾಮಿ ಬೆಜ್ಜಿಹಳ್ಳಿ ವಿಷಯ ಮಂಡಿಸುವರು.

## ಪೊಲೀಸರ ವಶದಲ್ಲಿದ್ದಾಗ ಸಾವು: ಪ್ರತಿಭಟನೆ

**ಬೆಂಗಳೂರು:** ಕಾಟನ್‌ಪೇಟೆ ಪೊಲೀಸರ ವಶದಲ್ಲಿದ್ದ ವಿನೋದ್ (22) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಗುರುವಾರ ಮೃತಪಟ್ಟಿದ್ದು, ಸಿಐಡಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಪೊಲೀಸರು ಹಲ್ಲೆ ಮಾಡಿದ್ದರಿಂದ ವಿನೋದ್ ಮೃತಪಟ್ಟಿದ್ದಾರೆ' ಎಂದು ಆರೋಪಿಸಿ ಸಂಬಂಧಿಕರು ಠಾಣೆ ಎದುರು ರಾತ್ರಿ ಪ್ರತಿಭಟನೆ ನಡೆಸಿದರು. 'ಸುಳ್ಳು ಆರೋಪ ಹೊರಿಸಿ ಪೊಲೀಸರೇ ಕೊಲೆ ಮಾಡಿದ್ದಾರೆ. ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಅಣ್ಣ ಕುಮರೇಶ್ ಒತ್ತಾಯಿಸಿದರು.

'ವಿನೋದ್ ವಿರುದ್ಧ ಡಕಾಯಿತಿ ಆರೋಪದಡಿ 2017ರಲ್ಲಿ ಪ್ರಕರಣ ದಾಖಲಾಗಿತ್ತು. ಜಾಮೀನು ಪಡೆದಿದ್ದ ವಿನೋದ್, ವಿಚಾರಣೆಗೆ ಗೈರು ಹಾಜರಾಗುತ್ತಿದ್ದ. ಹೀಗಾಗಿ, ಈತನ ಬಂಧನಕ್ಕೆ ಜಾಮೀನು ರಹಿತ ವಾರಂಟ್ ಹೊರಡಿಸಲಾಗಿತ್ತು.' ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

'ವಿನೋದ್‌ನನ್ನು ಬುಧವಾರ ರಾತ್ರಿ ಪೊಲೀಸರು ಠಾಣೆಗೆ ಕರೆತಂದಿದ್ದರು. ನಸುಕಿನ 3.15 ಗಂಟೆಗೆ ಠಾಣಾಧಿಕಾರಿ, ವಿನೋದ್‌ನನ್ನು ಎಬ್ಬಿಸಲು ಹೋಗಿದ್ದರು. ಆದರೆ, ಅವರಿಗೆ ಪ್ರಜ್ಞೆ ಇರಲಿಲ್ಲ. ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲಾಯಿತು. ವಿನೋದ್ ಮೃತಪಟ್ಟಿದ್ದಾಗಿ ವೈದ್ಯರು ತಿಳಿಸಿದರು. ಪೊಲೀಸರ ವಶದಲ್ಲಿ ಸಾವು ಸಂಭವಿಸಿರುವ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.


ರಾಜ್ಯ ಕೆಎಎಸ್ ಅಧಿಕಾರಿಗಳ ಸಂಘ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 2023ನೇ ವರ್ಷದ ದಿನದರ್ಶಿಕೆ, ದಿನಚರಿಯನ್ನು ಕಂದಾಯ ಸಚಿವ ಆರ್‌. ಅಶೋಕ್ ಬಿಡುಗಡೆ ಮಾಡಿದರು. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಪಿ.ಹೇಮಲತಾ, ಕಂದಾಯ ಇಲಾಖೆ ಕಾರ್ಯದರ್ಶಿ ಎನ್‌. ಜಯರಾಮ್, ಸಂಘದ ಅಧ್ಯಕ್ಷ ರವಿ ಎಂ. ತಿರ್ಲಾಪುರ , ಉಪಾಧ್ಯಕ್ಷ ಎಂ.ಕೆ. ಜಗದೀಶ್, ಕಾರ್ಯದರ್ಶಿ ಡಾ.ಬಿ.ಆರ್‌. ಹರೀಶ್ ನಾಯ್ಕ ಇದ್ದರು.

## ಟಿಆರ್‌ಎಫ್ ನಿಷೇಧ

**ನವದೆಹಲಿ (ಪಿಟಿಐ):** ಎಲ್‌ಇಟಿಯ ಶಾಖೆ, ದಿ ರೆಸಿಸ್ಟನ್ಸ್ ಫ್ರಂಟ್ ಅನ್ನು ನಿಷೇಧಿಸಿರುವ ಗೃಹ ಸಚಿವಾಲಯ, ಎಲ್‌ಇಟಿಯ ಸಜ್ಜಾದ್ ಗುಲ್‌ನನ್ನು 'ಉಗ್ರರ ಪಟ್ಟಿ'ಗೆ ಸೇರಿಸಿ ಆದೇಶಿಸಿದೆ.














### ಸಂಕ್ಷಿಪ್ತ ಸುದ್ದಿ

## ಜಲಮಂಡಳಿ ಫೋನ್–ಇನ್ ನಾಳೆ

**ಬೆಂಗಳೂರು:** ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಇದೇ 7ರಂದು ಬೆಳಿಗ್ಗೆ 9ರಿಂದ 10.30ರವರೆಗೆ ನೇರ ಫೋನ್–ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ.

ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಅವರು ಅಹವಾಲು ಆಲಿಸಲಿದ್ದಾರೆ. ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆಗಳಿಂದ ತ್ಯಾಜ್ಯ ನೀರು, ಜಲಮಾಪನ ಹಾಗೂ ನೀರಿನ ಬಿಲ್ ಸಮಸ್ಯೆಯ ಬಗ್ಗೆ ಮಾತನಾಡಿ ಕುಂದು–ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆ ತಿಳಿಸಿ ದೂರು ನೀಡಬಹುದು. ದೂರವಾಣಿ ಸಂಖ್ಯೆ: 080-22945119.

## ಕೆರೆಯಲ್ಲಿ ಮುಳುಗಿ ಯುವ ವೈದ್ಯ ಸಾವು

**ಕನಕಪುರ:** ತಾಲ್ಲೂಕಿನ ಮಾವತ್ತೂರು ಕೆರೆಯ ವೀಕ್ಷಣೆಗೆ ಬಂದಿದ್ದ ವೈದ್ಯರ ತಂಡದಲ್ಲಿದ್ದ ತರಬೇತಿ ನಿರತ ಯುವ ವೈದ್ಯರೊಬ್ಬರು ಗುರುವಾರ ಸಂಜೆ ನೀರಿನಲ್ಲಿ ಮುಳುಗಿ ಸಾವನಪ್ಪಿದ್ದಾರೆ.

ಬೆಂಗಳೂರಿನ ಅಂಬೇಡ್ಕರ್ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ಮುಗಿಸಿ ಇಂಟರ್ನ್‌ಶಿಪ್ ಮಾಡುತ್ತಿದ್ದ ಕೋಲಾರದ ಭರತ್ ಅಶ್ವಥ್ ರೆಡ್ಡಿ (24) ಮೃತ ವೈದ್ಯ.

ಕನಕಪುರ ತಾಲ್ಲೂಕಿನ ಹಲಸೂರಿನಲ್ಲಿರುವ ಅಂಬೇಡ್ಕರ್ ಕಾಲೇಜಿನ ಆಸ್ಪತ್ರೆಗೆ ವೈದ್ಯಕೀಯ ತರಬೇತಿಗಾಗಿ ಹತ್ತು ಯುವ ವೈದ್ಯರ ತಂಡ ಬೆಂಗಳೂರಿನಿಂದ ಬಂದಿತ್ತು. ಮಾವತ್ತೂರು ಕೆರೆ ವೀಕ್ಷಣೆಗಾಗಿ ಕೆರೆಗೆ ತೆರಳಿತ್ತು. ಭರತ್ ರೆಡ್ಡಿ ಕಾಲು ಜಾರಿ ಬಿದ್ದು ಸಾವನ್ನಪ್ಪಿದ್ದಾರೆ.

ಜೊತೆಯಲ್ಲಿದ್ದ ವೈದ್ಯರು ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಶವವನ್ನು ಹೊರ ತೆಗೆದಿದ್ದಾರೆ.

## ಎಕ್ಸ್‌ಬಿಬಿ.1.5 : ಪ್ರಕರಣ 7 ಕ್ಕೆ ಏರಿಕೆ

**ನವದೆಹಲಿ (ಪಿಟಿಐ):** ದೇಶದಲ್ಲಿ ಕೊರೊನಾ ವೈರಸ್‌ನ ಎಕ್ಸ್‌ಬಿಬಿ.1.5 ತಳಿ ಸೋಂಕಿನ ಪ್ರಕರಣಗಳ ಸಂಖ್ಯೆ 7ಕ್ಕೆ ಏರಿಕೆಯಾಗಿದೆ ಎಂದು ವೈರಾಣು ಸಂರಚನಾ ವಿಶ್ಲೇಷಣೆ ಸಂಸ್ಥೆ (ಐಎನ್‌ಎಸ್‌ಎಸಿಒಜಿ) ದತ್ತಾಂಶಗಳಿಂದ ಗುರುವಾರ ತಿಳಿದು ಬಂದಿದೆ.

ಛತ್ತೀಸಗಢ ಹಾಗೂ ತೆಲಂಗಾಣದಲ್ಲಿ ತಲಾ ಒಂದು ಹೊಸ ಪ್ರಕರಣ ವರದಿಯಾಗಿವೆ ಎಂದು ಸಂಸ್ಥೆ ತಿಳಿಸಿದೆ.

## ವೃದ್ಧೆ ಕೈ– ಕಾಲು ಕಟ್ಟಿಹಾಕಿ ದರೋಡೆ

**ಬೆಂಗಳೂರು:** ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿದ್ದ ದುಷ್ಕರ್ಮಿಗಳು, ವೃದ್ಧೆಯೊಬ್ಬರ ಕೈ–ಕಾಲು ಕಟ್ಟಿಹಾಕಿ ಚಿನ್ನಾಭರಣ ಹಾಗೂ ನಗದು ದೋಚಿದ್ದಾರೆ.

'ಜ. 3ರ ದರೋಡೆ ಬಗ್ಗೆ ವೃದ್ಧೆಯ ಮಗಳು ದೂರು ನೀಡಿದ್ದಾರೆ. ದುಷ್ಕರ್ಮಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು. '57 ವರ್ಷ ವಯಸ್ಸಿನ ಶ್ರೀಲಕ್ಷ್ಮಿ ಅವರು ವೈದ್ಯೆಯಾಗಿರುವ ಮಗಳ ಜೊತೆ ವಾಸವಿದ್ದಾರೆ. ಜ. 3ರಂದು ಬೆಳಿಗ್ಗೆ ಮಗಳು ಎಂದಿನಂತೆ ಕ್ಲಿನಿಕ್‌ಗೆ ಹೋಗಿದ್ದರು'.

'ಮನೆಗೆ ನುಗ್ಗಿದ್ದ ಆರೋಪಿಗಳು, ಶ್ರೀಲಕ್ಷ್ಮಿ ಮೇಲೆ ಹಲ್ಲೆ ಮಾಡಿದ್ದರು. ₹ 3.50 ಲಕ್ಷ ನಗದು, ₹ 4 ಲಕ್ಷ ಮೌಲ್ಯದ ಚಿನ್ನಾಭರಣ, ಮೊಬೈಲ್ ದೋಚಿ ಆರೋಪಿಗಳು ಪರಾರಿಯಾಗಿದ್ದಾರೆ' ಎಂದು ಪೊಲೀಸರು ತಿಳಿಸಿದರು.

# ಮಹದಾಯಿ: ಗೋವಾ ಸರ್ಕಾರದ ದ್ವಂದ್ವ

ನವದೆಹಲಿ: ವನ್ಯಜೀವಿ ಧಾಮದಿಂದ ಕಳಸಾ ಬಂಡೂರಿ ಯೋಜನೆಗೆ ಮಹದಾಯಿ ನೀರನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿ ಕರ್ನಾಟಕ ಸರ್ಕಾರಕ್ಕೆ ವನ್ಯಜೀವಿ ಕಾಯ್ದೆಯಡಿ ನೋಟಿಸ್ ನೀಡಲು ಗೋವಾ ಸರ್ಕಾರ ತೀರ್ಮಾನಿಸಿದೆ. ಆದರೆ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು (ಎನ್‌ಟಿಸಿಎ) ಹಲವು ಸಲ ನಿರ್ದೇಶನ ನೀಡಿದ ಬಳಿಕವೂ 'ಮಹದಾಯಿ ವನ್ಯಜೀವಿ ಧಾಮ'ವನ್ನು ಹುಲಿ ಸಂರಕ್ಷಣಾ ಪ್ರದೇಶವನ್ನಾಗಿ ಘೋಷಿಸಲು ಗೋವಾ ಸರ್ಕಾರ ಮೀನಮೇಷ ಎಣಿಸುತ್ತಿದೆ.

ಕಳಸಾ–ಬಂಡೂರಿ ಯೋಜನೆಯ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ



ಕೇಂದ್ರ ಜಲ ಆಯೋಗ ಡಿಸೆಂಬರ್ 29ರಂದು ಅನುಮೋದನೆ ನೀಡಿದೆ. ಅದರ ಬೆನ್ನಲ್ಲೇ ವಿಶೇಷ ಸಚಿವ ಸಂಪುಟ ಸಭೆ ನಡೆಸಿದ ಗೋವಾ ಸರ್ಕಾರ, ವನ್ಯಜೀವಿ ಕಾಯ್ದೆಯಡಿ ಕರ್ನಾಟಕ ಸರ್ಕಾರಕ್ಕೆ ನೋಟಿಸ್ ನೀಡಲು ನಿರ್ಧರಿಸಿತು. 'ವನ್ಯಜೀವಿ ಧಾಮದಿಂದ ನೀರನ್ನು ತೆಗೆದುಕೊಂಡು ಹೋಗಲು ಕರ್ನಾಟಕ ಸರ್ಕಾರಕ್ಕೆ ಅಧಿಕಾರ ಇಲ್ಲ. ಇದಕ್ಕೆ ನಾವು ಅವಕಾಶ ನೀಡುವುದಿಲ್ಲ. ಮಹದಾಯಿ ನ್ಯಾಯಾಧೀಕರಣ ಕರ್ನಾಟಕಕ್ಕೆ 3.9 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿದೆ. ಇದನ್ನು ನಾವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದ್ದೇವೆ' ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಸೋಮವಾರ ಹೇಳಿಕೆ ನೀಡಿದ್ದಾರೆ.

ಮಹದಾಯಿ ವನ್ಯಜೀವಿ ಧಾಮದಲ್ಲಿ 2019ರ ಡಿಸೆಂಬರ್ ತಿಂಗಳಲ್ಲಿ ಹುಲಿ ಹಾಗೂ ಮೂರು ಮರಿಗಳು ಮೃತಪಟ್ಟಿದ್ದವು. ಹುಲಿ ಸಂರಕ್ಷಣಾ ಪ್ರಾಧಿಕಾರದ ಹಿರಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು. ಮಹದಾಯಿ ವನ್ಯಜೀವಿ ಧಾಮವನ್ನು ಹುಲಿ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಬೇಕು ಎಂದು ಎನ್‌ಟಿಸಿಎ 2020ರ ಜನವರಿಯಲ್ಲಿ ಗೋವಾ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಆದರೆ, ಗೋವಾ ಸರ್ಕಾರ ಕ್ರಮ ಕೈಗೊಂಡಿರಲಿಲ್ಲ. 2022ರ ಸೆಪ್ಟೆಂಬರ್‌ನಲ್ಲಿ ಮತ್ತೊಮ್ಮೆ ಪತ್ರ ಬರೆದಿದ್ದ ಪ್ರಾಧಿಕಾರ, ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ತಾಕೀತು ಮಾಡಿತ್ತು. ಆ ಬಳಿಕವೂ ಸರ್ಕಾರ ಕ್ರಮ ಕೈಗೊಂಡಿರಲಿಲ್ಲ.

'ಮಹದಾಯಿ ಯೋಜನೆಗೆ ವನ್ಯಜೀವಿ ಧಾಮದಿಂದ ನೀರು ಬಳಸಿಕೊಳ್ಳುತ್ತಿಲ್ಲ. ಜತೆಗೆ, ವನ್ಯಜೀವಿ ಧಾಮದಲ್ಲೂ ಯೋಜನೆ ಅನುಷ್ಠಾನ ಮಾಡುತ್ತಿಲ್ಲ. ಕರ್ನಾಟಕದ ವ್ಯಾಪ್ತಿಯಲ್ಲೇ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ನ್ಯಾಯಾಧೀಕರಣ ಹಂಚಿಕೆ ಮಾಡಿರುವ ನೀರನ್ನು ಬಳಸಿಕೊಳ್ಳಲು ಯೋಜನೆ ರೂಪಿಸಲಾಗಿದೆ. ಗೋವಾ ಸರ್ಕಾರ ಅನಗತ್ಯವಾಗಿ ತಕರಾರು ಎತ್ತುತ್ತಿದೆ' ಎಂದು ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

## ಸಿಎಂ ರಾಜಿನಾಮೆಗೆ ಒತ್ತಾಯ

ಪಣಜಿ: ಕಳಸಾ–ಬಂಡೂರಿ ಯೋಜನೆಯ ಸಮಗ್ರ ಯೋಜನಾ ವರದಿಗೆ (ಡಿಪಿಆರ್) ಕೇಂದ್ರ ಜಲ ಆಯೋಗ ನೀಡಿರುವ ಅನುಮೋದನೆ ರದ್ದತಿಗೆ ಹೋರಾಟ ಮಾಡದಿದ್ದರೆ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ರಾಜೀನಾಮೆ ನೀಡಬೇಕು ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಗುರುವಾರ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟಿಎಂಸಿ ರಾಜ್ಯ ಸಂಚಾಲಕ ಸಾಮಿಲ್ ವೋಲ್ವೋಕರ್, ಮಹದಾಯಿಯನ್ನು ಉಳಿಸಿಕೊಳ್ಳಲು ಆಂದೋಲನ ಒಂದೇ ದಾರಿಯಾಗಿದೆ. ಆದ್ದರಿಂದ ಬುಧವಾರದಿಂದ ಪ್ರತಿಭಟನೆ ಆರಂಭಿಸಿದ್ದೇವೆ. ಈ ಕುರಿತು ರಾಜ್ಯಪಾಲ ಪಿ.ಎಸ್.ಶ್ರೀಧರನ್ ಪಿಳ್ಳೈ ಅವರೊಂದಿಗೆ ಚರ್ಚಿಸಲಾಗಿದೆ. ಸಿಎಂಗೆ ಮಹದಾಯಿಯನ್ನು ಉಳಿಸಲು ಸಾಧ್ಯವಾಗದಿದ್ದರೆ ಅವರು ತಮ್ಮ ಸ್ಥಾನ ತ್ಯಜಿಸಬೇಕು ಎಂದು ವೋಲ್ವೋಕರ್ ಹೇಳಿದ್ದಾರೆ.

## ಐವರು ಆರೋಪಿಗಳು ಪೊಲೀಸ್ ವಶಕ್ಕೆ

ನವದೆಹಲಿ (ಪಿಟಿಐ): ಕಾರಿನಡಿ ಸಿಲುಕಿದ್ದ ಯುವತಿಯ ಮೃತದೇಹವನ್ನು ಸುಮಾರು 13 ಕಿ.ಮೀ.ವರೆಗೂ ಎಳೆದೊಯ್ದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಇಲ್ಲಿನ ನ್ಯಾಯಾಲಯ ಗುರುವಾರ ನಾಲ್ಕು ದಿನಗಳ ಕಾಲ ಪೊಲೀಸ್ ವಶಕ್ಕೆ ಒಪ್ಪಿಸಿದೆ.

ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಸನ್ಯಾ ದಲಾಲ್ ಅವರು ಆರೋಪಿಗಳನ್ನು 5 ದಿನಗಳ ಬದಲಿಗೆ ನಾಲ್ಕು ದಿನ ವಿಚಾರಣೆ ನಡೆಸಲು ದೆಹಲಿ ಪೊಲೀಸರಿಗೆ ಅನುಮತಿ ನೀಡಿದರು.

ವಿಚಾರಣೆಯ ಸಮಯದಲ್ಲಿ ತನಿಖಾಧಿಕಾರಿಯು ಪೊಲೀಸ್ ವಶಕ್ಕೆ ಹೆಚ್ಚಿನ ದಿನ ನೀಡುವಂತೆ ಮನವಿ ಮಾಡಿದರು.

## ಅಫ್ಗಾನಿಸ್ತಾನದಲ್ಲಿ ಭೂಕಂಪ; ದೆಹಲಿಯಲ್ಲಿ ಕಂಪನದ ಅನುಭವ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದಲ್ಲಿ ಗುರುವಾರ 5.9 ತೀವ್ರತೆಯ ಭೂಕಂಪ ಸಂಭವಿಸಿದ್ದು, ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರಬಲ ಕಂಪನದ ಅನುಭವವಾಗಿದೆ.

ಯಾವುದೇ ಹಾನಿ ಬಗ್ಗೆ ತಕ್ಷಣದ ವರದಿಯಾಗಿಲ್ಲ. ಅಫ್ಗಾನಿಸ್ತಾನದ ಹಿಂದೂ ಕುಶ್ ಪ್ರದೇಶದಲ್ಲಿ ಸಂಜೆ 7.55 ರ ಸುಮಾರಿಗೆ ಭೂಕಂಪ ಸಂಭವಿಸಿದೆ. ಭೂಕಂಪದ ಕೇಂದ್ರ ಬಿಂದು ಅಫ್ಗಾನಿಸ್ತಾನದ ಫೈಜಾಬಾದ್‌ನಿಂದ ದಕ್ಷಿಣಕ್ಕೆ 79 ಕಿ.ಮೀ ದೂರದಲ್ಲಿ 200 ಕಿ.ಮೀ ಆಳದಲ್ಲಿತ್ತು.

ಒಂದು ವಾರದಲ್ಲಿ ಎರಡನೇ ಬಾರಿಗೆ ದೆಹಲಿಯಲ್ಲಿ ಕಂಪನದ ಅನುಭವವಾಗಿದೆ.

## ನುಡಿಜಾತ್ರೆಯ ತೇರಿಗೆ ಹಾವೇರಿಯಲ್ಲಿ ಇಂದು ಚಾಲನೆ

ಒಂದನೇ ಪುಟದಿಂದ...

**ಕನ್ನಡ ರಥ ಸಂಚಾರ:** ನುಡಿಜಾತ್ರೆಯ ಸಂದೇಶ ಸಾರುವ 'ಕನ್ನಡ ರಥ'ವು ರಾಜ್ಯದ 31 ಜಿಲ್ಲೆಗಳಲ್ಲಿ ತಿಂಗಳ ಕಾಲ ಸಂಚರಿಸಿ ಹಾವೇರಿ ನಗರಕ್ಕೆ ಗುರುವಾರ (ಜ.5) ಮರಳಿ ಬಂದಿದ್ದು, ಸಿದ್ದಾಪುರ ತಾಲ್ಲೂಕಿನ ಭುವನಗಿರಿಯ ಭುವನೇಶ್ವರಿ ದೇಗುಲದಿಂದ ತೆಗೆದುಕೊಂಡ ದೀಪದಿಂದಲೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟನೆ ಮಾಡಲಿರುವುದು ಈ ಬಾರಿಯ ವಿಶೇಷ.

**ಕೋಟೆ ಮಾದರಿ ಮುಖ್ಯದ್ವಾರ:** ಹಾವೇರಿ ನಗರದ ಹೊರವಲಯದ ಅಜ್ಜಯ್ಯನ ದೇವಸ್ಥಾನದ ಎದುರು ಸುವಿಶಾಲವಾದ 128 ಎಕರೆಯಲ್ಲಿ ಜರ್ಮನ್ ತಂತ್ರಜ್ಞಾನ ಆಧಾರಿತ ಭವ್ಯ ವೇದಿಕೆ ನಿರ್ಮಿಸಲಾಗಿದೆ. ಪ್ರಧಾನ ವೇದಿಕೆ (ಕನಕ– ಶರೀಫ– ಸರ್ವಜ್ಞ) ಹಾಗೂ ಎರಡು ಸಮಾನಾಂತರ ವೇದಿಕೆಗಳಿಗೆ (ಪಾಪು– ಚಂಪಾ ವೇದಿಕೆ ಮತ್ತು ಹಾನಗಲ್ ಕುಮಾರ ಶಿವಯೋಗಿಗಳ ವೇದಿಕೆ) ಜನರು ಆಗಮಿಸಲು ಮತ್ತು ನಿರ್ಗಮಿಸಲು ಕೋಟೆ ಮಾದರಿಯ 3 ದ್ವಾರಬಾಗಿಲುಗಳನ್ನು ನಿರ್ಮಿಸಲಾಗಿದೆ.

**ಭೂರಿ ಭೋಜನ:** 35 ಎಕರೆಯಲ್ಲಿ ಅಡುಗೆ ಮನೆ ಮತ್ತು ಭೋಜನಾಲಯವನ್ನು ನಿರ್ಮಿಸಿದ್ದು, 200 ಕೌಂಟರ್‌ಗಳನ್ನು ತೆರೆಯಲಾಗಿದೆ. ಶೇಂಗಾ ಹೋಳಿಗೆ, ರವೆ ಉಂಡೆ, ಮೈಸೂರು ಪಾಕ್, ಮೋತಿಚೂರ್ ಲಡ್ಡು, ಕೇಸರಿಬಾತ್, ಶ್ಯಾವಿಗೆ ಕೀರು, ಗೋಧಿ ಹುಗ್ಗಿ ಸೇರಿದಂತೆ ಸಿಹಿ ಖಾದ್ಯಗಳನ್ನು ಒಳಗೊಂಡ ಭೂರಿ ಭೋಜನವನ್ನು ಸಿದ್ಧಪಡಿಸಲಾಗಿದೆ. ನಿತ್ಯ 1.5 ಲಕ್ಷ ಜನರಿಗೆ ಆಹಾರ ಬಡಿಸಲು 600 ಬಾಣಸಿಗರನ್ನು ಒಳಗೊಂಡ 1200 ಅಡುಗೆ ಸಿಬ್ಬಂದಿ ಸಜ್ಜಾಗಿದ್ದಾರೆ.

86ನೇ ನುಡಿಜಾತ್ರೆಯ ಅಂಗವಾಗಿ 86 ಸಾಧಕರಿಗೆ ಸನ್ಮಾನ ಮತ್ತು 86 ಕೃತಿಗಳ ಬಿಡುಗಡೆ ಮಾಡುತ್ತಿರುವುದು ಹಾವೇರಿ ಸಮ್ಮೇಳನದ ವಿಶೇಷವಾಗಿದೆ.
**ಮಹೇಶ ಜೋಶಿ,** ಕಸಾಪ ಅಧ್ಯಕ್ಷ

**10 ಸಾವಿರ ಪ್ರತಿನಿಧಿಗಳು:** 10 ಸಾವಿರ ಸಮ್ಮೇಳನದ ಪ್ರತಿನಿಧಿಗಳು ನೋಂದಣಿ ಮಾಡಿಕೊಂಡಿದ್ದು, ಇವರಿಗೆ ಊಟ ಮತ್ತು ವಸತಿ ವ್ಯವಸ್ಥೆಯನ್ನು ಜಿಲ್ಲಾಡಳಿತ ಕಲ್ಪಿಸಿದೆ. 31 ಜಿಲ್ಲೆಗಳಿಗೆ ಪ್ರತ್ಯೇಕ ಕೌಂಟರ್ ತೆರೆಯಲಾಗಿದ್ದು, ನೋಂದಣಿಗೆ ಹಾಗೂ ಓಓಡಿ ಪತ್ರ ಪಡೆಯಲು ಅವಕಾಶ ಕಲ್ಪಿಸಲಾಗಿದೆ. 300 ಪುಸ್ತಕ ಮಳಿಗೆಗಳು ಮತ್ತು 200 ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗಿದೆ.

**ಉಚಿತ ಬಸ್ ಸೇವೆ:** ಬೆಳಿಗ್ಗೆ 5.30ರಿಂದ ರಾತ್ರಿ 10.30ರವರೆಗೆ ತಾಲ್ಲೂಕು ಕೇಂದ್ರಗಳಿಂದ ಜಿಲ್ಲಾ ಕೇಂದ್ರಕ್ಕೆ ಹಾಗೂ ಜಿಲ್ಲಾ ಕೇಂದ್ರದಿಂದ ವಿವಿಧ ತಾಲ್ಲೂಕು ಕೇಂದ್ರಗಳಿಗೆ ಬಸ್‌ಗಳು ಓಡಾಡಲಿವೆ. ಪ್ರತಿ 15 ನಿಮಿಷಕ್ಕೊಂದು ಬಸ್ ಸಂಚರಿಸಲಿದೆ. ಸಾಹಿತ್ಯ ಸಮ್ಮೇಳನಕ್ಕೆ ಬರುವ ಸಾರ್ವಜನಿಕರಿಗೆ ರೈಲ್ವೆ ಮತ್ತು ಬಸ್ ನಿಲ್ದಾಣದಿಂದ ಸಮ್ಮೇಳನದ ವೇದಿಕೆ ಸ್ಥಳಕ್ಕೆ ಸಂಚರಿಸಲು ಉಚಿತ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ.

**ಕಲಾ ವೈಭವ:** ಸಮ್ಮೇಳನದ ವಿವಿಧ ವೇದಿಕೆಗಳಲ್ಲಿ ಗಂಗಾವತಿ ಪ್ರಾಣೇಶ್ ತಂಡದಿಂದ ಹಾಸ್ಯ, ಆಳ್ವಾಸ್ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ವೈವಿಧ್ಯ, 'ನಾವಾಡುವ ನುಡಿಯೇ ಕನ್ನಡ ನುಡಿ' ಶೀರ್ಷಿಕೆಯಡಿ ಚಲನಚಿತ್ರ ಗೀತೆಗಳ ಗಾಯನ ಸೇರಿದಂತೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜನರ ರಂಜಿಸಲಿವೆ.

# ವಿದೇಶಿ ವಿ.ವಿ ಕ್ಯಾಂಪಸ್ ಸ್ಥಾಪನೆ: ಕರಡು ನಿಯಮ ಪ್ರಕಟಿಸಿದ ಯುಜಿಸಿ

ನವದೆಹಲಿ (ಪಿಟಿಐ): ದೇಶದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳ ಕ್ಯಾಂಪಸ್ ಸ್ಥಾಪನೆ ಮತ್ತು ಕಾರ್ಯಾಚರಣೆಗೆ ಪೂರಕವಾಗಿ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಕರಡು ನಿಯಮಗಳನ್ನು ಗುರುವಾರ ಬಿಡುಗಡೆ ಮಾಡಿದೆ.

ಇದರ ಪ್ರಕಾರ ಈ ವಿಶ್ವವಿದ್ಯಾಲಯಗಳು ತಮ್ಮ ಪ್ರವೇಶ ಪ್ರಕ್ರಿಯೆ, ಶುಲ್ಕ ರಚನೆಯನ್ನು ತಾವೇ ನಿರ್ಧರಿಸುವ ಅಧಿಕಾರ ಹೊಂದಿರುತ್ತವೆ. ಅಲ್ಲದೇ, ತನ್ನ ನಿಧಿಯನ್ನು ಮಾತೃ ದೇಶಕ್ಕೆ ತೆಗೆದುಕೊಂಡು ಹೋಗುವ ಅವಕಾಶವನ್ನೂ ಕಲ್ಪಿಸಲಾಗಿದೆ.

**‘ಆಫ್‌ಲೈನ್’ ಕೋರ್ಸ್‌ಗಳಿಗಷ್ಟೇ ಅವಕಾಶ:** ಭಾರತದಲ್ಲಿ ಕ್ಯಾಂಪಸ್ ಸ್ಥಾಪಿಸುವ ವಿದೇಶಿ ವಿಶ್ವವಿದ್ಯಾಲಯಗಳು ಪೂರ್ಣಾವಧಿಯ ಕೋರ್ಸ್‌ಗಳನ್ನು ‘ಆಫ್‌ಲೈನ್’ ಮೋಡ್‌ನಲ್ಲಿ ಮಾತ್ರವೇ ಒದಗಿಸಬೇಕು. ‘ಆನ್‌ಲೈನ್’ ಅಥವಾ ದೂರ ಶಿಕ್ಷಣ ಮಾದರಿಯಲ್ಲಿ ಕೋರ್ಸ್‌ಗಳನ್ನು ನಡೆಸಬಾರದು ಎಂದು ಯುಜಿಸಿ ಅಧ್ಯಕ್ಷ ಎಂ. ಜಗದೀಶ್ ಕುಮಾರ್ ತಿಳಿಸಿದ್ದಾರೆ.

ವಿದೇಶಿ ವಿ.ವಿಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಭಾರತದಲ್ಲಿ ಕ್ಯಾಂಪಸ್ ಸ್ಥಾಪಿಸಲು ಯುಜಿಸಿಯಿಂದ ಅನುಮೋದನೆ ಪಡೆಯಬೇಕು ಎಂದು ಅವರು ಹೇಳಿದ್ದಾರೆ.

ಆರಂಭಿಕವಾಗಿ 10 ವರ್ಷಗಳ ಅವಧಿಗೆ ಅನುಮೋದನೆ ನೀಡಲಾಗುತ್ತದೆ. ಕೆಲ ಷರತ್ತುಗಳನ್ನು ಪೂರೈಸಿದಲ್ಲಿ, 9ನೇ ವರ್ಷಕ್ಕೆ ಅನುಮೋದನೆಯನ್ನು ನವೀಕರಿಸಲು ಅವಕಾಶವಿದೆ. ಈ ಸಂಸ್ಥೆಗಳು ದೇಶದ ಹಿತಾಸಕ್ತಿಗೆ ಅಥವಾ ಉನ್ನತ ಶಿಕ್ಷಣದ ಗುಣಮಟ್ಟಕ್ಕೆ ಧಕ್ಕೆ ತರುವಂತಹ ಯಾವುದೇ ಅಧ್ಯಯನ ಕಾರ್ಯಗಳನ್ನು ಕೈಗೊಳ್ಳುವಂತಿಲ್ಲ ಎಂದು ಕರಡಿನಲ್ಲಿ ತಿಳಿಸಲಾಗಿದೆ.

**‘ತಿಂಗಳಾಂತ್ಯಕ್ಕೆ ಅಧಿಸೂಚನೆ’:** ಸಂಬಂಧಪಟ್ಟ ಭಾಗಿದಾರರು ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮ ನಿಯಮಗಳ ಕುರಿತು ತಿಂಗಳಾಂತ್ಯಕ್ಕೆ ಅಧಿಸೂಚನೆ ಹೊರಡಿಸಲಾಗುವುದು ಎಂದು ಯುಜಿಸಿ ತಿಳಿಸಿದೆ.

ಈ ವಿಶ್ವವಿದ್ಯಾಲಯಗಳು ಪ್ರವೇಶ ಮಾನದಂಡ ಮತ್ತು ಶುಲ್ಕ ರಚನೆಯನ್ನು ತಾವೇ ನಿರ್ಧರಿಸುವ ಸ್ವಾತಂತ್ರ್ಯ ಹೊಂದಿದ್ದರೂ, ಶುಲ್ಕ ನಿಗದಿಯು ಸಮಂಜಸ ಮತ್ತು ಪಾರದರ್ಶಕತೆಯಿಂದ ಕೂಡಿರಬೇಕು ಎಂದು ಯುಜಿಸಿ ಸಲಹೆ ನೀಡಿದೆ.

ವಿದೇಶಗಳಲ್ಲಿನ ಉನ್ನತ ಶ್ರೇಣಿಯ ವಿಶ್ವವಿದ್ಯಾಲಯಗಳು ಭಾರತಕ್ಕೆ ಬಂದು, ಇಲ್ಲಿನ ಶಿಕ್ಷಣಕ್ಕೆ ಅಂತರರಾಷ್ಟ್ರೀಯ ಆಯಾಮವನ್ನು ನೀಡುತ್ತವೆ. ಅಲ್ಲದೆ ಭಾರತೀಯ ವಿದ್ಯಾರ್ಥಿಗಳಿಗೆ ಕೈಗೆಟಕುವ ವೆಚ್ಚದಲ್ಲಿ ವಿದೇಶಗಳಲ್ಲಿರುವ ಶೈಕ್ಷಣಿಕ ಅರ್ಹತೆ ಒದಗಿಸುತ್ತವೆ ಎಂದು ಅವರು ಹೇಳಿದ್ದಾರೆ.

**ಪರಿಶೀಲನೆಗೆ ಸ್ಥಾಯಿ ಸಮಿತಿ:** ವಿದೇಶಿ ವಿಶ್ವವಿದ್ಯಾಲಯಗಳ ಕ್ಯಾಂಪಸ್ ಸ್ಥಾಪನೆ ಮತ್ತು ಕಾರ್ಯಾಚರಣೆ ಕುರಿತು ಪರಿಶೀಲಿಸಲು ಯುಜಿಸಿ ಸ್ಥಾಯಿ ಸಮಿತಿಗಳನ್ನು ರಚಿಸುತ್ತದೆ. ಈ ಸಮಿತಿಯು ವಿದೇಶಿ ಶೈಕ್ಷಣಿಕ ಸಂಸ್ಥೆಗಳ ವಿಶ್ವಾಸಾರ್ಹತೆ, ನಡೆಸುವ ಕೋರ್ಸ್, ಕಾರ್ಯಕ್ರಮಗಳು, ಭಾರತದಲ್ಲಿ ಶೈಕ್ಷಣಿಕ ಅವಕಾಶಗಳನ್ನು ಬಲಪಡಿಸುವ ಸಾಮರ್ಥ್ಯ, ಶೈಕ್ಷಣಿಕ ಮೂಲಸೌಕರ್ಯಗಳ ಕುರಿತ ಅರ್ಜಿಗಳನ್ನು ಪರಿಶೀಲಿಸಿ, ಶಿಫಾರಸು ಮಾಡುತ್ತದೆ ಎಂದು ಕುಮಾರ್ ತಿಳಿಸಿದ್ದಾರೆ.

ವಿದೇಶಿ ಶೈಕ್ಷಣಿಕ ಸಂಸ್ಥೆಯು ತನ್ನ ನೇಮಕಾತಿ ನಿಯಮಗಳ ಪ್ರಕಾರ ಭಾರತ ಮತ್ತು ವಿದೇಶದಿಂದ ಬೋಧಕವರ್ಗ ಮತ್ತು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಸ್ವಾಯತ್ತತೆ ಹೊಂದಿರುತ್ತದೆ ಎಂದು ಹೇಳಿದ್ದಾರೆ.

# ದಟ್ಟಮಂಜು: ರೈಲು ಸಂಚಾರ ವ್ಯತ್ಯಯ

ನವದೆಹಲಿ (ಪಿಟಿಐ): ಉತ್ತರ ಭಾರತದ ಹಲವು ಭಾಗಗಳಲ್ಲಿ ತೀವ್ರ ಚಳಿ ಮತ್ತು ದಟ್ಟ ಮಂಜಿನಿಂದಾಗಿ ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಗಿದೆ. ದೆಹಲಿಯಲ್ಲಿ ಕನಿಷ್ಠ ಮೂರು ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಇದು ಎರಡು ವರ್ಷಗಳಲ್ಲಿ ಕನಿಷ್ಠ ತಾಪಮಾನವಾಗಿದೆ.



ಶೀತಗಾಳಿ ಬೀಸುತ್ತಿರುವ ಕಾರಣ ಜನರು ಮನೆಯೊಳಗೆ ಉಳಿದು ಬೆಚ್ಚಗಿರಲು ಹೀಟರ್ ಮತ್ತು ಬಿಸಿ ಪಾನೀಯಗಳ ಮೊರೆ ಹೋದರು.

ಅಂಕಿ ಅಂಶ ಪ್ರಕಾರ ದೆಹಲಿಯ ಕನಿಷ್ಠ ತಾಪಮಾನ ಡಾಲ್ ಹೌಸಿ (4.9 ಡಿಗ್ರಿ ಸೆಲ್ಸಿಯಸ್) ಗಿಂತ ಕಡಿಮೆ ಇತ್ತು. ಧರ್ಮಶಾಲಾ 5.2 ಡಿಗ್ರಿ ಸೆಲ್ಸಿಯಸ್, ಸಿಮ್ಲಾ 3.7, ಡೆಹ್ರಾಡೂನ್ 4.6, ಮಸ್ಸೂರಿ 4.4 ಮತ್ತು ನೈನ್‌ತಾಲ್‌ನಲ್ಲಿ 6.2 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಎಲ್ಲೆಡೆ ಮಂಜು ಕವಿದಿದ್ದು, ಕನಿಷ್ಠ 12 ರೈಲುಗಳ ಸಂಚಾರದಲ್ಲಿ 6 ತಾಸುಗಳಷ್ಟು ವ್ಯತ್ಯಯವಾಗಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ತಾಪಮಾನ ಕುಸಿತವಾಗಿದ್ದು, ಶ್ರೀನಗರದಲ್ಲಿ ಬುಧವಾರ ರಾತ್ರಿ ಮೈನಸ್ 6.4 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ರಾಜಸ್ತಾನದ ಅಲ್ವಾರ್, ಭರತ್‌ಪುರ್, ಧೋಲ್‌ಪುರ್, ಜುಂಜುನು ಮತ್ತು ಕರೌಲಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ತೀವ್ರ ಶೀತ ಗಾಳಿ ಮುಂದುವರಿಯುತ್ತಿರುವ ಕಾರಣ ಹವಾಮಾನ ಕಚೇರಿ 'ಆರೆಂಜ್ ಅಲರ್ಟ್' ನೀಡಿದೆ.

# ಮುರುಘಾ ಶರಣರ ಪ್ರಕರಣ: ವರದಿಯಲ್ಲೇನಿದೆ?

ಒಂದನೇ ಪುಟದಿಂದ...

ವೈದ್ಯಕೀಯ ಮಾನದಂಡಕ್ಕೆ ಅನುಗುಣವಾಗಿ ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತ ಬಾಲಕಿಯರನ್ನು ಹತ್ತು ವಿಧವಾದ ಸೂಕ್ಷ್ಮ ಪರೀಕ್ಷೆಗಳಿಗೆ ಒಳಪಡಿಸಲಾಗಿದೆ ಎಂದೂ ವರದಿ ಉಲ್ಲೇಖಿಸಿದೆ.

‘ಸಂಭೋಗ (ರೇಪ್) ಎಂದು ಕರೆಯುವಾಗ ಶಿಶ್ನವು ಯೋನಿಯನ್ನು ಪ್ರವೇಶಿಸಿರಲೇ ಬೇಕು ಎಂದೇನಿಲ್ಲ. ಶಿಶ್ನವು ಯೋನಿಯನ್ನು ಸ್ಪರ್ಶಿಸಿದರೂ ಸಾಕು ಅದು ಹಟ ಸಂಭೋಗ ಅಥವಾ ಸಾಮಾನ್ಯವಾಗಿ ಕರೆಯಲಾಗುವ ಅತ್ಯಾಚಾರ ಎಂದೇ ಆಗುತ್ತದೆ’ ಎನ್ನುತ್ತಾರೆ ಹಿರಿಯ ಕ್ರಿಮಿನಲ್ ವಕೀಲ ಸಿ.ಎಚ್.ಹನುಮಂತರಾಯ.

‘ಸಂತ್ರಸ್ತ ಬಾಲಕಿಯರು ಸ್ಥಳೀಯ ಜಿಲ್ಲಾ ಆಸ್ಪತ್ರೆಯಲ್ಲಿ ನೀಡಲಾಗಿರುವ ವರದಿಯನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸುವ ಮೂಲಕ ಮರು ಪರೀಕ್ಷೆ ನಡೆಸುವಂತೆ ಕೋರಲು ಕಾನೂನಿನಲ್ಲಿ ಮುಕ್ತ ಅವಕಾಶಗಳಿವೆ’ ಎನ್ನುತ್ತಾರೆ ಹೈಕೋರ್ಟ್ ವಕೀಲ ಎಚ್.ಸುನಿಲ್ ಕುಮಾರ್.

**ಪ್ರಕರಣಗಳು:** ಮುರುಘಾ ಶರಣರ ವಿರುದ್ಧ ಪೋಕ್ಸೊ ಕಾಯ್ದೆ–2012ರ ಕಲಂ 17,5 (ಎಲ್),6 ಮತ್ತು ಭಾರತೀಯ ದಂಡ ಸಂಹಿತೆ–1860ರ ಕಲಂ 376 (2), 376 (ಡಿಎ) 376 (3), 201, 202, 506ರ ಜೊತೆಗೆ ಓದಿಕೊಳ್ಳಲಾಗುವ 34,3 ಹಾಗೂ ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ-1988ರ ಕಲಂ 3 (ಎಫ್), 7ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

## ಅಪರಾಧಿ ರಕ್ಷಿಸುವ ತಂತ್ರ

ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸರ್ಕಾರ ಹಾಗೂ ಸುಪ್ರೀಂಕೋರ್ಟ್ ಪೊಕ್ಸೊ ಕಾಯ್ದೆಗೆ ಎಂತಹ ಬಲ ತುಂಬಿವೆ ಎಂದರೆ ಸಂತ್ರಸ್ತ ಬಾಲಕಿಯರ ನೈಜ ಹೇಳಿಕೆಯ ಆಧಾರದ ಮೇಲೆಯೇ ಅಪರಾಧಿಗೆ ಗಲ್ಲು ಶಿಕ್ಷೆ ವಿಧಿಸಬಹುದು. ಈ ಪ್ರಕರಣದಲ್ಲಿ ನಡೆಯುತ್ತಿರುವ ಘಟನೆಗಳನ್ನು ನೋಡಿದರೆ ಅಪರಾಧಿಯನ್ನು ರಕ್ಷಿಸುವ ತಂತ್ರಗಳು ಎದ್ದು ಕಾಣುತ್ತಿವೆ. ರಾಘವೇಶ್ವರ ಶ್ರೀ ಪ್ರಕರಣದಲ್ಲೂ ಹಲವು ನ್ಯಾಯಮೂರ್ತಿಗಳು ವಿಚಾರಣೆಯಿಂದ ಹಿಂದೆ ಸರಿದಿದ್ದರು. ಈ ಪ್ರಕರಣವೂ ಅದೇ ಹಾದಿ ಹಿಡಿದರೆ ಮಹಿಳೆಯರ ನಂಬಿಕೆಗಳಿಗೆ ದೊಡ್ಡ ಪೆಟ್ಟು ಬೀಳುತ್ತದೆ.

–**ಡಾ.ಪದ್ಮಿನಿ ನಾಗರಾಜು,** ಮಹಿಳಾ ಚಿಂತಕಿ

## ಸಂತ್ರಸ್ತೆಯರನ್ನು ಅವಮಾನಿಸಿದಂತೆ

ವೈದ್ಯಕೀಯ ಪರೀಕ್ಷೆಯ ವರದಿಯಲ್ಲಿ ಸಂಭೋಗ ನಡೆದಿಲ್ಲ ಎಂದು ಉಲ್ಲೇಖಿಸಿರುವುದು ಅತ್ಯಾಚಾರಕ್ಕೆ ಒಳಗಾದ ಬಾಲಕಿಯರನ್ನು ಅನುಮಾನಿಸಿ, ಅವಮಾನಿಸಿದಂತೆ. 2022ರ ಆಗಸ್ಟ್‌ನಲ್ಲಿ ನೀಡಲಾಗಿದ್ದ ವರದಿಯನ್ನು ಹರಿಯಬಿಟ್ಟಿರುವುದರ ಹಿಂದೆ ಹುನ್ನಾರವಿದೆ. ಪೋಕ್ಸೊ ಪ್ರಕರಣಗಳಲ್ಲಿ ಜಾಮೀನು ಸಿಗುವುದು ಕಷ್ಟ. ಆರೋಪಿಯನ್ನು ಅಪರಾಧಿ ಎಂದೇ ಪರಿಗಣಿಸಿ ನ್ಯಾಯಾಲಯ ಜೈಲಿಗೆ ಕಳಿಸಿರುತ್ತದೆ. ಶಿವಮೂರ್ತಿ ಶರಣರಿಗೆ ಜಾಮೀನು ದೊರಕಿಸಲು ಅವರ ಪರವಾದ ಪರಿಣತ ಗುಂಪುಗಳು ನಿರಂತರ ಪ್ರಯತ್ನ ಮಾಡುತ್ತಿವೆ. ಅದಕ್ಕಾಗಿ ಇಂತಹ ಗೊಂದಲಗಳನ್ನು ಸೃಷ್ಟಿಸುವ ಕೆಲಸ ನಿರಂತರವಾಗಿ ಮಾಡುತ್ತಿವೆ.

–**ಸ್ಟ್ಯಾನ್ಲಿ,** ಒಡನಾಡಿ ಸಂಸ್ಥೆ, ಮೈಸೂರು

## ವೈದ್ಯಕೀಯ ಪರೀಕ್ಷೆ: ಮಾರ್ಗಸೂಚಿ ಉಲ್ಲಂಘನೆ

ಮಕ್ಕಳ ಮೇಲೆ ಆಗುವ ಆಘಾತಗಳನ್ನು ಅಳೆಯಲು ಇರಬೇಕಾದ ಮಾನದಂಡಗಳೂ ಸೂಕ್ಷ್ಮವಾಗಿರಬೇಕು. ಲೈಂಗಿಕ ಕಿರುಕುಳಕ್ಕೊಳಗಾದ ಮಕ್ಕಳನ್ನು ಪರೀಕ್ಷೆಗೊಳಪಡಿಸುವಾಗ ಕೆಲವು ಸಂಗತಿಗಳನ್ನು ಮಾಡಲೇಬಾರದು ಎಂದು ಮಾರ್ಗಸೂಚಿ ಹೇಳುತ್ತದೆ. ಬಹಿರಂಗಗೊಂಡಿರುವ ವೈದ್ಯಕೀಯ ವರದಿಯಲ್ಲಿ ಅವೆಲ್ಲವನ್ನೂ ಉಲ್ಲಂಘಿಸಲಾಗಿದೆ. ವರದಿ ಹಿಡಿದುಕೊಂಡು ಅನಗತ್ಯ ಗೊಂದಲ ಮೂಡಿಸುವ ದುರುದ್ದೇಶದ ಕೆಲಸ ನಡೆಯುತ್ತಿದೆ.

–**ಮಲ್ಲಿಗೆ,** ಸಾಮಾಜಿಕ ಕಾರ್ಯಕರ್ತೆ. ಮಂಡ್ಯ


## ದಾರಿ ತಪ್ಪಿಸುವ ಲಕ್ಷಣಗಳು ಗೋಚರ

ಈ ಪ್ರಕರಣದ ದಾರಿ ತಪ್ಪಿಸುವ ಪ್ರಯತ್ನದ ಲಕ್ಷಣಗಳೂ ಗೋಚರಿಸುತ್ತಿವೆ. ಅಪ್ರಾಪ್ತ ಬಾಲಕಿಯರು ತಮ್ಮ ಮೇಲೆ ದೌರ್ಜನ್ಯ ನಡೆದಿದೆ ಎಂದು ದೂರು ಸಲ್ಲಿಸಿದ್ದಾರೆ, ಈಗ ಬರುತ್ತಿರುವ ವರದಿಗಳು ಅದಕ್ಕೆ ವ್ಯತಿರಿಕ್ತವಾಗಿ ಇರುವುದು ನೋಡಿದರೆ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡ ಎದ್ದು ಕಾಣಿಸುತ್ತಿದೆ. ಪ್ರಕರಣವನ್ನು ಬಾಲಕಿಯರ ಭವಿಷ್ಯದ ಪ್ರಶ್ನೆಯಾಗಿ ಪರಿಗಣಿಸಬೇಕು.

–**ಕೆ.ಎಸ್. ವಿಮಲಾ,** ಜನವಾದಿ ಮಹಿಳಾ ಸಂಘಟನೆ







❦ ಸುಭಾಷಿತ ❦

ಒಂದು ತಾಸು ಓದಿದರೆ ಎರಡು ತಾಸು ದುಡಿಯಿರಿ
ಮೂರು ತಾಸು ವಿಚಾರ ಮಾಡಿ.

–ರಾಮಕೃಷ್ಣ ಪರಮಹಂಸ

# ನಿರುದ್ಯೋಗ ಹೆಚ್ಚಳ ಕಳವಳಕಾರಿ ಉದ್ಯೋಗ ಸೃಷ್ಟಿ ಈಗಿನ ಜರೂರು

**ಸೆಂಟರ್** ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಸಂಸ್ಥೆಯು ದೇಶದಲ್ಲಿರುವ ನಿರುದ್ಯೋಗದ ಕುರಿತು ಇತ್ತೀಚೆಗೆ ಬಿಡುಗಡೆ ಮಾಡಿರುವ ಅಂಕಿಅಂಶ ಕಳವಳ ಮೂಡಿಸುವಂತಿದೆ. 2022ರ ಡಿಸೆಂಬರ್ ತಿಂಗಳಲ್ಲಿ ನಿರುದ್ಯೋಗ ಪ್ರಮಾಣವು ಶೇಕಡ 8.30ಕ್ಕೆ ಏರಿಕೆಯಾಗಿದೆ. ಇದು 16 ತಿಂಗಳಲ್ಲಿನ ಗರಿಷ್ಠ. ನವೆಂಬರ್ ತಿಂಗಳಲ್ಲಿ ನಿರುದ್ಯೋಗ ಪ್ರಮಾಣವು ಶೇ 8ರಷ್ಟಿತ್ತು. ನಗರ ಪ್ರದೇಶಗಳಲ್ಲಿನ ನಿರುದ್ಯೋಗ ಪ್ರಮಾಣವು ನವೆಂಬರ್ ತಿಂಗಳಲ್ಲಿ ಶೇ 8.96ರಷ್ಟು ಇದ್ದದ್ದು ಡಿಸೆಂಬರ್‌ನಲ್ಲಿ ಶೇ 10.09ಕ್ಕೆ ಏರಿಕೆಯಾಗಿದೆ. ಆದರೆ ಗ್ರಾಮೀಣ ಪ್ರದೇಶದ ನಿರುದ್ಯೋಗ ಪ್ರಮಾಣವು ಇದೇ ಅವಧಿಯಲ್ಲಿ ಶೇ 7.55ರಿಂದ ಶೇ 7.44ಕ್ಕೆ ಇಳಿಕೆಯಾಗಿದೆ. ರಾಜ್ಯಗಳಲ್ಲಿ ನಿರುದ್ಯೋಗವು ಯಾವ ಪ್ರಮಾಣದಲ್ಲಿದೆ ಎಂಬ ಅಂಕಿಅಂಶಗಳನ್ನೂ ಸಿಎಂಐಇ ನೀಡಿದೆ. ರಾಜಸ್ಥಾನದಲ್ಲಿ ಶೇ 28.5ರಷ್ಟು ಮತ್ತು ದೆಹಲಿಯಲ್ಲಿ ಶೇ 20.8ರಷ್ಟು ನಿರುದ್ಯೋಗ ಇದೆ ಎಂದು ಈ ಅಂಕಿಅಂಶ ತಿಳಿಸಿದೆ. ಅತ್ಯಂತ ಕಡಿಮೆ ನಿರುದ್ಯೋಗ ಇರುವ ರಾಜ್ಯಗಳಲ್ಲಿ ಕರ್ನಾಟಕವೂ ಸೇರಿದೆ. ಕರ್ನಾಟಕದಲ್ಲಿ ನಿರುದ್ಯೋಗ ಪ್ರಮಾಣವು ಶೇ 2.5ರಷ್ಟಿದೆ. 2022ರ ಮಧ್ಯಭಾಗದ ಬಳಿಕ ನಿರುದ್ಯೋಗ ಪ್ರಮಾಣವು ಕಡಿಮೆಯಾಗುತ್ತಾ ಬಂದಿದೆ ಎಂದು ಭಾವಿಸಲಾಗಿತ್ತು. ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ವಿಭಾಗ ಮಾಡಿದ ತ್ರೈಮಾಸಿಕ ದತ್ತಾಂಶದ ಪ್ರಕಾರ, ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ನಿರುದ್ಯೋಗವು ಶೇ 7.2ರಷ್ಟಾಗಿತ್ತು. ಅದಕ್ಕೂ ಹಿಂದಿನ ತ್ರೈಮಾಸಿಕದಲ್ಲಿ ನಿರುದ್ಯೋಗ ಪ್ರಮಾಣವು ಶೇ 7.6ರಷ್ಟಿತ್ತು. ಆದರೆ, ನಿರುದ್ಯೋಗ ಪ್ರಮಾಣದಲ್ಲಿ ಆಗಿರುವ ಈ ಇಳಿಕೆಯು ತಾತ್ಕಾಲಿಕ ಶಮನ ಮಾತ್ರ ಎಂಬಂತೆ ಕಾಣುತ್ತಿದೆ.



ಸಾಂಕ್ರಾಮಿಕದ ನಂತರ, ಅರ್ಥ ವ್ಯವಸ್ಥೆಯು ಚೇತರಿಕೆಯ ಹಾದಿ ಹಿಡಿದರೂ ಉದ್ಯೋಗ ಸೃಷ್ಟಿಗೆ ಹೆಚ್ಚಿನ ನೆರವು ನೀಡಿಲ್ಲ ಎಂಬುದನ್ನು ದತ್ತಾಂಶಗಳು ತೋರಿಸುತ್ತವೆ

ಬೆಳೆಯುತ್ತಿರುವ ಅರ್ಥ ವ್ಯವಸ್ಥೆಯ ನಿರಂತರ ಲಕ್ಷಣವಾಗಿ ನಿರುದ್ಯೋಗ ಏರಿಕೆಯು ಕೆಲವು ವರ್ಷಗಳಿಂದ ಇದೆ. ಅಂದರೆ, ಆರ್ಥಿಕ ಪ್ರಗತಿಯ ಅದೇ ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿಸುತ್ತಿಲ್ಲ. ಎನ್‌ಎಸ್‌ಒ ದತ್ತಾಂಶದ ಪ್ರಕಾರ, 2005ರಿಂದ 2012ರ ನಡುವಣ ಅವಧಿಯಲ್ಲಿ ಪ್ರತಿವರ್ಷ 75 ಲಕ್ಷ ಕೃಷಿಯೇತರ ಉದ್ಯೋಗಗಳು ಸೃಷ್ಟಿಯಾಗಿದ್ದವು. ಆದರೆ, 2013–2019ರ ಅವಧಿಯಲ್ಲಿ ಪ್ರತಿವರ್ಷ ಸೃಷ್ಟಿಯಾಗಿರುವ ಉದ್ಯೋಗಗಳು 29 ಲಕ್ಷ ಮಾತ್ರ. ನಿರುದ್ಯೋಗಿಗಳ ಗುಂಪಿಗೆ ಲಕ್ಷಾಂತರ ಯುವಜನರು ಪ್ರತಿವರ್ಷ ಸೇರ್ಪಡೆಯಾಗುತ್ತಿದ್ದಾರೆ. ಹಾಗಾಗಿ, ಭಾರತದಂತಹ ದೇಶದಲ್ಲಿ ಉದ್ಯೋಗ ಸೃಷ್ಟಿ ಅತ್ಯಂತ ಮಹತ್ವದ್ದಾಗಿದೆ. 2016ರ ನವೆಂಬರ್‌ನಲ್ಲಿ ಮಾಡಲಾದ ನೋಟು ರದ್ದತಿಯಿಂದಾಗಿ ನಿರುದ್ಯೋಗ ಗಗನಕ್ಕೆ ಏರಿತ್ತು. 2018ರಲ್ಲಿ ನಿರುದ್ಯೋಗ ಪ್ರಮಾಣವು 45 ವರ್ಷಗಳಲ್ಲಿಯೇ ಗರಿಷ್ಠ ಮಟ್ಟ ತಲುಪಿ ಆಘಾತ ಮೂಡಿಸಿತ್ತು. 2020ರ ಬಳಿಕ, ಕೋವಿಡ್ ಸಾಂಕ್ರಾಮಿಕವು ಪರಿಸ್ಥಿತಿಯು ಇನ್ನಷ್ಟು ಹದಗೆಡುವಂತೆ ಮಾಡಿತು. ಸಾಂಕ್ರಾಮಿಕವು ತೀವ್ರವಾಗಿದ್ದ ಅವಧಿಯಲ್ಲಿ ಕನಿಷ್ಠ ಒಂದು ಕೋಟಿ ಉದ್ಯೋಗಗಳು ನಷ್ಟವಾಗಿದ್ದವು.

ಸಾಂಕ್ರಾಮಿಕದ ನಂತರ, ಅರ್ಥ ವ್ಯವಸ್ಥೆಯು ಚೇತರಿಕೆಯ ಹಾದಿ ಹಿಡಿದರೂ ಉದ್ಯೋಗ ಸೃಷ್ಟಿಗೆ ಹೆಚ್ಚಿನ ನೆರವು ನೀಡಿಲ್ಲ ಎಂಬುದನ್ನು ದತ್ತಾಂಶಗಳು ತೋರಿಸುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಕಡಿಮೆಯಾಗಿದೆ ಎಂಬುದು ಕೂಡ ಆರೋಗ್ಯಕರ ಅಂಶ ಅಲ್ಲ. ಅರ್ಥ ವ್ಯವಸ್ಥೆಯ ಚಟುವಟಿಕೆಗಳು ನಗರ ಪ್ರದೇಶಗಳಲ್ಲಿ ಹೆಚ್ಚು ಉದ್ಯೋಗ ಸೃಷ್ಟಿ ಮಾಡುತ್ತವೆ. ನಗರ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಯಾಗದ ಕಾರಣಕ್ಕೆ ಜನರು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಕಂಡುಕೊಂಡಿರುವುದೇ ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಪ್ರಮಾಣ ಕಡಿಮೆಯಾಗಲು ಕಾರಣ. 2019 ಮತ್ತು 2020ರಲ್ಲಿ ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಜನರ ಸಂಖ್ಯೆಯು 20 ಕೋಟಿಯಿಂದ 23.2 ಕೋಟಿಗೆ ಏರಿಕೆಯಾಗಿತ್ತು. ವಲಸೆ ಕಾರ್ಮಿಕರು ತಾವಿದ್ದ ರಾಜ್ಯಗಳಿಂದ ತಮ್ಮ ತವರು ರಾಜ್ಯಗಳಿಗೆ ಮರಳಿದ್ದು ಇದಕ್ಕೆ ಕಾರಣ ಆಗಿರಬಹುದು. ಇದರ ಪರಿಣಾಮವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕೂಲಿಯಲ್ಲಿ ಇಳಿಕೆ ಆಗಿತ್ತು. 2005–2012ರ ನಡುವಣ ಅವಧಿಯಲ್ಲಿ ಕೃಷಿ ಕ್ಷೇತ್ರದ ಉದ್ಯೋಗವು 3.7 ಕೋಟಿಯಷ್ಟು ಕಡಿಮೆ ಆಗಿತ್ತು. ಆದರೆ, ಕೃಷಿಯೇತರ ಕ್ಷೇತ್ರಗಳ ಉದ್ಯೋಗಗಳು ಪ್ರತಿವರ್ಷ 75 ಲಕ್ಷಗಳಷ್ಟು ಏರಿಕೆಯಾಗಿದ್ದವು. ಇದರ ಪರಿಣಾಮವಾಗಿ ಸಂಬಳದಲ್ಲಿ ಏರಿಕೆ ಉಂಟಾಗಿತ್ತು ಮತ್ತು ಬಡವರ ಸಂಖ್ಯೆಯಲ್ಲಿ ಇಳಿಕೆ ಆಗಿತ್ತು. ತಯಾರಿಕೆ ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿಸಿ 2005–2012ರ ಅವಧಿಯ ಸನ್ನಿವೇಶವನ್ನು ಮರಳಿ ತರಬೇಕಾಗಿದೆ. ಜಾಗತಿಕವಾಗಿ ಮತ್ತು ದೇಶೀಯವಾಗಿ ಹಲವು ಹೊಸ ಹೊಸ ಸವಾಲುಗಳು ಎದುರಾಗುತ್ತಿರುವ ಈಗಿನ ಸನ್ನಿವೇಶದಲ್ಲಿ ವಿಶೇಷ ಗಮನ ಮತ್ತು ಕಾರ್ಯತಂತ್ರಗಳ ಮೂಲಕ ಉದ್ಯೋಗ ಸೃಷ್ಟಿಸಬೇಕಾದ ಜರೂರು ಬಹಳ ಇದೆ.

ಕಲ್ಲಿದ್ದಲು ಆಧಾರಿತ ಉಷ್ಣಸ್ಥಾವರಗಳನ್ನು ಭಾರತ ಹಂತಹಂತವಾಗಿ ಸ್ಥಗಿತಗೊಳಿಸಬೇಕಿದೆ

# ಕಲ್ಲಿದ್ದಲು: ಅವಲಂಬನೆ ಇನ್ನೆಷ್ಟು ಕಾಲ?



ವಿಶ್ಲೇಷಣೆ

ಟಿ.ಆರ್.ಅನಂತರಾಮು

**ಕೇಂದ್ರ** ಗಣಿ, ಕಲ್ಲಿದ್ದಲು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ಡಿಸೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ಕಲ್ಲಿದ್ದಲು ಗಣಿ ಹೂಡಿಕೆದಾರರ ಸಮಾವೇಶದಲ್ಲಿ ನೀಡಿದ ಮಾಹಿತಿಯು ಪರಿಸರಪ್ರಿಯರು ಯೋಚಿಸುವಂತೆ ಮಾಡಿದೆ. ಕಲ್ಲಿದ್ದಲು ಮತ್ತು ಗಣಿ ವಲಯದಿಂದ ಒಟ್ಟು ದೇಶೀಯ ಉತ್ಪನ್ನಕ್ಕೆ (ಜಿಡಿಪಿ) ಕೊಡುಗೆ ಸದ್ಯ ಶೇಕಡ 0.9ರಷ್ಟಿದೆ. ಇದನ್ನು ಶೇ 2.5ಕ್ಕೆ ಏರಿಸಬೇಕಾಗಿದೆ. ಕಲ್ಲಿದ್ದಲಿನ ವಿಚಾರದಲ್ಲಿ ಭಾರತ ಅತಿ ದೊಡ್ಡ ಉತ್ಪಾದಕ ದೇಶಗಳಲ್ಲೊಂದು ಹಾಗೆಯೇ ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ದೇಶವೂ ಹೌದು. ಸದ್ಯಕ್ಕೆ ದೇಶದ ಕಲ್ಲಿದ್ದಲು ಉತ್ಪಾದನೆ ವಾರ್ಷಿಕ 90 ಕೋಟಿ ಟನ್ನು. ಗುರಿ ಇರುವುದು ಶತಕೋಟಿ ಟನ್ನು. ಇದು ಅವರ ಮಾತಿನ ಸಾರಾಂಶ.

ನಮ್ಮ ದೇಶದಲ್ಲಿ ಎಲ್ಲ ಸಂಪನ್ಮೂಲಗಳ ಲಭ್ಯತೆಯ ಪ್ರಮಾಣವನ್ನು ಈಗಾಗಲೇ ಅಂದಾಜು ಮಾಡಲಾಗಿದೆ. ಈ ಸಮೀಕ್ಷೆಯಂತೆ, ಭಾರತದಲ್ಲಿ 10,772 ಕೋಟಿ ಟನ್ನು ಕಲ್ಲಿದ್ದಲು ಸಂಪನ್ಮೂಲ ನೆಲದಲ್ಲಿ ಅಡಗಿದೆ. ಈ ಲೆಕ್ಕದಲ್ಲಿ ಈಗಿನ ಬಳಕೆಯ ಪ್ರಮಾಣವನ್ನು ಪರಿಗಣಿಸಿದರೆ ಇನ್ನೂ 111 ವರ್ಷ ಕಲ್ಲಿದ್ದಲಿನ ಗಣಿಗಾರಿಕೆ ಮಾಡಬಹುದು. ಭಾರತದಲ್ಲಿ, ಕರ್ನಾಟಕದ ನಾಲ್ಕು ಉಷ್ಣಸ್ಥಾವರಗಳೂ ಸೇರಿದಂತೆ 106 ಉಷ್ಣಸ್ಥಾವರಗಳು ವಿದ್ಯುತ್ ಉತ್ಪಾದನೆ ಮಾಡುತ್ತಿವೆ. ಈ ಪೈಕಿ 53 ಸ್ಥಾವರಗಳು ನೇರವಾಗಿ ಕಲ್ಲಿದ್ದಲನ್ನು ಇಂಧನವಾಗಿ ಬಳಸುತ್ತಿವೆ. ದೇಶದ ಶೇ 68ರಷ್ಟು ಪಾಲು ವಿದ್ಯುತ್ ಉತ್ಪಾದನೆ ಈ ಮೂಲದಿಂದಲೇ ಬರುತ್ತಿದೆ.

ಪ್ರಲ್ಹಾದ ಜೋಶಿ ಈಚೆಗೆ ರಾಜ್ಯಸಭೆಯಲ್ಲಿ ಸದಸ್ಯರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ, ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ 13.19 ಕೋಟಿ ಟನ್ನು ಕಲ್ಲಿದ್ದಲನ್ನು ಭಾರತ ಆಮದು ಮಾಡಿಕೊಂಡಿದೆ, ಇದರ ಮೌಲ್ಯ ₹ 2,28,742 ಕೋಟಿ ಎಂಬ ಅಂಕಿಅಂಶವನ್ನು ಮುಂದಿಟ್ಟರು. ಈ ಸಂದರ್ಭದಲ್ಲಿ ನಾವು ನೀತಿ ಆಯೋಗ ಈಗಾಗಲೇ ಸೂಚಿಸಿರುವ ಎಚ್ಚರಿಕೆಯನ್ನು ಗಮನಿಸಬೇಕು- ಕಲ್ಲಿದ್ದಲು ಆಧಾರಿತ ಉಷ್ಣಸ್ಥಾವರಗಳ ಅರ್ಧದಷ್ಟನ್ನು 2030ರ ಹೊತ್ತಿಗೆ ಭಾರತ ಸ್ಥಗಿತಗೊಳಿಸಲೇಬೇಕು. ನಲವತ್ತೈದು ವರ್ಷಗಳ ಕಾಲ ನಿರಂತರವಾಗಿ ಕಾರ್ಯಶೀಲವಾದ ಮೇಲೆ ಈ ಸ್ಥಾವರಗಳ ಸಾಮರ್ಥ್ಯ ಕುಗ್ಗಿ ಅನುಪಯುಕ್ತವಾಗುತ್ತವೆ.

ಕೇಂದ್ರ ಸರ್ಕಾರವು ವಿಶೇಷವಾಗಿ ಜಾರ್ಖಂಡ್, ಛತ್ತೀಸಗಡ, ಒಡಿಶಾ, ಮಧ್ಯಪ್ರದೇಶದಂತಹ ಪ್ರಮುಖ ಕಲ್ಲಿದ್ದಲು ಕ್ಷೇತ್ರಗಳಲ್ಲಿ ಗುರುತಿಸಿರುವ 141 ಬ್ಲಾಕ್‌ಗಳ ಹರಾಜು ಮಾಡಿರುವುದನ್ನು ಗಮನಿಸಿದರೆ, ಕಲ್ಲಿದ್ದಲಿನ ಬಳಕೆ ಸದ್ಯದಲ್ಲಿ ತಗ್ಗುವ ಸೂಚನೆಗಳಿಲ್ಲ. ನಮ್ಮ ಕಲ್ಲಿದ್ದಲು ಸಂಪನ್ಮೂಲದಲ್ಲಿ ಹೆಚ್ಚಿನ ಪಾಲನ್ನು ಗಣಿಗಾರಿಕೆ ಮಾಡಲಾಗುತ್ತಿಲ್ಲ ಎಂಬುದು ಸರ್ಕಾರದ ಚಿಂತೆ. ಏಕೆಂದರೆ ಪ್ರತಿವರ್ಷ ವಿದ್ಯುತ್ ಬೇಡಿಕೆ ಹಿಂದಿನ ವರ್ಷಕ್ಕಿಂತ ಶೇ 7ರಷ್ಟು ಹೆಚ್ಚುತ್ತಿದೆ. ಹೆಚ್ಚಿನ ಪಾಲು ಉಷ್ಣಸ್ಥಾವರಗಳಿಂದಲೇ ಬರಬೇಕು. ನಮ್ಮ ದೇಶದ ಮಟ್ಟಿಗೆ ವಾಯುಮಾಲಿನ್ಯದಲ್ಲಿ ಕಲ್ಲಿದ್ದಲಿನ ದಹನದ ಪಾಲೇ ಶೇ 40ರಷ್ಟಿದೆ ಎಂಬುದು ಜಗಜ್ಜಾಹೀರಾಗಿದೆ. ಇನ್ನು ಕಲ್ಲಿದ್ದಲು ಉತ್ಪಾದನೆ ಏಕೆ ಹೆಚ್ಚುತ್ತಿಲ್ಲ? ನಿಧಿ ಇದ್ದರೂ ಪರದಾಟವೇಕೆ? ಇಲ್ಲಿ ಹಲವು ಗೊಂದಲಗಳಿವೆ.

ಮೊದಲನೆಯದಾಗಿ, ಕಲ್ಲಿದ್ದಲು ಇರುವುದು ಹೆಚ್ಚಿನ ಪಾಲು ದಟ್ಟ ಕಾಡಿನಲ್ಲಿ. ಅಲ್ಲಿ ಧಾರಾಳವಾಗಿ ಗಣಿಗಾರಿಕೆ ಮಾಡುವಂತಿಲ್ಲ. ಅರಣ್ಯ ಕಾಯ್ದೆಯನ್ನೇ ಸಡಿಲಗೊಳಿಸಬೇಕಾಗುತ್ತದೆ. ಮೇಲಾಗಿ ಹಸಿರು ನ್ಯಾಯಪೀಠ ಒಪ್ಪಬೇಕಾಗುತ್ತದೆ. ಜೊತೆಗೆ ಸ್ಥಳೀಯರ ಎತ್ತಂಗಡಿ ಆಗಬೇಕು. ನಿರ್ವಸತಿಗರಿಗೆ ಮರುವಸತಿ ಕಲ್ಪಿಸಬೇಕು. ನಿತ್ಯ ಜೀವನಕ್ಕೆ ಸೌಕರ್ಯ ಕಲ್ಪಿಸಬೇಕು. ಇದನ್ನು ಉಪಾಯವಾಗಿ ಬಗೆಹರಿಸಲೆಂದೇ 2015ರಲ್ಲಿ ಕೇಂದ್ರ ಸರ್ಕಾರ ‘ಡಿಸ್ಟ್ರಿಕ್ಟ್ ಮಿನರಲ್ ಫೌಂಡೇಷನ್’ ಎಂಬ ಟ್ರಸ್ಟ್ ಸ್ಥಾಪಿಸಿತು. ಸ್ಥಳೀಯರಿಗೆ ಗಣಿಯ ಉತ್ಪನ್ನದ ಲಾಭದಲ್ಲಿ ಇಂತಿಷ್ಟು ಪಾಲು ಕೊಡಬೇಕೆಂದು ಮೊದಲ ಬಾರಿಗೆ ಕಾನೂನು ರೂಪಿಸಿತು. ವಾಸ್ತವವಾಗಿ ಈ ಹಣವನ್ನು ಸರ್ಕಾರ ಕೊಡುತ್ತಿಲ್ಲ. ಗಣಿ ದಣಿಗಳಿಂದ ಸರ್ಕಾರಕ್ಕೆ ಎಷ್ಟು ರಾಜಧನ ಕೊಡಬೇಕಾಗುತ್ತದೋ ಅದರ ಶೇ 30 ಭಾಗವನ್ನು ಗಣಿಯಿಂದ ನಿರಾಶ್ರಿತರಾದ ಜನರಿಗೆ ಸೌಲಭ್ಯ ಕಲ್ಪಿಸಲು ಬಳಸಬೇಕು. ಈ ಲೆಕ್ಕದಲ್ಲಿ ಈಗಾಗಲೇ ಈ ನಿಧಿಗೆ ₹ 36,000 ಕೋಟಿ ಸಂದಿದೆ. ಮುಂದೆ ವಾರ್ಷಿಕ ₹ 6,000ದಿಂದ 7,000 ಕೋಟಿ ಜಮಾ ಆಗಲಿದೆ.

ಇದರ ಜೊತೆಗೆ ಇನ್ನೊಂದು ಸಂಕೀರ್ಣ ವಿಚಾರವೂ ಇದೆ. ರೈಲ್ವೆ ಕಂಟೇನರ್‌ಗಳ ಮೂಲಕ (ರೇಕ್) ಕಲ್ಲಿದ್ದಲನ್ನು ಸಾಗಿಸುವುದು ಕೂಡ ಸವಾಲಾಗಿದೆ. ಏಕೆಂದರೆ ರೈಲ್ವೆ ಇಲಾಖೆ ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ರೇಕ್‌ಗಳನ್ನು ಉತ್ಪಾದಿಸುತ್ತಿಲ್ಲ. ಈ ಕಾರಣದಿಂದ, ಹೊಸ ಉಷ್ಣ ಸ್ಥಾವರಗಳನ್ನು ಸ್ಥಾಪಿಸದಿದ್ದರೂ ಇರುವ ಸ್ಥಾವರಗಳು ಅಬಾಧಿತವಾಗಿ ವಿದ್ಯುತ್ ಉತ್ಪಾದಿಸಲೇಬೇಕು. ನಾವು ಉಳಿದ ದೇಶಗಳಿಗಿಂತ ಹೆಚ್ಚು ಕಲ್ಲಿದ್ದಲಿನ ಮೇಲೆಯೇ ಅವಲಂಬಿತರಾಗಿದ್ದೇವೆ.

ಈ ಆರ್ಥಿಕ ವರ್ಷದಲ್ಲಿ ಈವರೆಗೆ ಆಮದು ಮಾಡಿಕೊಂಡಿರುವ ಕಲ್ಲಿದ್ದಲಿನಿಂದ ನಮ್ಮ ಕೊರತೆ ನೀಗಬಹುದೇ? ಇಲ್ಲ, ಅದರ ಉದ್ದೇಶವೇ ಬೇರೆ. ಭಾರತದ ಕಡಲತೀರದ ಕೆಲವು ಉಷ್ಣಸ್ಥಾವರಗಳಿಗೆ ಮತ್ತು ಸಿಮೆಂಟ್, ರಸಗೊಬ್ಬರ, ಉಕ್ಕು ಕಾರ್ಖಾನೆಗಳಿಗೆ ಉತ್ಕೃಷ್ಟ ದರ್ಜೆಯ ಕಲ್ಲಿದ್ದಲು ಬೇಕು. ಅದು ನಮ್ಮಲ್ಲಿ ದೊರೆಯುತ್ತಿಲ್ಲ. 1993ರ ಮುಕ್ತ ಸಾಮಾನ್ಯ ಪರವಾನಗಿ (ಓಪನ್ ಜನರಲ್ ಲೈಸೆನ್ಸ್) ರೀತ್ಯ ಕಲ್ಲಿದ್ದಲನ್ನು ನೇರವಾಗಿ ವಿದೇಶಗಳಿಂದ ಆಮದು ಮಾಡಿಕೊಳ್ಳಲು ಖಾಸಗಿ ವಲಯಕ್ಕೂ ಅವಕಾಶವಿದೆ.

ಇಂಡೊನೇಷ್ಯ, ಆಸ್ಟ್ರೇಲಿಯ, ದಕ್ಷಿಣ ಆಫ್ರಿಕಾದಿಂದ ಉತ್ಕೃಷ್ಟ ದರ್ಜೆಯ ಕಲ್ಲಿದ್ದಲು ಆಮದು ಮಾಡಿಕೊಳ್ಳುತ್ತಿದ್ದೇವೆ. ಈಗ ರಷ್ಯಾವು ಉಕ್ರೇನ್ ಮೇಲೆ ಯುದ್ಧ ಸಾರಿರುವುದರಿಂದ ಯುರೋಪಿನ ಅನಿಲ ಪೂರೈಕೆಗೆ ದೊಡ್ಡ ಪ್ರಮಾಣದ ತೊಂದರೆಯಾಗಿದೆ. ಕಲ್ಲಿದ್ದಲು ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ಭಾರತವು ಟನ್ನಿಗೆ 400 ಡಾಲರ್ ತೆತ್ತು ಆಮದು ಮಾಡಿಕೊಳ್ಳಬೇಕಾಯಿತು. ಆಮದು ಮಾಡಿಕೊಂಡ ಕಲ್ಲಿದ್ದಲಿನ ಶೇ 80ರಷ್ಟು ಪಾಲನ್ನು ಅದಾನಿ ಕಂಪನಿಗೆ ಪೂರೈಸಲಾಗುತ್ತಿದೆ. ಕಲ್ಲಿದ್ದಲಿನಿಂದ ಅನಿಲ ಉತ್ಪಾದಿಸಲು ಕೇಂದ್ರ ಸರ್ಕಾರ ಈ ವರ್ಷ ಖಾಸಗಿ ಸಂಸ್ಥೆಗಳನ್ನು ಉತ್ತೇಜಿಸಲು ₹ 6,000 ಕೋಟಿ ಮೀಸಲಿಟ್ಟಿದೆ. ಈ ಅನಿಲ ಉತ್ಪಾದನೆಯಲ್ಲಿ ಹೆಚ್ಚಿನ ಪಾಲು ಕಾರ್ಬನ್ ಡೈ ಆಕ್ಸೈಡ್ ವಾಯುಗೋಳಕ್ಕೆ ಸೇರುವುದಿಲ್ಲ ಎಂಬುದು ಒಂದು ಸಕಾರಾತ್ಮಕ ಅಂಶ.

ರಾಜ್ಯಸಭೆ ಮಹತ್ವದ ಮಸೂದೆಯೊಂದನ್ನು ಇತ್ತೀಚೆಗೆ ಅಂಗೀಕರಿಸಿದೆ. ಇದು ಶಕ್ತಿ ಸಂರಕ್ಷಣೆಯ ಮಸೂದೆ (ತಿದ್ದುಪಡಿ, 2022). ಇದು ಅನ್ವಯಿಸುವುದು ದೊಡ್ಡ ದೊಡ್ಡ ವಸತಿ ಸಮುಚ್ಚಯಗಳಿಗೆ. ಕಟ್ಟಡಕ್ಕೆ ಬೇಕಾದ ವಿದ್ಯುತ್ ಪೂರೈಕೆಗಾಗಿ ಇನ್ನುಮುಂದೆ ಪೆಟ್ರೋಲ್, ಡೀಸೆಲ್, ಕಲ್ಲಿದ್ದಲು ಆಧಾರಿತ ವಿದ್ಯುತ್ ಬಳಸುವಂತಿಲ್ಲ. ಅಂದರೆ ನೂರು ಕಿಲೊವ್ಯಾಟ್ ವಿದ್ಯುತ್ ಬಳಸುವ ಕಟ್ಟಡಗಳು ಇನ್ನುಮುಂದೆ ಹೈಡ್ರೋಜನ್, ಅಮೋನಿಯ, ಎಥೆನಾಲ್‌ನಂತಹ ಅಸಾಂಪ್ರದಾಯಿಕ ಮೂಲದಿಂದ ವಿದ್ಯುತ್ ಪಡೆಯಬೇಕು. ಇದನ್ನು ಕಡ್ಡಾಯಗೊಳಿಸಲಾಗಿದೆ. ಇದು ಶಕ್ತಿ ಸಂರಕ್ಷಣೆಯಲ್ಲಿ ಭಾರತ ಇಟ್ಟಿರುವ ದೊಡ್ಡ ಹೆಜ್ಜೆ ಎಂದು, ನವೀಕರಿಸಬಹುದಾದ ಇಂಧನ ಇಲಾಖೆ ಅಭಿಪ್ರಾಯಪಟ್ಟಿದೆ. ಇದರ ಜೊತೆಗೆ ಎಲ್‌ಇಡಿ ಬಲ್ಬ್ ಬಳಕೆಗೆ ಪ್ರಾರಂಭಿಸಿದ ಮೇಲೆ 12,900 ಕೋಟಿ ಯುನಿಟ್ ವಿದ್ಯುತ್ ಉಳಿತಾಯವಾಗಿದೆ ಎಂದೂ, ಹತ್ತು ಕೋಟಿ ಟನ್ನು ಕಾರ್ಬನ್ ಡೈ ಆಕ್ಸೈಡ್ ಉತ್ಸರ್ಜನೆಗೆ ಲಗಾಮು ಬಿದ್ದಿದೆ ಎಂದೂ ಅಂಕಿಅಂಶವನ್ನು ಇಲಾಖೆ ನೀಡಿದೆ.

2015ರಲ್ಲಿನ ಪ್ಯಾರಿಸ್ ಒಪ್ಪಂದದಂತೆ, ಭಾರತವು ತಾನು ಉತ್ಸರ್ಜಿಸುತ್ತಿರುವ ಈಗಿನ ಕಾರ್ಬನ್ ಡೈ ಆಕ್ಸೈಡ್ ಪ್ರಮಾಣವನ್ನು 2030ರೊಳಗೆ ಶೇ 35 ಭಾಗ ಕಡಿಮೆಗೊಳಿಸುವುದಾಗಿ ಒಪ್ಪಿಕೊಂಡಿತ್ತು. ನವೀಕರಿಸುವ ಇಂಧನದ ಬಳಕೆಯಲ್ಲಿ ಭಾರತ ಹೊಸ ಪರ್ವವನ್ನೇ ಪ್ರಾರಂಭಿಸಿದೆ ಎಂದು ವಿಶ್ವಸಂಸ್ಥೆ ಕೂಡ ಪ್ರಶಂಸೆ ಮಾಡಿದೆ. ಆದರೆ ಕಲ್ಲಿದ್ದಲು ಆಧಾರಿತ ಉಷ್ಣಸ್ಥಾವರಗಳನ್ನು ಹಂತಹಂತವಾಗಿ ಸ್ಥಗಿತಗೊಳಿಸುವ ಜವಾಬ್ದಾರಿಯೂ ಭಾರತಕ್ಕಿದೆ; ಜಗತ್ತು ನಮ್ಮ ನಡೆಯನ್ನು ಗಮನಿಸುತ್ತಿದೆ.



## ಚುರುಮುರಿ



### ಕಾಯಿನ್ ಹೆಡ್ಡು!

• ತುರುವೇಕೆರೆ ಪ್ರಸಾದ್

‘ಹೆಡ್ಡಲ್ಲಿ ದುಡ್ಡಿರುತ್ತಾ?’ ಕೇಳಿದ್ರು ಪದ್ದಮ್ಮನೋರು! ‘ಯಾಕೆ ಹೀಗೆ ಕೇಳ್ತಿದೀಯ?’ ಅಂದ ಪರ್ಮೇಶಿ.

‘ಅವಾಗವಾಗ ನಮ್ಮ ವಿರೋಧ ಪಕ್ಷದೋರು ಯಾವ ಹೆಡ್ಡಲ್ಲೂ ದುಡ್ಡೇ ಇಲ್ಲ ಅಂತಿರ್ತಾರೆ’.

‘ಓ ಅದಾ? ಅವರು ಹೇಳ್ತಿರೋದು ನಮ್ ತಲೇಲಿ ದುಡ್ಡಿರಲ್ಲ ಅಂತಲ್ಲ, ಸರ್ಕಾರಿ ಖಾತೆಗಳಲ್ಲಿ ದುಡ್ಡಿರಲ್ಲ ಅಂತ’.

‘ಯಾಕ್ ದುಡ್ಡಿರಲ್ಲ?’

‘ಏನೇನೋ ಓವರ್‌ಹೆಡ್ಸ್ ಬಂದಿರುತ್ವೆ. ಜೊತೆಗೆ ಸಬ್‌ಹೆಡ್‌ಗಳನ್ನು ಮಾಡಿ ಟ್ರಾನ್ಸ್‌ಫರ್ ಮಾಡ್ಕೊಂಡಿರ್ತಾರಲ್ಲ’.

‘ಹಾಗಂದ್ರೆ ಹೇಗೆ? ಇದು ಡಬಲ್ ಹೆಡ್ ಸರ್ಕಾರ, ಕೇಂದ್ರ, ರಾಜ್ಯ ಎರಡು ಕಡೆನೂ ಅಧಿಕಾರ ಇದೆ ಅಂದ್ಮೇಲೆ ಹೆಡ್ ಖಾಲಿ ಆಗೋದಾದ್ರೂ ಹೇಗೆ?’

‘ಹೇಗೆ ಅಂದ್ರೆ ಈಗ ಎಲೆಕ್ಷನ್ ಬರ್ತಿದೆ. ಪರ್‌ಹೆಡ್‌ಗೆ ಇಷ್ಟು ಅಂತ ದುಡ್ಡು ಹಾಕ್ಬೇಕಲ್ಲ. ನೀತಿ ಸಂಹಿತೆ ಇರುತ್ತೆ. ಸರ್ಕಾರಗಳು ಅಫಿಶಿಯಲ್ ಹೆಡ್‌ಗಳ ಮೂಲಕ ಖರ್ಚು ಮಾಡೋ ಹಾಗಿಲ್ಲ. ವಿರೋಧ ಪಕ್ಷದೋರು ಅಕೌಂಟ್ ಮೂಲಕ ಕೊಡೋ ಹಾಗಿಲ್ಲ. ಅದಕ್ಕೇ ಇಂಡಿವಿಜುಯಲ್ ಹೆಡ್ ತುಂಬಿಸೋ ಪ್ರಯತ್ನ ಶುರುವಾಗುತ್ತೆ’.

‘ಅಂದ್ರೆ ಹೆಡ್ಡಲ್ಲಿ ದುಡ್ಡು ಬೀಳೋಕೆ ಎಲೆಕ್ಷನ್ ಬರ್ಬೇಕಾ?’

‘ಹೌದು ಮತ್ತೆ? ನಮ್ಮಂತೋರಿಗೆ ಅದೂ ಇಲ್ಲ. ತಲೇಲಿ ಬುದ್ಧಿ ಇರೋರಿಗೆ ದುಡ್ಡು ಹಾಕೋದು ವೇಸ್ಟ್ ಅಂತ ನಮ್ ಹೆಡ್‌ಗೆ ದುಡ್ಡು ಹಾಕೋದೇ ಇಲ್ಲ’.

‘ಅದ್ಸರಿ, ಹೀಗೆ ಒಂದೊಂದು ಹೆಡ್‌ಗೂ ದುಡ್ಡು ಹಾಕುದ್ರೆ ವಾಪಸ್ ತಗ್ಳೋದು ಹೇಗೆ?’

ಪರ್ಮೇಶಿ ಶೋಕೇಸಲ್ಲಿದ್ದ ಪಿಂಗಾಣಿ ಕಾಯಿನ್ ಹೆಡ್ ಬೊಂಬೆ ತಗೊಂಡ. ಟೀಪಾಯ್ ಮೇಲಿದ್ದ ಕಾಫಿ ಕಪ್‌ನಿಂದ ಅದರ ತಲೆ ಒಡೆದ. ನಾಣ್ಯ, ನೋಟುಗಳು ಝಣ ಝಣ ಕೆಳಗೆ ಬಿದ್ದವು.

‘ಹೇಗೆ ವಾಪಸ್ ತಗೋತಾರೆ ಗೊತ್ತಾಯ್ತಾ? ಹೀಗೆ ನಮ್ಮನ್ನ ಹೆಡ್ಡರನ್ನಾಗಿಸಿ ಹೆಡ್ ಒಡೆದು ತಗೋತಾರೆ. ಖರ್ಚಿಗೆ ಕಾಸಿರಲಿಲ್ಲ, ಒಂದು ರೌಂಡ್ ಆಚೆ ಹೋಗ್ ಬರ್ತೀನಿ’ ಎಂದು ಚಿಲ್ಲರೆ ಆರಿಸಿಕೊಂಡು ಹೊರಹೋದ. ಪದ್ದಮ್ಮ ಅವಾಕ್ಕಾಗಿ ನಿಂತರು.

## ದಿನದ ಟ್ವೀಟ್


### ಇದೆಂಥಾ ನಡೆ?



**ಬೊಮ್ಮಾಯಿ, ಮೋದಿಯವರ ಮುಂದೆ ನಾಯಿ- ಸಿದ್ದರಾಮಯ್ಯ. ಸೋನಿಯಾ ಗಾಂಧಿ ಮನೆಯಲ್ಲಿ ಸಿದ್ದರಾಮಯ್ಯ ಇಲಿ, ಬೆಕ್ಕು, ಜಿರಳೆ ಆಗಿರ್ತಾರೆ: ಶ್ರೀರಾಮುಲು. ನರ್ಸರಿಗೆ ಹೋಗೋ ಪುಟ್ಟ ಕಂದಮ್ಮಗಳು ಕೂಡ ಇವರ ರೀತಿ ಜಗಳ ಆಡುವುದಿಲ್ಲ. # ಇವರೆಲ್ಲಾ ನಮ್ ನಾಯಕರು.**

**ಪೂರ್ವಿ ರಾಜು**

## ಕಿಡಿನುಡಿ



**ನಿಮಗೆ ಒಂದು ಚಲನಚಿತ್ರ ಇಷ್ಟವಾಗದಿದ್ದರೆ ಅದನ್ನು ನೋಡಲು ಹೋಗಬೇಡಿ. ಬೇಕಾದರೆ ಅದನ್ನು ಬಹಿಷ್ಕರಿಸಿ. ಆದರೆ ಈ ಬಗೆಯ ಗೂಂಡಾಗಿರಿ ನಡೆಸುವುದು, ಅದರಲ್ಲೂ ಪೊಲೀಸರ ಸಮ್ಮುಖದಲ್ಲಿ ಯಾವ ಕಾರಣಕ್ಕೂ ಒಪ್ಪತಕ್ಕದ್ದಲ್ಲ.**

(ಅಹಮದಾಬಾದ್‌ನ ಮಾಲೊಂದರಲ್ಲಿ ನಡೆದ ‘ಪಠಾಣ್’ ಚಲನಚಿತ್ರದ ಪ್ರಚಾರ ಕಾರ್ಯಕ್ರಮದ ವಿರುದ್ಧ ಬಜರಂಗದಳ ಕಾರ್ಯಕರ್ತರು ನಡೆಸಿದ ದಾಂದಲೆಗೆ ಪ್ರತಿಕ್ರಿಯೆ)

**ಸುಶಾಂತ್ ಸರೀನ್,** ಸೀನಿಯರ್ ಫೆಲೊ, ಅಬ್ಸರ್ವರ್ ರಿಸರ್ಚ್ ಫೌಂಡೇಷನ್

## 25 ವರ್ಷಗಳ ಹಿಂದೆ

ಮಂಗಳವಾರ, 6-1-1998

• **ಲೋಕಶಕ್ತಿ ಜತೆ ಬಿಜೆಪಿ ಮೈತ್ರಿ: ಅಡ್ವಾಣಿ**

**ಬೆಂಗಳೂರು, ಜನವರಿ 5**– ಲೋಕಸಭಾ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ನೇತೃತ್ವದ ಲೋಕಶಕ್ತಿಯು ತಮ್ಮ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ನಿರ್ಧರಿಸಿದೆ ಎಂದು ಬಿಜೆಪಿ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಇಂದು ಇಲ್ಲಿ ಪ್ರಕಟಿಸಿದರು.

‘ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಲೋಕಶಕ್ತಿ ಕೈಗೊಂಡಿರುವ ತೀರ್ಮಾನದ ಬಗ್ಗೆ ನನಗೆ ತಿಳಿಸಲಾಗಿದೆ. ಸ್ಥಾನ ಹಂಚಿಕೆ ಮಾಡಿಕೊಳ್ಳುವ ಕುರಿತು ಆ ಪಕ್ಷದ ಪ್ರಮುಖರೊಡನೆ ರಾಜ್ಯ ಬಿಜೆಪಿ ಮುಖಂಡರು ಸದ್ಯದಲ್ಲೇ ಮಾತುಕತೆ ನಡೆಸುವರು’ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

• **ಅಂಚೆ ನೌಕರರ ಮುಷ್ಕರ: ಸೇವೆ ಅಸ್ತವ್ಯಸ್ತ**

**ನವದೆಹಲಿ, ಜನವರಿ 5 (ಪಿಟಿಐ)**– ವೇತನವನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿ ಅಂಚೆ ಇಲಾಖೆಯ ಸಿಬ್ಬಂದಿ ಇಂದು ದೇಶದಾದ್ಯಂತ ಒಂದು ದಿನದ ಮುಷ್ಕರ ನಡೆಸಿದ ಕಾರಣ ಅಂಚೆ ಸೇವೆಯಲ್ಲಿ ಅಸ್ತವ್ಯಸ್ತವಾಯಿತು.

ಗ್ರಾಮೀಣ ಪ್ರದೇಶದಲ್ಲಿ ಅಂಚೆ ಇಲಾಖೆಯ ಕಾರ್ಯವನ್ನು ನಿರ್ವಹಿಸುವ ಇಲಾಖೇತರ ಸಿಬ್ಬಂದಿಗೆ ನ್ಯಾಯಮೂರ್ತಿ ತಲ್ವಾರ್ ಸಮಿತಿ ಮಾಡಿರುವ ಶಿಫಾರಸನ್ನು ಜಾರಿಗೊಳಿಸಬೇಕೆಂದು ಅಂಚೆ ಸಂಸ್ಥೆಗಳು ಒತ್ತಾಯಿಸಿವೆ.

## 50 ವರ್ಷಗಳ ಹಿಂದೆ

ಶನಿವಾರ, 6-1-1973

• **‘ಆಂಧ್ರದ ವಿಭಜನೆ ಪರಿಹಾರವಲ್ಲ; ಹೊಸ ಸಮಸ್ಯೆಗಳಿಗೆ ಮೂಲ’**

**ಬೆಂಗಳೂರು, ಜನವರಿ 5**– ಆಂಧ್ರ ವಿಭಜನೆಯಿಂದ ಸಮಸ್ಯೆ ಅಂತ್ಯಗೊಳ್ಳದೆ ‘ಅನೇಕ ಹೊಸ ಸಮಸ್ಯೆಗಳಿಗೆ ಮೂಲವಾಗುತ್ತದೆ’ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

‘ಈ ಕ್ರಮದಿಂದ ಬೇರೆ ರಾಜ್ಯಗಳ ಮೇಲೆ ಪರಿಣಾಮ ಆಗಬಹುದು. ಆದರೆ ಅಲ್ಲಿರುವ ಜನರಿಗೇ ಇತರ ಸಮಸ್ಯೆಗಳಿಗೆ ಕಾರಣವಾಗಬಹುದು’ ಎಂದು ತಿಳಿಸಿದರು.

• **ವರ್ಗರಹಿತ, ಜಾತಿರಹಿತ ಸಮಾಜ ನಿರ್ಮಾಣವೇ ಗುರಿ: ಇಂದಿರಾ ಗಾಂಧಿ**

**ಬೆಂಗಳೂರು, ಜನವರಿ 5**– ‘ದೇಶದ ಮೂರರಲ್ಲಿ ಎರಡು ಭಾಗ ಪ್ರದೇಶದಲ್ಲಿ ಅಭಾವ ಪರಿಸ್ಥಿತಿ ಇರುವುದರ ದುರ್ಲಾಭ ಪಡೆದು ಜಾತಿ ಮತ್ತು ಹಿಂಸಾಚಾರದ ಹೆಸರಿನಲ್ಲಿ ಕೆಲವು ಶಕ್ತಿಗಳು ಜನತೆಯನ್ನು ಆರ್ಥಿಕ ಹಾಗೂ ಸಾಮಾಜಿಕ ಸಮತೆ ದಾರಿಯಿಂದ ವಿಮುಖಗೊಳಿಸುವ ಕಾರ್ಯದಲ್ಲಿ ತೊಡಗುತ್ತಿವೆ’ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಹೇಳಿದರು.

‘ದೇಶದಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಪರಿವರ್ತನೆಯ ಕ್ರಾಂತಿ ವಿಳಂಬವಾಗುತ್ತಿದೆಯಾದರೆ, ಅದಕ್ಕೆ ಸಮಾಜವಾದೀ ಕ್ರಮಗಳಿಂದಾಗಿ ಸ್ವಹಿತಕ್ಕೆ ಬಾಧೆಪಟ್ಟಿರುವ ಈ ಶಕ್ತಿಗಳ ಪ್ರಭಾವವೇ ಕಾರಣ’ ಎಂದು ಹೇಳಿದ ಪ್ರಧಾನಿಯವರು, ‘ಪ್ರಗತಿಶೀಲ ಮಾರ್ಗ ನಂಬಿರುವ ಜನರು ಒಗ್ಗಟ್ಟಾಗದೇ ಹೋದರೆ, ಈ ಶಕ್ತಿಗಳಿಂದ ತೊಂದರೆ ತಪ್ಪಿದ್ದಲ್ಲ’ ಎಂದು ಎಚ್ಚರಿಕೆ ನೀಡಿದರು.

## ಸಂಗತ

# ದೇಹ ಚಿಗುರಲಿ ಎಲೆ ಎಲೆಯಲ್ಲಿ!

### ಮನುಷ್ಯರ ಮೃತದೇಹವನ್ನು ಸಾವಯವ ಗೊಬ್ಬರ ಮಾಡುವ ಪ್ರಕ್ರಿಯೆಗೆ ಚಾಲನೆಯೇನೋ ದೊರೆತಿದೆ. ಆದರೆ...

• ಸದಾಶಿವ್ ಸೊರಟೂರು

**ಅದೊಂದು** ದಿನಕರ ದೇಸಾಯಿ ಅವರ ಪದ್ಯ. ಅದರ ಒಂದೆರಡು ಸಾಲುಗಳು ಹೀಗಿವೆ: ‘ನನ್ನ ದೇಹದ ಬೂದಿ ಗಾಳಿಯಲಿ ತೂರಿಬಿಡಿ, ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ; ಬೂದಿ ಗೊಬ್ಬರದಿಂದ ತೆನೆಯೊಂದು ನೆಗೆದುಬರೆ ಧನ್ಯವಾಯಿತು ಹುಟ್ಟು ಸಾವಿನಲ್ಲಿ’. ಸತ್ತ ಮೇಲೂ ದೇಹ ಸಾರ್ಥಕವಾಗಲಿ ಎಂಬ ಕವಿಯ ಆಶಯದ ಸಾಲುಗಳಿವು.

ಮಕ್ಕಳಿಗೆ ಪದ್ಯ ಬೋಧಿಸುವಾಗ, ದೇಹವು ಗೊಬ್ಬರವಾಗುವುದು ಮತ್ತು ಅದನ್ನು ನಮಗೆ ಬೇಕಾದಲ್ಲಿ ಬಳಸುವುದರ ಬಗ್ಗೆ ನನಗೆ ಸಮರ್ಥವಾಗಿ ವಿವರಿಸಲು ಆಗಿರಲಿಲ್ಲ. ‘ನ್ಯಾಚುರಲ್ ಆರ್ಗ್ಯಾನಿಕ್ ರಿಡಕ್ಷನ್’ ಪ್ರಕ್ರಿಯೆಯನ್ನು ಅಮೆರಿಕದ ನ್ಯೂಯಾರ್ಕ್ ಆಡಳಿತವು ಈಚೆಗೆ ಕಾನೂನುಬದ್ಧಗೊಳಿಸಿದೆ. ಈ ಪ್ರಕ್ರಿಯೆ ಹೇಗಿರುತ್ತದೆ ಎಂಬುದರ ವಿವರಗಳೂ ಲಭ್ಯವಾಗಿವೆ. ಮುಂದೊಮ್ಮೆ ದೇಹವು ಒಂದೊಳ್ಳೆ ಸಾವಯವ ಗೊಬ್ಬರವಾಗಬಹುದು ಎಂಬುದು ಆ ಕವಿಯ ಒಳಗಣ್ಣಿಗೆ ಹೇಗೆ ಹೊಳೆದಿತ್ತೊ!?

‘ನ್ಯಾಚುರಲ್ ಆರ್ಗ್ಯಾನಿಕ್ ರಿಡಕ್ಷನ್’ ಪ್ರಕ್ರಿಯೆ ಹೀಗಿರುತ್ತದೆ. ದೇಹವನ್ನು ಮಣ್ಣು, ಮರದ ಪುಡಿಯಂತಹವುಗಳೊಂದಿಗೆ ಕೂಡಿಸಿ ಒಂದೆರಡು ತಿಂಗಳು ಇಡಲಾಗುತ್ತದೆ. ಅದು ಸೂಕ್ಷ್ಮಾಣುಜೀವಿಯ ವಿಘಟನೆಗೆ ಒಳಗಾಗುತ್ತದೆ. ನಂತರ ಸ್ವಲ್ಪ ಶಾಖ ನೀಡಿ, ಸಂಸ್ಕರಿಸಿ ಅಂತಿಮವಾಗಿ ಗೊಬ್ಬರ ತಯಾರು ಮಾಡಲಾಗುತ್ತದೆ. ಇದಿಷ್ಟು ಪ್ರಕ್ರಿಯೆ.

ಒಂದು ದೇಹದಿಂದ 35ರಿಂದ 36 ಚೀಲಗಳಷ್ಟು ಗೊಬ್ಬರ ಲಭ್ಯವಾಗುತ್ತದೆ ಅನ್ನುತ್ತದೆ ಗೊಬ್ಬರ ತಯಾರಿಸುವ ‘ರೀಕಂಪೋಸ್’ ಕಂಪನಿ. ಆದರೆ ಈಗ ಎದ್ದಿರುವ ಚರ್ಚೆ ಗೊಬ್ಬರದ್ದಲ್ಲ ಮತ್ತು ಅದರ ಪರಿಣಾಮದ್ದೂ ಅಲ್ಲ, ನೈತಿಕತೆಯದ್ದು. ನಾಳೆ ಭಾರತದಲ್ಲೂ ಈ ತಂತ್ರಜ್ಞಾನ ಬರಬಹುದಾದ್ದರಿಂದ, ಜಗತ್ತಿನಲ್ಲಿ ಈ ವಿಷಯದ ಕುರಿತು ಆಗುತ್ತಿರುವ ಚರ್ಚೆಗೆ ನಾವು ಕಿವಿಗೊಡಲೇಬೇಕಾಗುತ್ತದೆ.

ಅಮೆರಿಕ ಸೇರಿದಂತೆ ಕೆಲವು ದೇಶಗಳ ಧಾರ್ಮಿಕ ಮುಖಂಡರು ದೇಹವನ್ನು ಗೊಬ್ಬರ ಮಾಡುವ ಈ ಪ್ರಕ್ರಿಯೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಅವರ ವಾದವಿಷ್ಟೆ, ‘ಮಾನವ ದೇಹ ಪವಿತ್ರವಾದದ್ದು. ಅದನ್ನೊಂದು ಕಸವೆಂಬಂತೆ ಪರಿಗಣಿಸಬಾರದು’. ಭಾರತೀಯರು ಹೂಳುವುದು ಮತ್ತು ಸುಡುವುದನ್ನು ಸಂಸ್ಕಾರದ ಒಂದು ಭಾಗವಾಗಿ ಪರಿಗಣಿಸಿರುವಾಗ, ಹೀಗೆ ಗೊಬ್ಬರ ಮಾಡುವುದನ್ನು ಹೇಗೆ ಸ್ವೀಕರಿಸಿಯಾರು ಎಂಬುದು ಪ್ರಶ್ನೆ.

ಉಳಿದ ಜೀವಿಗಳಿಗಿಂತ ಮನುಷ್ಯ ಶ್ರೇಷ್ಠ, ಪವಿತ್ರವಾದವನು ಎಂದು ಹೇಳಿದವರು ಯಾರು? ಪ್ರಕೃತಿಯಲ್ಲಿ ಇರುವ ಎಲ್ಲಾ ಜೀವಿಗಳಿಗೂ ಮಹತ್ವವಿದೆ. ಅದರಂತೆ ಮನುಷ್ಯನೂ ಒಂದು ಜೀವಿ ಅನ್ನುವುದನ್ನು ಪ್ರಕೃತಿಯೇ ನಮಗೆ ಪದೇ ಪದೇ ಖಚಿತಪಡಿಸಿದೆ, ಅರ್ಥ ಮಾಡಿಸಿದೆ. ಆದರೆ ನಾವು ಶ್ರೇಷ್ಠತೆಯ ವ್ಯಸನದ ಗೋಪುರದಿಂದ ಆಚೆ ಬರುತ್ತಿಲ್ಲ.

ಹೂಳುವುದು ಮತ್ತು ಸುಡುವುದಕ್ಕಿಂತ ಗೊಬ್ಬರ ಮಾಡುವುದರಿಂದ ಹೆಚ್ಚು ಲಾಭಗಳಿವೆ, ಸುಡುವುದರಿಂದ ಒಂದು ಟನ್ ಇಂಗಾಲ ಪರಿಸರ ಸೇರುತ್ತದೆ ಎನ್ನುತ್ತಾರೆ ತಜ್ಞರು. ಹೆಚ್ಚು ಜನಸಂಖ್ಯೆ ಇರುವ ಭಾರತದಂತಹ ದೇಶದಲ್ಲಿ ಹೂಳುವುದಕ್ಕೆ ಜಾಗದ ಸಮಸ್ಯೆ ಕಾಡಬಹುದು. ಆದರೂ ನಮ್ಮಲ್ಲಿ ನಂಬಿಕೆ ಮತ್ತು ಧಾರ್ಮಿಕ ವಿಧಿವಿಧಾನಕ್ಕೆ ಹೆಚ್ಚು ಮಹತ್ವ ಕೊಡುವುದರಿಂದ ಈ ಪ್ರಕ್ರಿಯೆಯನ್ನು ಬಹುಶಃ ಹೆಚ್ಚಿನ ಜನ ಒಪ್ಪಿಕೊಳ್ಳಲಾರರು. ಆದರೆ ದೇಹ ಸುಮ್ಮನೆ ವ್ಯರ್ಥವಾಗಿ ಹೋಗುವುದು ನಷ್ಟವಲ್ಲವೆ?

ನಮ್ಮ ಪ್ರೀತಿಪಾತ್ರರು ನಮ್ಮನ್ನು ಅಗಲಿದಾಗ ಅವರನ್ನು ಸುಟ್ಟು ಬೂದಿ ಮಾಡಿ ಅದನ್ನು ಹರಿಯುವ ನೀರಿನಲ್ಲಿ ಹಾಕಿ, ಇಲ್ಲವೆ ಒಂದು ಸಮಾಧಿ ಮಾಡಿ ಪೂಜಿಸುವುದಕ್ಕಿಂತ ಗೊಬ್ಬರ ಮಾಡಿಕೊಂಡು ನಮ್ಮ ಮನೆಯ ಮುಂದಿನ ಗಿಡಕ್ಕೊ, ತೋಟದ ಮರಕ್ಕೊ ಹಾಕಿದರೆ ಮರದ ಪ್ರತೀ ಎಲೆಯಲ್ಲೂ ಚಿಗುರಿನಲ್ಲೂ ಹೂವಿನಲ್ಲೂ ಅವರನ್ನು ಕಾಣಬಹುದು. ಒಂದು ಜೀವವೇ ನಮ್ಮ ಜೊತೆಗಿರುವ ಭಾವ. ನಮ್ಮೊಂದಿಗೆ ಆ ಗಿಡ ಮರಗಳೂ ಬೆಳೆಯುವುದರಿಂದ ಒಂದು ವಿಶಿಷ್ಟ ಆಪ್ತಭಾವ ನಮ್ಮನ್ನು ಆವರಿಸಿಕೊಳ್ಳುತ್ತದೆ. ಎಂತಹ ಅವಕಾಶವಲ್ಲವೇ?



‘ನನ್ನ ದೇಹವನ್ನು ಸುಟ್ಟು, ಬೂದಿಯನ್ನು ನದಿಗೆ ಚೆಲ್ಲಿ’, ‘ನೆಲದಲ್ಲಿ ಹೂಳಿರಿ’ ಎಂದೆಲ್ಲ ಮರಣಪತ್ರದಲ್ಲಿ ಬರೆಯುವುದಕ್ಕಿಂತ, ‘ನನ್ನ ದೇಹವನ್ನು ಗೊಬ್ಬರ ಮಾಡಿ ಮನೆಯ ಮುಂದಿನ ಮರ ಗಿಡಗಳಿಗೆ ಊಟ ಹಾಕಿ. ನಾನು ಎಲೆಯಾಗಿ ನಿಮ್ಮನ್ನು ನೋಡುತ್ತೇನೆ. ಹೂವಾಗಿ ಖುಷಿ ಕೊಡುತ್ತೇನೆ’ ಎಂದು ಬರೆದಿಟ್ಟು ಹೋಗುವ ದಿನಗಳು ಬರಬಹುದೇ? ಬಂದರೆ ಸಾವು ಕೂಡ ಸಾರ್ಥಕವಾಗುವ ಕ್ಷಣ ಅದು.

ಸತ್ತ ಮೇಲೆ ಮಣ್ಣಾಗು ಅನ್ನುವುದು ಇನ್ನುಮೇಲೆ ಹಳೆಯ ಮಾತಾಗಬಹುದು. ಸತ್ತ ಮೇಲೆ ಗೊಬ್ಬರವಾಗು ಅನ್ನುವುದು ಸಾರ್ಥಕತೆಯ ಮಾತು. ‘ಸತ್ತ ಮೇಲಾದರೂ ದೇಹ ಸೇವೆಗೆ ನಿಲಲಿ’ ಎಂಬ ಕವಿಯ ಮಾತು ಎಷ್ಟೊಂದು ಅರ್ಥಪೂರ್ಣವಾಗಿದೆ. ಸತ್ತ ಮೇಲೆ ಬೇರೆ ಏನಿರುತ್ತದೆ ಸೇವೆ ಮಾಡಲು ದೇಹವಲ್ಲದೆ?

ಇರುವಾಗ ಸ್ವಾರ್ಥದಲ್ಲಿ ಮುಳುಗುವ ನಾವು, ನಮ್ಮ ದೇಹವನ್ನಾದರೂ ಗಿಡಮರಗಳಿಗೆ ಹಂಚಿ ಹೋಗೋಣ. ‘ನೀ ಯಾರಿಗಾದೆ ಎಲೆ ಮಾನವಾ?’ ಅನ್ನುವ ಪ್ರಶ್ನೆಗೆ ‘ನಾನು ಚಿಗುರಿಗಾದೆ, ಎಲೆಗಾದೆ, ಹೂವಿಗಾದೆ ಮತ್ತು ತಿನ್ನುವ ಆಹಾರಕೂ ಆದೆ’ ಎನ್ನಬಹುದು ನಮ್ಮ ದೇಹ, ನಮ್ಮ ಉಸಿರು ಹೋದ ಬಳಿಕ.

## ವಾಚಕರ ವಾಣಿ

### ಆ್ಯಪ್ ಅವಾಂತರ ಸರಿಯಾಗಲಿ, ಫಜೀತಿ ತಪ್ಪಲಿ

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತಂತ್ರಜ್ಞಾನ ಬಳಸಿ, ನೋಂದಣಿ ಪ್ರಕ್ರಿಯೆಯನ್ನು ಸರಳೀಕರಿಸುವ ಭರವಸೆಯೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತು ಆ್ಯಪ್ ಒಂದನ್ನು ಬಿಡುಗಡೆ ಮಾಡಿದೆ. ₹ 500 ಪಾವತಿಸಿ ನೋಂದಣಿ ಮಾಡಿದಾಗ ನೀಡಿದ ಮಿಂಚಂಚೆಗೆ ಸಂದೇಶವೊಂದು ಬಂದಿದ್ದು, ವಸತಿ-ಊಟದ ಚೀಟಿಯಂತಹವುಗಳಿಗೆ ಆ್ಯಪ್‌ನಲ್ಲಿನ ಕ್ಯುಆರ್ ಕೋಡ್ ಕಡ್ಡಾಯವೆಂದು ತಿಳಿಸಲಾಗಿದೆ. ಇದೀಗ ಆ್ಯಪ್ ಅನ್ನು ಮೊಬೈಲ್‌ಗೆ ಇಳಿಸಿಕೊಂಡು ನಮ್ಮ ವಿವರಗಳನ್ನು ದಾಖಲಿಸಿದರೆ, ‘ನಮೂದಿಸಿದ ನೋಂದಣಿ ವಿವರ ನಮ್ಮ ದಾಖಲೆಯಲ್ಲಿ ಇಲ್ಲ. ದಯವಿಟ್ಟು ಪರಿಶೀಲಿಸಿ’ ಎಂಬ ಸಂದೇಶ ಬರುತ್ತದೆ. ಸಹಾಯವಾಣಿಗೆ ಕರೆ ಮಾಡಿದರೆ ಯಥಾಪ್ರಕಾರ ‘ನೀವು ಕರೆ ಮಾಡಿದ ಚಂದಾದಾರರು ಉತ್ತರಿಸುತ್ತಿಲ್ಲ!’ ಎಂಬ ಪ್ರತಿಕ್ರಿಯೆ ಲಭಿಸುತ್ತದೆ.

ನಾಡಿನ ವಿವಿಧ ಮೂಲೆಗಳಿಂದ ಸಾಹಿತ್ಯಾಸಕ್ತರು ಹಾವೇರಿಯತ್ತ ಧಾವಿಸಿದ್ದಾರೆ. ಆನ್‌ಲೈನ್ ನೋಂದಣಿ ಮಾಡಿಕೊಂಡ ತಪ್ಪಿಗೆ ಊಟ-ವಸತಿಯಂತಹವುಗಳಿಗೆ ಪರದಾಡುವ ಫಜೀತಿಗೆ ಸಿಲುಕುವ ಸೂಚನೆ ಗೋಚರಿಸುತ್ತಿದೆ. ಪರಿಷತ್ತು ಈ ದಿಸೆಯಲ್ಲಿ ಆದ್ಯತೆ ಮೇರೆಗೆ ಗಮನಹರಿಸಿ, ಈ ತಾಂತ್ರಿಕ ಸಮಸ್ಯೆಗೆ ಪರಿಹಾರ ನೀಡಲಿ.

**ಡಾ. ಚನ್ನು ಅ. ಹಿರೇಮಠ,** ರಾಣೆಬೆನ್ನೂರು

### ದ್ವೇಷಮೂಲದ ತರ್ಕರಹಿತ ವಾದ

‘ಮನದ ಕೋಪ ತನ್ನ ಅರುಹಿನ ಕೇಡು’ ಎಂಬುದು ವಚನಕಾರರ ಪ್ರಸಿದ್ಧವಾದ ಮಾತು. ಅಂದರೆ ಕೋಪ ಬಂದಾಗ ಅದಕ್ಕೆ ಮೊದಲು ಬಲಿಯಾಗುವುದು ಮನುಷ್ಯನ ವಿವೇಕ. ಅದಕ್ಕೆ ನಿದರ್ಶನ ಲೇಖಕ ಕುಂ.ವೀರಭದ್ರಪ್ಪ ಅವರು ಹೇಳಿರುವ ‘ದಕ್ಷಿಣ ಭಾರತದಲ್ಲಿರುವ ನಾವು ದ್ರಾವಿಡರೇ ಹೊರತು ಹಿಂದೂಗಳಲ್ಲ’ ಎಂಬ ಮಾತು (ಪ್ರ.ವಾ., ಜ. 5). ಆರ್ಯ ಮತ್ತು ದ್ರಾವಿಡ ಎಂಬುವು ಜನಾಂಗವಾಚಿ ಶಬ್ದಗಳು (ಅದು ಕೂಡ ಖಚಿತವಿಲ್ಲ. ಆರ್ಯರು ಹೊರಗಿನಿಂದ ಬಂದವರು ಎಂಬುದೂ ಖಚಿತವಿಲ್ಲ). ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ ಎಂಬುವು ಧರ್ಮವಾಚಿಗಳು. ಧರ್ಮಗಳು ಯಾವುದೇ ಜನಾಂಗಕ್ಕೆ ಇಲ್ಲವೆ ಪ್ರದೇಶಕ್ಕೆ ಸೀಮಿತವಾದವಲ್ಲ. ಸೆಮೆಟಿಕ್ ಧರ್ಮಗಳಾದ ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮಗಳನ್ನು ಜಗತ್ತಿನ ಬೇರೆ ಬೇರೆ ದೇಶಗಳ ಬೇರೆ ಬೇರೆ ಜನಾಂಗಗಳವರು ಅನುಸರಿಸುತ್ತಿದ್ದಾರೆ.

ಆರ್ಯ ಕ್ಷತ್ರಿಯನಾದ ಬುದ್ಧ ಸ್ಥಾಪಿಸಿದ ಧರ್ಮಕ್ಕೆ ಆರ್ಯರೇ ಆದ ಡಾ. ಅಂಬೇಡ್ಕರ್ ಧರ್ಮಾಂತರಗೊಂಡರು. ಇನ್ನು ಮಂಗೋಲ್ ಜನಾಂಗಕ್ಕೆ ಸೇರಿದ ಬಹುಪಾಲು ಚೀನೀಯರು, ಆರ್ಯರಲ್ಲದ ಬರ್ಮೀಯರು, ಥಾಯ್ ಜನರು, ಜಪಾನೀಯರು ಇವರೆಲ್ಲರೂ ಬೌದ್ಧ ಧರ್ಮಾನುಯಾಯಿಗಳು. ಅದು ಉತ್ತರದ ಆರ್ಯ ಜನಾಂಗಕ್ಕೆ ಸೀಮಿತವಾದ ಧರ್ಮವೇನಲ್ಲ. ಈ ದೇಶಗಳ ಬೌದ್ಧರು, ತಮ್ಮನ್ನು ಆರ್ಯರೆಂದು ಕರೆದುಕೊಳ್ಳುವುದನ್ನು ಊಹಿಸಲಾಗುತ್ತದೆಯೆ? ಇನ್ನು ದ್ರಾವಿಡರು ದಕ್ಷಿಣಭಾರತಕ್ಕೆ ಸೀಮಿತರೇನಲ್ಲ. ಕಾರಣ ಮಧ್ಯಭಾರತ, ಉತ್ತರ ಭಾರತದಲ್ಲೂ ದ್ರಾವಿಡ ಭಾಷೆಗಳನ್ನಾಡುವ ಜನರಿದ್ದಾರೆ. ಅಲ್ಲಿರುವವರು ಆರ್ಯರೋ ದ್ರಾವಿಡರೋ ಗೊತ್ತಿಲ್ಲ. ಬ್ರಾಹೂಯೀ, ಕುರುಖ್, ಮಲ್ತೋ ಮೊದಲಾದ ದ್ರಾವಿಡ ಭಾಷೆಗಳು ದಕ್ಷಿಣ ಭಾರತದವಲ್ಲ. ಬ್ರಾಹೂಯೀ ಬಲೂಚಿಸ್ತಾನದ್ದು. ಆದ್ದರಿಂದ ಹಿಂದೂಗಳೆಂದರೆ ಉತ್ತರದವರು ಅಥವಾ ಆರ್ಯರು, ದ್ರಾವಿಡರೆಂದರೆ ದಕ್ಷಿಣದವರು, ಹಿಂದೂಯೇತರರು ಎಂದು ಸ್ಥಾಪಿಸಹೊರಟಿರುವ ಅವರ ವಾದ ಬರೀ ಅಸಹನೆ ಇಲ್ಲವೆ ದ್ವೇಷಮೂಲವಾದದ್ದು ಎಂದು ಹೇಳದೆ ವಿಧಿಯಿಲ್ಲ. ಒಟ್ಟಾರೆ ಧರ್ಮವಾಚಿ ಶಬ್ದವನ್ನೂ ಪ್ರದೇಶ ಇಲ್ಲವೆ ಜನಾಂಗವಾಚಿ ಇಲ್ಲವೆ ಭಾಷಾವಾಚಿ ಶಬ್ದವನ್ನೂ ಸಮೀಕರಿಸಹೊರಟಿರುವ ಅವರದು ತರ್ಕರಹಿತವಾದ ‘ವಾದ’ ಎಂದು ಹೇಳಲು ವಿಷಾದವೆನಿಸುತ್ತದೆ.

**ಆರ್.ಲಕ್ಷ್ಮೀನಾರಾಯಣ,** ಬೆಂಗಳೂರು

### ಅಸಂಬದ್ಧ ಪ್ರಲಾಪ, ಆಂತರ್ಯ ಬಹಿರಂಗ

‘ರಸ್ತೆ, ಚರಂಡಿಯಂತಹ ಸಣ್ಣ ವಿಚಾರಗಳ ಬಗ್ಗೆ ಮಾತನಾಡಬೇಡಿ. ಲವ್ ಜಿಹಾದ್ ಬಗ್ಗೆ ಮಾತನಾಡಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು ಹೇಳಿರುವುದು (ಪ್ರ.ವಾ., ಜ. 5) ಜನವಿರೋಧಿ ನಿಲುವಾಗಿದ್ದು, ಈ ಮೂಲಕ ಬಿಜೆಪಿಯ ಆಂತರ್ಯವನ್ನು ಅವರು ಬಹಿರಂಗಪಡಿಸಿರುವಂತಿದೆ. ಲವ್ ಜಿಹಾದ್ ಸಹಾ ಒಂದು ಸಮಸ್ಯೆ ಆಗಿರಬಹುದು. ಆದರೆ ಅದಕ್ಕಾಗಿ ಜನರ ಮೂಲಭೂತ ಸಮಸ್ಯೆಗಳಾದ ರಸ್ತೆ, ಚರಂಡಿಯಂತಹ ವಿಷಯ ಸಣ್ಣದೆಂದು ಹೇಳುವುದು ಅಸಂಬದ್ಧ ಪ್ರಲಾಪವಾಗುತ್ತದೆ. ಹಾಗಿದ್ದರೆ ನೀರು, ರಸ್ತೆ, ಚರಂಡಿ ಸೌಲಭ್ಯಕ್ಕಾಗಿ ತೆರಿಗೆ ವಸೂಲಿ ಮಾಡುವುದಾದರೂ ಏಕೆ?

ಪ್ರಸ್ತುತ ರಾಜ್ಯ ಸರ್ಕಾರದ ಆಡಳಿತ ವೈಫಲ್ಯ, ವ್ಯಾಪಕ ಭ್ರಷ್ಟಾಚಾರ, ಬೆಲೆಯೇರಿಕೆಯಂತಹ ಕಠೋರ ವಾಸ್ತವಗಳಿಂದ ಜನಸಾಮಾನ್ಯರ ಬದುಕು ಜರ್ಝರಿತವಾಗುತ್ತಿದೆ. ಜನಾಕ್ರೋಶ ವ್ಯಕ್ತವಾಗುವ ಇಂತಹ ಹೊತ್ತಿನಲ್ಲಿ ಜನರ ಮನಸ್ಸನ್ನು ಭಾವನಾತ್ಮಕ ವಿಷಯಗಳತ್ತ ಹೊರಳಿಸುವ ಹುನ್ನಾರದ ದಿಕ್ಸೂಚಿಯಂತೆ ಕಟೀಲ್ ಮಾತನಾಡಿರುವಂತಿದೆ. ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಈ ದಿನಗಳಲ್ಲಿ ಇನ್ನುಮುಂದೆ ಜನರ ಸಮಸ್ಯೆಗಳನ್ನೆಲ್ಲ ಬಿಜೆಪಿಯು ಭೂಗತ ಮಾಡಿ, ಇಂತಹ ಭಾವನಾತ್ಮಕ ವಿಚಾರಗಳಿಂದಲೇ ರಾಜಕೀಯ ಆಟ ಆಡಲಿದೆಯೆಂಬುದರ ಕುರುಹು ಇದಾಗಿದೆ. ಈಗ ಜನ ಪ್ರಜ್ಞಾವಂತರಾಗಬೇಕಷ್ಟೇ.

**ಆರ್.ಎಸ್.ಅಯ್ಯರ್,** ತುಮಕೂರು

### ವಿಜೃಂಭಿಸಲಿ ‘ಪುಸ್ತಕ ಓದು’, ‘ಮಾತುಕತೆ’

ಸಾಹಿತ್ಯ ಸಮ್ಮೇಳನವು ‘ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ’ ಅಲ್ಲ, ‘ನಮ್ಮ ದುಡ್ಡು ಕನ್ನಡಿಗರ ಯಾತ್ರೆ’. ಈಗ ಅನೇಕ ಗೋಷ್ಠಿಗಳನ್ನು ಏರ್ಪಡಿಸಲಾಗಿದೆ. ಇಲ್ಲಿ ಮುಖ್ಯವಾಗಿ ಗಮನಸೆಳೆಯಬೇಕಾದದ್ದು ಕನ್ನಡದಲ್ಲಿ ‘ಮಾತುಕತೆ’ ಮತ್ತು ‘ಪುಸ್ತಕ ಓದು’. ಕನ್ನಡದಲ್ಲಿ ಶಬ್ದಸಂಪತ್ತು ತುಂಬಿ ತುಳುಕುತ್ತದೆ. ಹೀಗಿರುವಾಗ ಅನಗತ್ಯವಾಗಿ ಬೇರೆ ಭಾಷೆಯ ಶಬ್ದಗಳ ಬಳಕೆ ಯಾಕೆ? ನಾವೋ ಸಕಲ ಭಾಷಾ ವಲ್ಲಭರು! ವಲಸಿಗರನ್ನು ಅವರ ಭಾಷೆಯಲ್ಲೇ ನಾವು ಮಾತನಾಡಿಸುವಾಗ, ಅವರಿಗೆ ಕನ್ನಡ ಕಲಿಯುವ ಅವಶ್ಯಕತೆ ಎಲ್ಲಿ? ನಾವು ಏಕೆ ಕನ್ನಡದಲ್ಲೇ ಮಾತುಕತೆ ನಡೆಸಬಾರದು ಎನ್ನುವ ಪ್ರಶ್ನೆಯೊಂದನ್ನು ಮೂಡಿಸುವ ಪ್ರಯತ್ನ ಸಮ್ಮೇಳನದಲ್ಲಿ ನಡೆಯಬೇಕು.

ಇನ್ನು ಪುಸ್ತಕ ಪ್ರಕಟಣೆ ಮತ್ತು ಓದು. ಇಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಪಾತ್ರ ಬಹುಮುಖ್ಯ. ಜನರ ಪುಸ್ತಕ ಓದಿನ ಆಶಯವು ಸರ್ಕಾರದ ಕಿವಿಗೆ ಬೀಳುವಂತೆ ಮಾಡಿದರೆ ಸರ್ಕಾರವು ಗ್ರಂಥಾಲಯಗಳಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ಉದಾರವಾಗಿ ವರ್ತಿಸುತ್ತದೆ, ಗ್ರಂಥಾಲಯಗಳು ಹೊಚ್ಚ ಹೊಸ ಪುಸ್ತಕಗಳಿಂದ ಕಂಗೊಳಿಸುವಂತೆ ಆಗುತ್ತದೆ. ಹಿಂದಿನ ಶತಮಾನದಲ್ಲಿ ಅನಕೃ ಅವರು ಆರಂಭಿಸಿದ ‘ಕನ್ನಡ ಪುಸ್ತಕ ಓದುವ’ ಅಭಿಯಾನ ಅಂದಿನಂತೆ ಇಂದೂ ವಿಜೃಂಭಿಸುತ್ತದೆ.

**ಸತ್ಯಬೋಧ,** ಬೆಂಗಳೂರು


Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

# ಹಿಮಾಲಯ ತಪ್ಪಲಿನ ಜೋಶಿಮಠ ಪಟ್ಟಣಕ್ಕೆ ಕುಸಿತದ ಭೀತಿ



ಜೋಶಿಮಠದಲ್ಲಿನ ಟೆನಿಸ್‌ಕೋರ್ಟ್‌ನ ನೆಲ ಬಿರುಕುಬಿಟ್ಟಿದೆ. ಪಟ್ಟಣದ ಹಲವೆಡೆ ಇಂತಹ ದೃಶ್ಯಗಳು ಸಾಮಾನ್ಯ ಎಂಬಂತಾಗಿದೆ

ಪ್ರಜಾವಾಣಿ ವಾರ್ತೆ

**ಹಿಮಾಲಯದ** ತಪ್ಪಲಿನ ರಾಜ್ಯ ಉತ್ತರಾಖಂಡದ ಜೋಶಿಮಠ ಎಂಬ ಒಂದಿಡೀ ಊರು ಕುಸಿದು ಬೀಳುವ ಭೀತಿ ಎದುರಾಗಿದೆ. ಇಲ್ಲಿನ ಸುಮಾರು 20 ಸಾವಿರ ನಿವಾಸಿಗಳು ಆತಂಕದಿಂದ ನಡುಗುತ್ತಿದ್ದಾರೆ. ಪವಿತ್ರ ಯಾತ್ರಾಸ್ಥಳ ಬದರೀನಾಥದ ಹೆಬ್ಬಾಗಿಲು ಎಂದೇ ಕರೆಸಿಕೊಳ್ಳುವ ಜೋಶಿಮಠ ನಾಮಾವಶೇಷಗೊಳ್ಳಲಿದೆ ಎಂದೇ ಜನರು ಭಾವಿಸಿದ್ದಾರೆ. ಬೆಟ್ಟ ಗುಡ್ಡಗಳಿಂದ ಕೂಡಿದ ಉತ್ತರಾಖಂಡ ರಾಜ್ಯವೇ ಅತ್ಯಂತ ಸೂಕ್ಷ್ಮ ಪ್ರದೇಶ. ಅದರಲ್ಲಿಯೂ ಜೋಶಿಮಠವು ಪಾರಿಸರಿಕವಾಗಿ ಇನ್ನೂ ಸೂಕ್ಷ್ಮ. ಜೋಶಿಮಠದ ಹಲವು ರಸ್ತೆಗಳು ಮತ್ತು 500ಕ್ಕೂ ಹೆಚ್ಚು ಮನೆಗಳಲ್ಲಿ ಬಿರುಕು ಮೂಡಿದೆ.

ಇದಕ್ಕೆ ಕಾರಣವೇನು ಎಂಬುದು ಬಹಳ ಸ್ಪಷ್ಟ. ಸೂಕ್ಷ್ಮವಾದ ಬೆಟ್ಟ ಪ್ರದೇಶಗಳಲ್ಲಿ ಬೇಕಾಬಿಟ್ಟಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಂಡಿರುವುದೇ ಇದಕ್ಕೆ ಕಾರಣ. ಮಣ್ಣಿನ ಅಡಿಯಿಂದ ನೀರು ಜಿನುಗುತ್ತಿದೆ, ಮೇಲ್ಮಣ್ಣು ಸವೆದು ಹೋಗಿದೆ. ಸ್ಥಳೀಯ ತೊರೆಗಳ ಸಹಜ ಹರಿವಿಗೆ ಮನುಷ್ಯ ನಿರ್ಮಿಸಿರುವ ರಚನೆಗಳು ಅಡ್ಡಿಯಾಗಿವೆ. ಹಾಗಾಗಿ, ತೊರೆಗಳು ಆಗಾಗ ದಿಕ್ಕು ಬದಲಿಸುತ್ತಿವೆ. ಧೌಲಿಗಂಗಾ ಮತ್ತು ಅಲಕನಂದಾ ನದಿಗಳ ಸಂಗಮ ಸ್ಥಾನವಾದ ವಿಷ್ಣುಪ್ರಯಾಗದಿಂದ ಆಗ್ನೇಯಕ್ಕಿರುವ ಇಳಿಜಾರಿನಲ್ಲಿ ಈ ಸಣ್ಣ ಪಟ್ಟಣ ಇದೆ.

ಈ ಪಟ್ಟಣದಲ್ಲಿ ಮಣ್ಣು ಕುಸಿಯುವುದು ಇದು ಮೊದಲೇನೂ ಅಲ್ಲ. ಸುಮಾರು 50 ವರ್ಷಗಳ ಹಿಂದೆಯೇ ಇದು ಜನರ ಅರಿವಿಗೆ ಬಂದಿತ್ತು. 1976ರಲ್ಲಿ ಈ ಕುರಿತು ಅಧ್ಯಯನ ನಡೆಸಲು ಮಿಶ್ರಾ ಸಮಿತಿಯನ್ನು ರಾಜ್ಯ ಸರ್ಕಾರವು ನೇಮಿಸಿತ್ತು. 'ಇಲ್ಲಿನ ಮರಗಳನ್ನು ಮಕ್ಕಳ ರೀತಿಯಲ್ಲಿ ಪೊರೆಯಬೇಕು. ಇಲ್ಲಿನ ಬೆಟ್ಟಗಳಲ್ಲಿ ಇರುವ ಶಿಲೆಗಳನ್ನು ಅಗೆತ ಅಥವಾ ಸ್ಫೋಟದ ಮೂಲಕ ತೆಗೆಯಬಾರದು' ಎಂದು ಸಮಿತಿಯು ಆಗಲೇ ಎಚ್ಚರಿಕೆ ನೀಡಿತ್ತು.

ಆದರೆ ಈ ಎಚ್ಚರಿಕೆಯನ್ನು ಸರ್ಕಾರ ಅಥವಾ ಜನರು ಗಂಭೀರವಾಗಿ ಪರಿಗಣಿಸದ ಪರಿಣಾಮ ಈಗ ಗೋಚರವಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಮನೆಗಳಲ್ಲಿ ಬಿರುಕು ಮೂಡುವುದು ಹೆಚ್ಚಾಗಿದೆ. ಮನೆಗಳು ಅಸ್ಥಿರವಾಗಿವೆ. ಜನರು ಊರು ಬಿಟ್ಟು ಹೋಗುತ್ತಿದ್ದಾರೆ. ತುರ್ತಾಗಿ ಏನನ್ನಾದರೂ ಮಾಡಲೇಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ.

2022ರ ಆಗಸ್ಟ್‌ನಲ್ಲಿ ಸರ್ಕಾರವು ವಿವಿಧ ಸಂಸ್ಥೆಗಳ ಪ್ರತಿನಿಧಿಗಳಿರುವ ತಂಡವೊಂದನ್ನು ರಚಿಸಿತ್ತು. ಭೂವೈಜ್ಞಾನಿಕ ಮತ್ತು ಭೂತಾಂತ್ರಿಕ ಸಮೀಕ್ಷೆಯ ಹೊಣೆಯನ್ನು ಈ ಸಮಿತಿಗೆ ವಹಿಸಲಾಗಿತ್ತು. ಕುಸಿತದ ನಿಖರ ಕಾರಣಗಳನ್ನು ಪತ್ತೆ ಮಾಡುವುದು, ಪರಿಹಾರಗಳನ್ನು ಸೂಚಿಸುವುದು ಈ ತಂಡದ ಜವಾಬ್ದಾರಿಯಾಗಿತ್ತು.

ಯೋಜಿತವಲ್ಲದ ಅಭಿವೃದ್ಧಿ ಚಟುವಟಿಕೆಗಳು, ಆಗಾಗ ನಡೆಯುವ ಭೂಕಂಪನಗಳು, ಮಣ್ಣಿನ ಧಾರಣ ಸಾಮರ್ಥ್ಯದ ಅಂದಾಜು ಮಾಡದೇ ನಿರ್ಮಾಣ ಮತ್ತು ಇತರ ಕಾಮಗಾರಿಗಳು ಭೂಕುಸಿತಕ್ಕೆ ಕಾರಣವಾಗಿವೆ ಎಂದು ತಂಡವು ವರದಿಯಲ್ಲಿ ಹೇಳಿತ್ತು.



## ಮಾನವನೇ ಕಾರಣ...

ಉತ್ತರಾಖಂಡದಲ್ಲಿ ಅದರಲ್ಲಿಯೂ ವಿಶೇಷವಾಗಿ ಜೋಶಿಮಠವು ಇರುವ ಚಮೋಲಿ ಜಿಲ್ಲೆಯಲ್ಲಿ ಪ್ರಕೃತಿ ವಿಕೋಪಗಳು ನಿರಂತರವಾಗಿ ನಡೆಯುತ್ತಿವೆ. 2021ರ ಮೇಯಲ್ಲಿ ಚಮೋಲಿ ಜಿಲ್ಲೆಯಲ್ಲಿ ಭೂಕಂಪ ಉಂಟಾಗಿತ್ತು. ಭೂಕಂಪದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 4.3ರಷ್ಟಿತ್ತು. ಭೂಕಂಪನದ ಕೇಂದ್ರವು ಜೋಶಿಮಠದ ಸಮೀಪವೇ ಇತ್ತು.

2021ರ ಫೆಬ್ರುವರಿಯಲ್ಲಿ ತಪೋವನ ವಿಷ್ಣುಗಡ ಜಲವಿದ್ಯುತ್ ಯೋಜನೆಯ ಅಣೆಕಟ್ಟೆಯ ಸಮೀಪ ಸಂಭವಿಸಿದ್ದ ಹಿಮಕುಸಿತದಲ್ಲಿ 204 ಮಂದಿ ನಾಪತ್ತೆಯಾಗಿದ್ದರು. ಅದರಲ್ಲಿ 83 ಮಂದಿಯ ಮೃತದೇಹ ಮತ್ತು 36 ಮಂದಿಯ ದೇಹದ ಭಾಗಗಳು ಸಿಕ್ಕಿದ್ದವು. ಇಂತಹ ದುರಂತಗಳು ಸಾಮಾನ್ಯ ಎಂಬಂತೆ ಇಲ್ಲಿ ಘಟಿಸುತ್ತಿವೆ.

ಈ ಪ್ರದೇಶದಲ್ಲಿ 15,000ಕ್ಕೂ ಹೆಚ್ಚು ಹಿಮಗಲ್ಲುಗಳಿವೆ. ಪ್ರತಿ ದಶಕದಲ್ಲಿ ಇವು 100ರಿಂದ 200 ಅಡಿಯಷ್ಟು ಕೆಳಕ್ಕೆ ಇಳಿಯುತ್ತಿವೆ. ಈ ಹಿಮಗಲ್ಲುಗಳು ಅತ್ಯಂತ ವೇಗವಾಗಿ ಕರಗುತ್ತಿವೆ. ಹೀಗೆ ಕರಗಿದ ಹಿಮಗಲ್ಲುಗಳು ದಿಢೀರ್ ಹಿಮಸರೋವರಗಳನ್ನು ಸೃಷ್ಟಿಸುತ್ತವೆ. ನೀರನ್ನು ಹಿಡಿದಿಟ್ಟುಕೊಳ್ಳಲಾಗದ ಮಣ್ಣು ಬಿರುಕು ಬಿಡುತ್ತದೆ ಮತ್ತು ದಿಢೀರ್ ಪ್ರವಾಹಗಳು ಉಂಟಾಗುತ್ತವೆ. 2021ರಲ್ಲಿ ಧೌಲಿಗಂಗಾ ನದಿಯಲ್ಲಿ ಉಂಟಾದ ಪ್ರವಾಹದಲ್ಲಿ 70ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು.

ಅಲಕನಂದಾ–ಭಾಗೀರಥಿ ನದಿಗೆ ಅಣೆಕಟ್ಟೆ ಕಟ್ಟಲೇಬಾರದು ಎಂದು ಪರಿಣತರ ಸಮಿತಿಯು ಶಿಫಾರಸು ಮಾಡಿತ್ತು. ಹಿಮಗಲ್ಲು ಪ್ರದೇಶದಲ್ಲಿ ಅಣೆಕಟ್ಟೆ ನಿರ್ಮಿಸಬೇಡಿ ಎಂದು ಸುಪ್ರೀಂ ಕೋರ್ಟ್ ಕೂಡ 2014ರಲ್ಲಿ ಹೇಳಿತ್ತು. ಆದರೆ ಸರ್ಕಾರವು ಈ ಸಲಹೆಯನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಅಣೆಕಟ್ಟೆ ನಿರ್ಮಾಣ ಮಾಡಲಾಯಿತು.

### ಶ್ರದ್ಧಾಕೇಂದ್ರ

ಜೋಶಿಮಠವು ಹಿಂದೂಗಳ ಧಾರ್ಮಿಕ ಮತ್ತು ಆಧ್ಯಾತ್ಮಿಕವಾದ ಪ್ರಮುಖ ಕೇಂದ್ರಗಳಲ್ಲಿ ಒಂದು. ಇದು ಸಮುದ್ರ ಮಟ್ಟದಿಂದ 6,150 ಅಡಿ ಎತ್ತರದಲ್ಲಿ ಇರುವ ಪ್ರದೇಶ. ಪವಿತ್ರ ಕ್ಷೇತ್ರಗಳಾದ ಬದರೀನಾಥ ಮತ್ತು ಹೇಮಕಂಡಕ್ಕೆ ಜೋಶಿಮಠದ ಮೂಲಕವೇ ಹೋಗಬೇಕು. ಇಲ್ಲಿರುವ ಔಲಿ ಕಣಿವೆಯು ವಿವಿಧ ಹೂಗಿಡಗಳಿಂದ ಕೂಡಿದ ನಯನ ಮನೋಹರ ಸ್ಥಳ. ಆದಿ ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಪೀಠಗಳಲ್ಲಿ ಒಂದು ಇಲ್ಲಿಯೇ ಇದೆ.


ಯಮುನೋತ್ರಿ, ಗಂಗೋತ್ರಿ, ಕೇದಾರನಾಥ ಮತ್ತು ಬದರೀನಾಥವನ್ನು ಸಂಪರ್ಕಿಸುವ 900 ಕಿ.ಮೀ. ಉದ್ದದ ಹೆದ್ದಾರಿ–ಚಾರ್ ಧಾಮ್ ಹೆದ್ದಾರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ₹12,000 ಕೋಟಿ ವೆಚ್ಚದ ಯೋಜನೆ ಇದು. ನಿರ್ಮಾಣ ಕಾಮಗಾರಿಗಳನ್ನು ನಡೆಸಲೇಬಾರದು ಎಂದು ಪರಿಣತರು ಹಲವು ಬಾರಿ ಹೇಳಿದ್ದಾರೆ. ಆದರೆ, ಉತ್ತರಾಖಂಡದಲ್ಲಿ ಉಂಟಾದ ಪ್ರವಾಹಕ್ಕೆ ಈ ಯೋಜನೆ ಕಾರಣ ಅಲ್ಲ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು 2021ರಲ್ಲಿ ರಾಜ್ಯಸಭೆಗೆ ಲಿಖಿತ ಉತ್ತರ ನೀಡಿದ್ದರು.



2021ರ ಫೆಬ್ರುವರಿಯ ದಿಢೀರ್ ಪ್ರವಾಹದಲ್ಲಿ ತಪೋವನ ಬ್ಯಾರೇಜ್ ಕೊಚ್ಚಿಹೋಗಿತ್ತು –ಪಿಟಿಐ ಚಿತ್ರ

## ತಪೋವನ ಸುರಂಗದತ್ತ ಸ್ಥಳೀಯರ ಬೊಟ್ಟು...

ಆಧಾರ: ಪಿಟಿಐ, 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ರಾಕ್ ಮೆಕಾನಿಕ್ಸ್'ನ ಅಧ್ಯಯನ ವರದಿ, ನಕ್ಷೆ ಕೃಪೆ: ಗೂಗಲ್ ಅರ್ಥ್, ಪ್ರಜಾವಾಣಿ ಗ್ರಾಫಿಕ್ಸ್: ಶಶಿಧರ ಹಳೇಮನಿ





'**ಜೋಶಿಮಠವು** ಕುಸಿಯುತ್ತಿರುವುದರ ಹಿಂದಿನ ಬಹುಮುಖ್ಯ ಕಾರಣವನ್ನು ಸರ್ಕಾರ ಕಡೆಗಣಿಸುತ್ತಿದೆ ಅಥವಾ ಮರೆಮಾಚುತ್ತಿದೆ. ತಪೋವನ ವಿಷ್ಣುಗಡ ಜಲವಿದ್ಯುತ್ ಯೋಜನೆಯ ಸುರಂಗವು ಜೋಶಿಮಠದ ಅಡಿಯಲ್ಲಿಯೇ ಹಾದು ಹೋಗುತ್ತದೆ. ಹೀಗಾಗಿ ಜೋಶಿಮಠದ ತಳಭಾಗವು ಸಡಿಲ ಮತ್ತು ಅಸ್ಥಿರವಾಗುತ್ತಿದೆ. ಆದರೆ ಸರ್ಕಾರವು ಇದನ್ನು ಕಡೆಗಣಿಸುತ್ತಿದೆ' ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಜೋಶಿಮಠದಿಂದ ಆಗ್ನೇಯ ದಿಕ್ಕಿನಲ್ಲಿರುವ ತಪೋವನದ ಕಣಿವೆಯಲ್ಲಿ ಧೌಲಿಗಂಗಾ ನದಿಗೆ ಅಡ್ಡವಾಗಿ ಅಣೆಕಟ್ಟೆ ನಿರ್ಮಿಸಲಾಗುತ್ತಿದೆ. ಇಲ್ಲಿ ಸಂಗ್ರಹವಾದ ನೀರನ್ನು ಸುರಂಗದ ಮೂಲಕ, ಜೋಶಿಮಠದ ನೈರುತ್ಯ ದಿಕ್ಕಿನಲ್ಲಿರುವ ಅಲಕನಂದಾ ನದಿಗೆ ಹರಿಸಲಾಗುತ್ತದೆ. ತಪೋವನ ವಿಷ್ಣುಗಡ ಜಲವಿದ್ಯುತ್ ಯೋಜನೆಯ ಸುರಂಗವು ಜೋಶಿಮಠ ಇರುವ ಪರ್ವತದಲ್ಲಿ 1,782 ಮೀಟರ್ ಎತ್ತರದಿಂದ, 1,600 ಮೀಟರ್ ಎತ್ತರದವರೆಗೆ ಇಳಿಜಾರಿನ ಸ್ವರೂಪದಲ್ಲಿ ಸಾಗುತ್ತದೆ. ಸುರಂಗದ ನಿರ್ಗಮನ ದ್ವಾರದಲ್ಲಿರುವ ಟರ್ಬೈನ್‌ಗಳ ಮೂಲಕ ನೀರನ್ನು ಹಾಯಿಸಿ ಜಲವಿದ್ಯುತ್ ಉತ್ಪಾದಿಸಲಾಗುತ್ತದೆ.

ಸಮುದ್ರಮಟ್ಟದಿಂದ ಲೆಕ್ಕ ಹಾಕಿದರೆ ತಪೋವನ ಅಣೆಕಟ್ಟು, ಸುರಂಗ ಮತ್ತು ಸುರಂಗದ ನಿರ್ಗಮನ ದ್ವಾರವು ಜೋಶಿಮಠಕ್ಕಿಂತ ಕೆಳಭಾಗದಲ್ಲಿ ಬರುತ್ತದೆ. ಜೋಶಿಮಠ ಮತ್ತು ಔಲಿ ಪ್ರದೇಶಗಳನ್ನು ಹೊತ್ತಿರುವ ಪರ್ವತದ ಮಧ್ಯಭಾಗದಲ್ಲಿ ಈ ಸುರಂಗ ಹಾದು ಹೋಗುತ್ತದೆ.

ಸುರಂಗವು ಪರ್ವತದಲ್ಲಿನ ಹಲವು ಅಂತರ್ಜಲಮೂಲಗಳಿಗೆ ಧಕ್ಕೆಮಾಡಿದೆ. ಹೀಗಾಗಿ ಅಂತರ್ಜಲವು ಕಡಿಮೆಯಾಗಿದೆ. ಅಂತಹ ಪ್ರದೇಶವು ಟೊಳ್ಳಾಗಿದ್ದು, ಇಡೀ ಪರ್ವತವೇ ಅಸ್ಥಿರವಾಗಿದೆ ಎಂದು ಜೋಶಿಮಠ ನಿವಾಸಿಗಳು ಆರೋಪಿಸುತ್ತಾರೆ. ನಿವಾಸಿಗಳ ಆಹ್ವಾನದ ಮೇರೆಗೆ ಇಲ್ಲಿ ಅಧ್ಯಯನ ನಡೆಸಿದ ವಿಜ್ಞಾನಿಗಳು ಈ ವಿಷಯದ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ವಿಸ್ತೃತ ಅಧ್ಯಯನದ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ.

### ಅವಶೇಷದ ಮೇಲಿನ ಪಟ್ಟಣ




ಜೋಶಿಮಠ ಇರುವ ಪ್ರದೇಶವು ಹಲವು ದಶಕಗಳ ಹಿಂದೆ ಈ ಸ್ವರೂಪದಲ್ಲಿ ಇರಲೇ ಇಲ್ಲ. ಬದಲಿಗೆ ಕಲ್ಲುಬಂಡೆಗಳಿಂದ ಕೂಡಿದ ಪ್ರದೇಶವಾಗಿತ್ತು. ಜೋಶಿಮಠ ಇರುವ ಪ್ರದೇಶಕ್ಕಿಂತ ಎತ್ತರದಲ್ಲಿದ್ದ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿತ್ತು. ಭೂಕುಸಿತದಲ್ಲಿ ಇಳಿಜಾರಿಗೆ ಸರಿದ ಸಡಿಲ ಕಲ್ಲುಗಳು, ಈಗ ಜೋಶಿಮಠ ಇರುವ ಪ್ರದೇಶದ ಮೇಲೆ ಸಂಗ್ರಹವಾಗಿತ್ತು. ಅಂತಹ ಪ್ರದೇಶದ ಮೇಲೆಯೇ ಜೋಶಿಮಠ ಪಟ್ಟಣವು ನಿರ್ಮಾಣವಾಗಿದೆ.

ಪರ್ವತದ ಉತ್ತರದ ಇಳಿಜಾರಿನಲ್ಲಿ ಜೋಶಿಮಠ ಇದೆ. ಜೋಶಿಮಠ ಪಟ್ಟಣ ಪ್ರದೇಶದ ಅಡಿಯಲ್ಲಿ ಸಮುದ್ರಮಟ್ಟದಿಂದ 1,785 ಮೀಟರ್ ಎತ್ತರದಿಂದ 1,850 ಮೀಟರ್ ಎತ್ತರದವರೆಗೆ ಇಂತಹ ಸಡಿಲ ಅವಶೇಷ ಇದೆ. ಈ ಸಡಿಲ ಮಣ್ಣಿನಿಂದ ಕೇವಲ 25 ಮೀಟರ್ ಎತ್ತರದಲ್ಲಿ ಜೋಶಿಮಠ ಪಟ್ಟಣ ಆರಂಭವಾಗುತ್ತದೆ ಎಂಬುದನ್ನು 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ರಾಕ್ ಮೆಕಾನಿಕ್ಸ್' ಸಿದ್ಧಪಡಿಸಿರುವ ಅಧ್ಯಯನ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಜೋಶಿಮಠಕ್ಕಿಂತಲೂ ಬಹಳ ಎತ್ತರದಲ್ಲಿರುವ ಔಲಿ ಪ್ರದೇಶದಿಂದ ಧೌಲಿಗಂಗಾ ನದಿ ಕಣಿವೆಗೆ ಒಂಬತ್ತು ತೊರೆಗಳು ಹರಿಯುತ್ತವೆ. ಜೋಶಿಮಠದ ಬಳಿ ಈ ತೊರೆಗಳು ನೆಲದಡಿಯಲ್ಲಿ ಹರಿಯುತ್ತವೆ. ಜತೆಗೆ ಜೋಶಿಮಠದ ಕೊಳಚೆ ನೀರು ಸಹ ಈ ತೊರೆಗಳ ಜತೆಯಲ್ಲಿಯೇ ಧೌಲಿಗಂಗಾ ನದಿ ಸೇರುತ್ತದೆ. ಇವುಗಳ ಕಾರಣದಿಂದ ಮಣ್ಣಿನ ಸವಕಳಿಯಾಗಿದೆ. ಹೀಗಾಗಿ ಜೋಶಿಮಠ ಪಟ್ಟಣದ ಅಡಿಯಲ್ಲಿರುವ ಮಣ್ಣು ಸಡಿಲ ಮತ್ತು ಅಸ್ಥಿರವಾಗಿದೆ. ಹೀಗಾಗಿ ಕುಸಿತ ಸಂಭವಿಸುತ್ತಿದೆ.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'**ರಿಷಬ್ ಪಂತ್** ಅವರ ಕಾರು ಅಪಘಾತವಾದಾಗ, ಸ್ಥಳೀಯ ಮುಸ್ಲಿಮರು ಪಂತ್ ಅವರಿಗೆ ಸಹಾಯ ಮಾಡಲಿಲ್ಲ. ಬದಲಿಗೆ ಪಂತ್ ಅವರ ಹಣವನ್ನು ಲೂಟಿ ಮಾಡಿದರು. ನಾವು ರೋಹಿಂಗ್ಯಾ ಮುಸ್ಲಿಮರೆಂಬ ವಿಷಹಾವುಗಳ ಜತೆಗೆ ಬದುಕುತ್ತಿದ್ದೇವೆ. ಈ ಬಗ್ಗೆ ನಾವು ಎಚ್ಚರದಿಂದ ಇರಬೇಕು' ಎಂಬ ಸಂದೇಶಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಮುಸ್ಲಿಮರನ್ನು ದೇಶದಿಂದ ಹೊರಗೋಡಿಸಬೇಕು ಎಂದೂ ಕೆಲವರು ಕರೆ ನೀಡಿದ್ದಾರೆ. ಆದರೆ ಈ ಸಂದೇಶಗಳಲ್ಲಿ ಇರುವ ಮಾಹಿತಿ ಸಂಪೂರ್ಣ ಸುಳ್ಳು.

**ಈ ಸಂದೇಶಗಳ** ಬಗ್ಗೆ ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ರಿಷಬ್ ಪಂತ್ ಅವರ ಕಾರು ಅಪಘಾತವಾದಾಗ ಅಲ್ಲಿದ್ದ ಸ್ಥಳೀಯರು ಮತ್ತು ಉತ್ತರಾಖಂಡ ರಾಜ್ಯ ರಸ್ತೆ ಸಾರಿಗೆ ಬಸ್‌ನ ಸಿಬ್ಬಂದಿ ಅವರಿಗೆ ನೆರವಾಗಿದ್ದಾರೆ. ಪಂತ್ ಅವರ ಬ್ಯಾಗ್‌ನಲ್ಲಿದ್ದ ₹4,000 ನಗದು, ಚಿನ್ನದ ಸರ ಮತ್ತು ಪ್ಲಾಟಿನಂನ ಬ್ರೇಸ್‌ಲೆಟ್ ಅನ್ನು ಅವರ ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ಅವರ ಬ್ಯಾಗ್‌ನಲ್ಲಿದ್ದ ಹಣವನ್ನು ಯಾರೂ ಲೂಟಿ ಮಾಡಿಲ್ಲ' ಎಂದು ಹರಿದ್ವಾರ ಪೊಲೀಸ್ ವರಿಷ್ಠಾಧಿಕಾರಿ ಮಾಹಿತಿ ನೀಡಿದ್ದಾರೆ. ಆದರೆ, ಈ ಮಾಹಿತಿಯನ್ನು ತಿರುಚಿ, ಮುಸ್ಲಿಮರು ಲೂಟಿ ಮಾಡಿದ್ದಾರೆ ಎಂದು ಸುಳ್ಳು ಸುದ್ದಿ ಹರಡಲಾಗಿದೆ' ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜನವರಿ 6, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಪೂರ್ಣಿಮಾ ಗಂ. 28-38 ನಕ್ಷತ್ರ: ಆರ್ದ್ರಾ ಗಂ. 24-14, ಯೋಗ: ಬ್ರಹ್ಮ ಗಂ. 08-10 ಕರಣ: ವಿಷ್ಟಿ ಗಂ. 15-25, ಧನುರ್ ಮಾಸದ 21 ನೇ ದಿನ. ರಾಹುಕಾಲ : ಬೆಳಿಗ್ಗೆ 10-30 –12-00 ಸೂರ್ಯೋದಯ : 06-59 ಸೂರ್ಯಾಸ್ತ : 06-14 ಮುಸ್ಲಿಂ ದಿನಾಂಕ : 13 ಜುಮಾದುಸ್ಸಾನಿ ದಿನ ವಿಶೇಷ : ಪೌಷಿ ಪೂರ್ಣಿಮಾ, ಪುಷ್ಯಾಭಿಷೇಕ ಯಾತ್ರೆ, ಆರುದ್ರ ದರ್ಶನಮ್ (ಪೂರ್ವಾರುಣೋದಯ) (ದ.ಭಾರತ), ಎಪಿಫನಿ (ಕ್ರಿಶ್ಚಿಯನ್) ಅದೃಷ್ಟ ಸಂಖ್ಯೆ : 6, 11

**ಮೇಷ:** ಹಲವಾರು ಅವಕಾಶಗಳು ನಿಮಗೆದುರಾಗಿದ್ದರೂ ಗೊಂದಲಗೊಳ್ಳದೆ ಸರಿಯಾದುದನ್ನೆ ಆಯ್ಕೆ ಮಾಡಿಕೊಳ್ಳುವಿರಿ. ದೂರದ ಊರಿನಲ್ಲಿ ವೃತ್ತಿ ಜೀವನ ಆರಂಭಗೊಳ್ಳುವುದು. ತಂದೆ ತಾಯಿಯರಿಗೆ ಸಂತಸ ಮೂಡುತ್ತದೆ.

**ವೃಷಭ:** ಕೆಲಸಗಳೆಲ್ಲ ತಾನಾಗಿಯೇ ಪೂರ್ಣಗೊಳ್ಳುವುದು. ಕಚೇರಿ ಯಲ್ಲಿ ನಲ್ಲಿ ಯಾರೊಂದಿಗೂ ಸಲಿಗೆ ಬೆಳೆಸದೆ ಬಿಗುವಾಗಿ ನಡೆದುಕೊಳ್ಳು ವುದೇ ಸೂಕ್ತ. ಪ್ರೀತಿಪಾತ್ರರೊಂದಿಗೆ ಮನಬಿಚ್ಚಿ ಮಾತನಾಡುವ ಇಚ್ಛೆ ಪೂರ್ಣಗೊಳ್ಳಲಿದೆ.

**ಮಿಥುನ:** ಈ ದಿನ ಮೊದಲ ಗಮನ ಸಾಂಸಾರಿಕ ಜೀವನದ ಬಗ್ಗೆ ಇರಲಿ. ಮುಖ್ಯವಾದ, ಮಹತ್ವದ್ದೆನಿಸಿದ ಕೆಲಸಗಳ ಬಗ್ಗೆ ದೀರ್ಘ ಸಮಾಲೋಚನೆ ನಡೆಯುವುದು. ವಿದ್ಯಾಭ್ಯಾಸದಲ್ಲಿನ ಪ್ರಗತಿ ಕಂಡು ಕಂಡುಬರುವುದು.

**ಕರ್ಕಾಟಕ:** ಮನಸ್ಸಿನ ದುಗುಡ ನಿವಾರಣೆಗೆ ತಾಳ್ಮೆಯು ಅತಿಮುಖ್ಯ. ಅನವಶ್ಯಕವಾದ ವಿವಾದಗಳಿಂದ ದೂರ ಉಳಿದು ಕೆಲಸಗಳನ್ನು ತ್ವರಿತವಾಗಿ ಪೂರ್ತಿ ಮಾಡುವಿರಿ. ಆರೋಗ್ಯಕ್ಕಾಗಿ ಯೋಗಾಭ್ಯಾಸವನ್ನು ರೂಢಿಸಿಕೊಳ್ಳಿರಿ.

**ಸಿಂಹ:** ಸಾಧಕರ ಉಪನ್ಯಾಸವು ನಿಮ್ಮ ಮನಸ್ಸಿನ ಮೇಲೆ ಗಾಢ ಪರಿಣಾಮ ಉಂಟುಮಾಡಲಿದೆ. ನಿಮ್ಮ ಹೊಸ ರೀತಿಯ ಚಿಂತನೆಗಳು ಫಲಕಾರಿಯಾಗಲು ಸಮಯ ಹಿಡಿದರೂ ಫಲ ನಿಶ್ಚಿತ ಎಂಬುದು ನಿಮಗೆ ಮನದಟ್ಟಾಗಲಿದೆ.

**ಕನ್ಯಾ:** ಬರಬೇಕಾದ ಹಣ ಪಡೆಯಲು ಅಧಿಕಾರಿಗಳ ಹಿಂದೆ ಸುತ್ತುವಿಕೆ ಕೊನೆಯಾಗಲಿದೆ. ಹೊಸ ಗೆಳೆಯರ ಪರಿಚಯದಿಂದ ನಿಮ್ಮ ಮುಂದಿನ ಹೂಡಿಕೆಗಳಿಗೆ ಲಾಭ. ಕೃಷಿಕರಿಗೆ ಕೆಲಸದಲ್ಲಿ ತೊಡಕುಗಳು ಉಂಟಾಗಬಹುದು.

**ತುಲಾ:** ಸಮಾಜ ಸೇವೆಯಲ್ಲಿ ನಿಮ್ಮೊಂದಿಗೆ ಹಲವರು ಕೈ ಸೇರಿಸುವುದರಿಂದ ಜವಾಬ್ದಾರಿ ಕಡಿಮೆಯಾಗಲಿದೆ. ನಿಮ್ಮ ಉಪ ಆದಾಯದಿಂದ ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ. ನಿಮ್ಮಲ್ಲಿರುವ ಜ್ಞಾನವನ್ನು ಹಂಚಿಕೊಳ್ಳಿ.

**ವೃಶ್ಚಿಕ:** ರಾಜಕೀಯ ವ್ಯಕ್ತಿಗಳು ನಿಮ್ಮ ವಿಚಾರಗಳನ್ನು ವಿವಾದಕ್ಕೊಳಗಾಗದಂತೆ ಅರ್ಥ ಮಾಡಿಸುವಲ್ಲಿ ಯಶಸ್ವಿಯಾಗುವಿರಿ. ನಿಮ್ಮ ಒಳ್ಳೆಯತನ ದುರುಪಯೋಗವಾಗದಂತೆ ನೋಡಿಕೊಳ್ಳಿ. ಆಫೀಸ್‌ನಲ್ಲಿ ನೆಮ್ಮದಿ ವಾತಾವರಣ.

**ಧನು:** ಈ ದಿನದ ವ್ಯಕ್ತಿಯೊಬ್ಬರ ಪರಿಚಯ ಜೀವನ ಶೈಲಿಯನ್ನೇ ಬದಲಿಸಲಿದೆ. ಸಾಹಿತ್ಯಾತ್ಮಕವಾದ ನಿಮ್ಮ ಬಹುದಿನದ ಕನಸು ನನಸಾಗುವುದು. ಮೇಲಧಿಕಾರಿಗಳಲ್ಲಿ ಯಾವುದನ್ನೂ ಮುಚ್ಚಿಡಬೇಕಾದ ಅವಶ್ಯಕತೆ ಇರುವುದಿಲ್ಲ.

**ಮಕರ:** ಸದ್ಯದ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದೇ ಉತ್ತಮ ಎಂಬ ನಿಮ್ಮ ಭಾವನೆ ಸರಿಯಾಗಿದೆ. ನಿಮ್ಮ ಗೌರವ ಪ್ರತಿಷ್ಠೆ ಹೆಚ್ಚಲು ಇನ್ನೂ ಸಮಯ ಬೇಕಿದೆ. ಆದರೆ ನಿಮ್ಮ ಸಾಧನೆಗೆ ಬೇಕಾದ ಪರಿಶ್ರಮವನ್ನು ಹೆಚ್ಚಿಸಿಕೊಳ್ಳಿರಿ.

**ಕುಂಭ:** ನಿಮಗೀಗ ಸಿಕ್ಕಿರುವ ಕೆಲಸದಲ್ಲೇ ಮುಂದುವರೆಯುವುದರಿಂದ ಉತ್ತಮ ಅವಕಾಶಗಳನ್ನು ಪಡೆಯುವಿರಿ. ಮಗನ ಸಹಾಯಕ್ಕೆ ನಿಲ್ಲಬೇಕಾಗುವುದು. ಇಂದು ಮನಸ್ಸನ್ನು ಜಾಗೃತವಾಗಿಟ್ಟುಕೊಳ್ಳುವುದು ಕಷ್ಟವೆನಿಸಲಿದೆ.

**ಮೀನ:** ಸಂಬಂಧಗಳಿಗೆ ಬೆಲೆ ಕೊಡುವ ನಿಮಗೆ ಸಂಬಂಧಿಕರಿಂದ ಉಂಟಾದ ನೋವು ಮರೆಯಲಾಗದಂತೆ ಆಗುವುದು. ನಿಮ್ಮ ವ್ಯಾಪಾರ ವ್ಯವಹಾರಗಳಿಗೆ ಹೊಸ ತಿರುವು ಮೂಡುವುದು. ಮನೆಯವರೊಂದಿಗೆ ಸಿಡುಕುತನ ಬೇಡ.

## ಬೆರಗಿನ ಬೆಳಕು

ಗುರುರಾಜ ಕರಜಗಿ

### ಅಖಂಡಚೇತನದ ಕುಣಿತ

ಮನಸು ಬೆಳೆಯಲಿ ಭುಜಿಸಿ ನೂರು ನೂರನುಭವವ |
ಹೊನಲು ನೂರೀ ಬಾಳ ಕಡಲನುಬ್ಬಿಸಲಿ ||
ತನುಬಂಧ ಕಳಚಿ, ಜೀವವಖಂಡಚೇತನದ |
ಕುಣಿತದಲಿ ಕೂಡಿರಲಿ - ಮಂಕುತಿಮ್ಮ || 792 ||

**ಪದ-ಅರ್ಥ:** ಭುಜಿಸಿ = ಉಂಡು, ನೂರನುಭವವ = ನೂರು + ಅನುಭವವ, ಹೊನಲು = ಹೊಳೆ, ನೂರೀ = ನೂರು + ಈ, ಕಡಲನುಬ್ಬಿಸಲಿ = ಕಡಲನು + ಉಬ್ಬಿಸಲಿ(ಬೆಳೆಸಲಿ), ತನುಬಂಧ = ದೇಹದ ವಿಪರೀತ ಅಭಿಮಾನ, ಜೀವವಖಂಡಚೇತನದ = ಜೀವ + ಅಖಂಡ(ಸಮಗ್ರವಾದ) + ಚೇತನದ.

ವಾಚ್ಯಾರ್ಥ: ನೂರಾರು ಅನುಭವಗಳನ್ನು ಪಡೆದು ಮನಸ್ಸು ಬೆಳೆಯಲಿ, ಅವು ನೂರು ನದಿಗಳಂತೆ ಬಂದು ಸೇರಿ ಬದುಕಿನ ಕಡಲನ್ನು ಬೆಳೆಸಲಿ. ದೇಹಭಾವ ಕರಗಿ, ಜೀವ ಅಖಂಡ ಚೇತನವೆಂಬ ಪರವಸ್ತುವಿನ ಕುಣಿತದಲಿ ಕೂಡಿ ಹೋಗಲಿ.

**ವಿವರಣೆ:** ಬಾಳುವುದು ಎಂದರೆ ಬೆಳೆಯುವುದು. ಅದು ಸಹಜ. ಮನುಷ್ಯ ಏನನ್ನೂ ಮಾಡದೆ ಹೋದರೂ ಬೆಳೆಯುತ್ತಾನೆ. ಆದರೆ ಬೆಳವಣಿಗೆ ಸಮರ್ಪಕವಾಗಬೇಕಾದರೆ ಅದಕ್ಕೆ ಸರಿಯಾದ ಸಂಸ್ಕಾರ ದೊರೆಯಬೇಕು. ಸಂಸ್ಕಾರ ಎಂದರೇನು? ಅದೊಂದು ಅನುಭವ. ಅದಕ್ಕೆ ಮನಸ್ಸು ಪಕ್ವಾಗಬೇಕು. ಹುಟ್ಟಿದಾಗಿನಿಂದ ಸಾಯುವವರೆಗೆ ದೇಹ, ಮನಸ್ಸುಗಳು ನೂರಾರು ಅನುಭವಗಳನ್ನು ಪಡೆಯುತ್ತವೆ. ಪ್ರತಿಯೊಂದು ಅನುಭವ ಜೀವಕ್ಕೊಂದು ಪ್ರೇರಣೆ ಕೊಡುತ್ತದೆ. ಸಾಮಾನ್ಯರನ್ನು ಕಷ್ಟದ ಅನುಭವ ನಿರಾಸೆಯ ಕೂಪಕ್ಕೆ ತಳ್ಳಿದರೆ, ಅದು ಮಹಾತ್ಮರನ್ನು ಮತ್ತಷ್ಟು ಪರಿಪಕ್ವರನ್ನಾಗಿ ಮಾಡುತ್ತದೆ. ಯಾಕೆಂದರೆ ದೇಹಾಭಿಮಾನ ಅವರಲ್ಲಿ ತುಂಬ ಕಡಿಮೆ. ಅದಕ್ಕೇ ನೆಮ್ಮದಿ. ದೇಹದ ಅಭಿಮಾನ ಹೆಚ್ಚಾದಾಗ ದು:ಖದ ಅನುಭವ ದೊಡ್ಡ ಪೆಟ್ಟು ಕೊಡುತ್ತದೆ.

ಹೀಗೆ ಜೀವನ, ಬದುಕಿನ ವಿವಿಧ ಹಂತಗಳಲ್ಲಿ ಅನುಭವಗಳನ್ನು ಪಡೆಯುತ್ತ ಕೊನೆಗೆ ದಿವ್ಯಾನುಭವದ ಮಂದಿರವನ್ನು ಪ್ರವೇಶಿಸುತ್ತದೆ. ಅಲ್ಲಿ ದೇಹ, ಜಗತ್ತು ಎಂಬ ಮಾಯೆ ಮರೆಯಾಗುತ್ತ ಅದರ ಹಿಂದಿರುವ ಪರವಸ್ತುವಿನ ಅನಂತತೆ ಕಾಣುತ್ತದೆ. ಆ ಮೂಲವಸ್ತುವಿನಲ್ಲಿ ತಾನೂ ಒಂದಾಗಿ ಕುಣಿಯುವ ವಿಶೇಷ ಅನುಭವವನ್ನು ಜೀವ ಪಡೆಯುತ್ತದೆ. ತನ್ನನ್ನೇ ತಾನು ಮರೆತುಬಿಡುತ್ತದೆ. ಅದನ್ನು ಮಡಿವಾಳ ಮಾಚಿದೇವರು ಹೇಳುವ ಪರಿ ಅಪೂರ್ವವಾದದ್ದು. ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ, ಇಂತೀ ಪಂಚನಷ್ಟದೊಳಗೆ ನಾ ನಷ್ಟವಾದೆನು. ಆ ನಷ್ಟದೊಳಗೆ ನೀ ನಷ್ಟವಾದೆ, ಕಲಿದೇವರ ದೇವಾ ಎಂಬು ನುಡಿ 'ನಿ:ಶಬ್ದಂ ಬ್ರಹ್ಮ ಉಚ್ಯತೇ' ಎನ್ನುತ್ತಿದ್ದಿತು.

ಎಲ್ಲ ಭಾವಗಳು ನಷ್ಟವಾದಾಗ, ನಾನು ಎನ್ನುವ ದೇಹಭಾವ ಅಡಗಿದಾಗ ಬಂದ ನೋವೆಲ್ಲ ಪಾವಕವಾಗುತ್ತದೆ. ಆ ಮಾತನ್ನೇ ಈ ಕಗ್ಗ ಹೇಳುತ್ತದೆ. ಜೀವ ಅನೇಕ ಅನುಭವಗಳನ್ನು ಪಡೆಯಲಿ, ಅದರ ಮೂಲಕ ಮನಸ್ಸು ಹದವಾಗಿ ಬೆಳೆಯಲಿ. ಅನುಭವಗಳ ಪೂರ ಬದುಕಿನ ಕಡಲನ್ನು ವಿಸ್ತರಿಸಲಿ. ಹಾಗೆ ವಿಸ್ತಾರವಾಗುತ್ತ ಹೋದಂತೆ ವಿಪರೀತವಾದ ದೇಹಾಭಿಮಾನ ಕಳಚುತ್ತ, ಎಲ್ಲಕ್ಕೂ ಮೂಲವಸ್ತುವಾದ ಅಖಂಡ ಚೇತನದ ಕುಣಿತದಲ್ಲಿ ಮೈಮರೆತು ಸೇರಿಕೊಂಡು, ಆನಂದಿಯಾಗುತ್ತದೆ.


## ಪದಬಂಧ 5191 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಬಾಣಗಳನ್ನಿಡುವ ಕೋಶ (4)
3.ಮರದಲ್ಲಿಜೇನನ್ನು ಅರಸುತ್ತಿರುವ ತುಂಬಿ (4)
5.ಜೂಜಿನಲ್ಲಿ ಒಡ್ಡುವ ಪಣ (3)
7.ಮಂದಿರದಲ್ಲಿರುವ ಜನ (2)
8.ಗರತಿಗೆ ಒದಗಿರುವ ಸ್ಥಿತಿ! (2)
11.ಬೆಸವಲ್ಲದ ಸಂಖ್ಯೆ! (2)
13.ಪಕ್ಷದ ನಾಲ್ಕನೆಯ ತಿಥಿ (2)
14.ಬಿಡುಗಡೆ ಹೊಂದಿದವನಿಂದಾದ ಬಿಡಿ ಪದ್ಯ! (3)
16.ರಾಜ್ಯವನ್ನಾಳುವ ವ್ಯವಸ್ಥೆ (4)
17.ಕೊಳ್ಳೆ ಹೊಡೆಯುವಾತ (4)

**ಮೇಲಿಂದ ಕೆಳಕ್ಕೆ**

1.ಏನೂ ಮುಚ್ಚಿಟ್ಟುಕೊಳ್ಳದೆ ಪ್ರಕಟಿಸುವುದು (4)
2.ಕೆರಳಿದಾತ ತೋರಿಸುತ್ತಿರುವ ಮೆಟ್ಟು (2)
3.ತೂಕದ ಒಂದು ಪ್ರಮಾಣ (2)
4.ಸಲಿಕೆಯ ಚೀಟಿ (3)
6.ಪಟದಲ್ಲಿಯೇ ಬದಲಾವಣೆ! (3)
7.ನಿಧಾನವಾಗಿಯೇ ಮೆಲುನಗೆ ಮೂಡಿದೆಯಲ್ಲಾ! (4)
9.ತಿಮ್ಮಪ್ಪನ ನೆಲೆನಾಡು (4)
10.ಯುಕ್ತ ಕೆಲಸಕ್ಕಾಗಿಯೇ ನಿಯೋಗಿಸಲ್ಪಟ್ಟವನು! (3)
12.ಸಂಪ್ರದಾಯವನ್ನು ಆಚರಿಸುವವನು (4)
13.ಚಚ್ಚೌಕ ಇಲ್ಲಿ ಕಾಣುತ್ತಿದೆ (3)
14.ಮುಕುರ ನೋಡಿ ಧರಿಸಿರುವ ಕಿವಿ ಆಭರಣ (2)
15.ಕರುನಾಡಲ್ಲಿ ದೊರೆತಿರುವ ಸಾಲ (2)



### 5190ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಐಹಿಕ 3.ಮಶಕ 5.ರವಿಕಿರಣ 6.ತಡ 8.ನಾಯಿ 9.ನಾರಿ 10.ಕದ 14.ನರಭಕ್ಷಕ 15.ಕಡಲು 16.ವಿನಾಶ.

**ಮೇಲಿಂದ ಕೆಳಕ್ಕೆ:** 1.ಐರಾವತ 2.ಕರಡಿ 3.ಮಣಕ 4.ಕಸುಗಾಯಿ 7.ಡಬರಿ 8.ನಾಸ್ತಿಕ 9.ನಾಗರಿಕ 11.ದಶಮಾಂಶ 12.ಹೊನಲು 13.ಕುಕವಿ

## ಸುಡೊಕು 5577

| | | | | | | | | |
|---|---|---|---|---|---|---|---|---|
| 7 | | 4 | | 5 | | | 9 | |
| | 2 | | 1 | | 9 | 6 | | 5 |
| | | 5 | | 3 | | | 1 | |
| | | | | | 4 | 1 | | 9 |
| 9 | | 1 | 5 | 8 | | | 4 | |
| 4 | | | | 1 | | 3 | | 7 |
| | | | 3 | | 7 | | | 1 |
| | 6 | | | 9 | 1 | 7 | | |
| | | | | 2 | | | 6 | 4 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5576 ಸುಡೊಕು

| | | | | | | | | |
|---|---|---|---|---|---|---|---|---|
| 8 | 7 | 9 | 6 | 2 | 1 | 3 | 4 | 5 |
| 3 | 2 | 6 | 5 | 4 | 8 | 9 | 1 | 7 |
| 1 | 4 | 5 | 9 | 7 | 3 | 2 | 8 | 6 |
| 2 | 6 | 8 | 1 | 3 | 5 | 4 | 7 | 9 |
| 9 | 3 | 1 | 7 | 8 | 4 | 5 | 6 | 2 |
| 4 | 5 | 7 | 2 | 9 | 6 | 1 | 3 | 8 |
| 6 | 9 | 2 | 3 | 1 | 7 | 8 | 5 | 4 |
| 7 | 1 | 4 | 8 | 5 | 9 | 6 | 2 | 3 |
| 5 | 8 | 3 | 4 | 6 | 2 | 7 | 9 | 1 |

# ಕೋವಿಡ್‌ನಿಂದ ವೀರ್ಯದ ಗುಣಮಟ್ಟ ಕುಸಿತ– ಏಮ್ಸ್

ನವದೆಹಲಿ (ಪಿಟಿಐ): ಕೋವಿಡ್–19 ಪೀಡಿತ ಪುರುಷರ ವೀರ್ಯದ ಗುಣಮಟ್ಟ ಕುಸಿತವಾಗಿರುವ ವಿಚಾರ ಪಟ್ನಾದ ಅಖಿಲ ಬಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್) ನೇತೃತ್ವದ ತಜ್ಞರು ನಡೆಸಿದ ಸಂಶೋಧನೆಯಿಂದ ತಿಳಿದುಬಂದಿದೆ.

2020ರ ಅಕ್ಟೋಬರ್‌ನಿಂದ 2021ರ ಏಪ್ರಿಲ್ ನಡುವೆ 19ರಿಂದ 45 ವರ್ಷದ 30 ಮಂದಿ ಪುರುಷರ ವೀರ್ಯದ ಗುಣಮಟ್ಟವನ್ನು ಅಧ್ಯಯನ ನಡೆಸಿದ ಬಳಿಕ ಈ ಮಾಹಿತಿಯನ್ನು ಬಹಿರಂಗಪಡಿಸಲಾಗಿದೆ. ಕೋವಿಡ್ ಸೋಂಕು ಇದ್ದಾಗ ಹಾಗೂ ಸೋಂಕಿನಿಂದ ಮುಕ್ತರಾದ ಬಳಿಕ ಎರಡು ಹಂತಗಳಲ್ಲಿ ವೀರ್ಯ ಪರೀಕ್ಷೆ ನಡೆಸಿದ ವೇಳೆ ಇದು ಗೊತ್ತಾಗಿದೆ.

ವೃಷಣದಲ್ಲಿ ವೀರ್ಯ ಉತ್ಪಾದನೆಗೆ ಅಗತ್ಯವಾಗಿರುವ ಆ್ಯಂಜಿಯೊಟೆನ್ಸಿನ್ ಕನ್ವರ್ಟಿಂಗ್‌ಎಂಜೈಮ್–2 ರಿಸೆಪ್ಟರ್ (ಎಸಿಇ2) ಮೇಲೆ ಕೋವಿಡ್ ಬಹು ವಿಧದಲ್ಲಿ ಹಾನಿ ಮಾಡುವುದರಿಂದಲೇ ವೀರ್ಯ ಪ್ರಮಾಣದಲ್ಲಿ ಇಳಿಕೆಯಾಗಲು ಕಾರಣವಾಗುತ್ತದೆ ಎಂಬುದು ಸಂಶೋಧನೆಯಿಂದ ತಿಳಿದುಬಂದಿದೆ ಎಂದು 'ಕ್ಯೂರಸ್' ವೈದ್ಯಕೀಯ ವಿಜ್ಞಾನ ನಿಯತಕಾಲಿಕದಲ್ಲಿ ತಿಳಿಸಲಾಗಿದೆ.

ಆದರೆ ವೀರ್ಯವನ್ನು ಒಳಗೊಂಡ ಬಿಳಿ ಲೋಳೆಯ ದಪ್ಪ, ವೀರ್ಯ ಉತ್ಪಾದನೆಯಲ್ಲಿ ಅದರ ಪ್ರಭಾವ, ವೀರ್ಯದ ಫಲವಂತಿಕೆ ಮೊದಲಾದ ವಿಚಾರಗಳಲ್ಲಿ ಇದುವರೆಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ ಎಂಬುದನ್ನೂ ಸಂಶೋಧನಾ ಲೇಖನದಲ್ಲಿ ಉಲ್ಲೇಖಿಸಲಾಗಿದೆ.

ವೀರ್ಯದ ಗುಣಮಟ್ಟ, ವೀರ್ಯದಲ್ಲಿನ ಡಿಎನ್‌ಎ ವಿಘಟನೆಯ ಸೂಚ್ಯಂಕವನ್ನು ವಿಶ್ಲೇಷಿಸುವ ಮೂಲಕ ಸಂಶೋಧಕರು ವೀರ್ಯಕ್ಕೆ ಆಗಿರುವ ಹಾನಿಯ ಅಂದಾಜು ಮಾಡಿದ್ದಾರೆ.

'ಪರೀಕ್ಷೆಗೆ ಒಳಪಟ್ಟ ಎಲ್ಲಾ ಪುರುಷರನ್ನು ಕೋವಿಡ್ ಸಂದರ್ಭದಲ್ಲಿ ಹಾಗೂ ಕೋವಿಡ್‌ನಿಂದ ಮುಕ್ತರಾದ ಬಳಿಕ 74 ದಿನಗಳ ನಂತರ ಒಂದೇ ರೀತಿಯ ವೀರ್ಯಾಣು ಪರೀಕ್ಷೆಗೆ ಒಳಪಡಿಸಲಾಯಿತು. ಸೋಂಕಿತರಾಗಿದ್ದ ಸಮಯದಲ್ಲಿ ಮಾಡಲಾದ ಮೊದಲ ಪರೀಕ್ಷೆಯ ವೇಳೆ ವೀರ್ಯದ ಸಾಂದ್ರತೆ, ವೀರ್ಯದ ಸಂಖ್ಯೆ ಸಹಿತ ಹಲವಾರು ವಿಚಾರಗಳಲ್ಲಿ ತೀರಾ ಕಡಿಮೆ ಇದ್ದುದು ಕಂಡುಬಂದಿತ್ತು. ಎರಡನೇ ಪರೀಕ್ಷೆ ವೇಳೆ ಗುಣಮಟ್ಟ ಸುಧಾರಣೆ ಕಂಡಿತ್ತು' ಎಂದು ತಿಳಿಸಲಾಗಿದೆ.

## ಪ್ರಯಾಣಿಕರಲ್ಲಿ ಒಮೈಕ್ರಾನ್‌ನ 11 ಉಪತಳಿ ಪತ್ತೆ

ನವದೆಹಲಿ (ಪಿಟಿಐ): ಕಳೆದ ಡಿ. 24 ರಿಂದ ಇದೇ 3ರವರೆಗೆ ವಿದೇಶಿ ಪ್ರಯಾಣಿಕರಿಗೆ ಕೋವಿಡ್ ಪರೀಕ್ಷೆ ನಡೆಸಿದ್ದು, 124 ಪ್ರಯಾಣಿಕರಲ್ಲಿ ಒಮೈಕ್ರಾನ್ ವೈರಾಣುವಿನ 11 ಉಪತಳಿಗಳು ಪತ್ತೆಯಾಗಿವೆ. ಈ ಎಲ್ಲ ಉಪತಳಿಗಳು ಈ ಮುನ್ನ ಭಾರತದಲ್ಲಿ ವರದಿಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಹಲ್ದ್ವಾನಿ: ಉತ್ತರಾಖಂಡ ಹೈಕೋರ್ಟ್ ಆದೇಶಕ್ಕೆ 'ಸುಪ್ರೀಂ'ನಿಂದ ತಡೆಯಾಜ್ಞೆ

# ರೈಲ್ವೆ ಭೂಮಿ ಒತ್ತುವರಿ ತೆರವಿಗೆ ತಡೆ

ನವದೆಹಲಿ (ಪಿಟಿಐ): ಉತ್ತರಾಖಂಡದ ಹಲ್ದ್ವಾನಿಯ ಬನ್‌ಭೂಲ್‌ಪುರದಲ್ಲಿ ರೈಲ್ವೆ ಇಲಾಖೆಯ 29 ಎಕರೆ ಜಾಗ ಒತ್ತುವರಿಯನ್ನು ತೆರವುಗೊಳಿಸುವಂತೆ ಉತ್ತರಾಖಂಡ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಗುರುವಾರ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ್ದು, 'ಇದೊಂದು ಮಾನವೀಯ ವಿಷಯವಾಗಿದ್ದು, ರಾತ್ರೋರಾತ್ರಿ 50 ಸಾವಿರ ಜನರನ್ನು ಒಕ್ಕಲೆಬ್ಬಿಸಲು ಸಾಧ್ಯವಿಲ್ಲ' ಎಂದು ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿಗಳಾದ ಎಸ್‌.ಕೆ. ಕೌಲ್ ಮತ್ತು ಎ.ಎಸ್. ಓಕಾ ಅವರನ್ನೊಳಗೊಂಡ ನ್ಯಾಯಪೀಠವು, 'ಈ ಸಮಸ್ಯೆಗೆ ಕಾರ್ಯಸಾಧ್ಯವಾದ ಪರಿಹಾರವನ್ನು ಕಂಡುಕೊಳ್ಳಬೇಕಿದೆ' ಎಂದೂ ಸಲಹೆ ನೀಡಿದೆ.

ರೈಲ್ವೆಯ ಪ್ರಕಾರ, ಬನ್‌ಭೂಲ್‌ಪುರದಲ್ಲಿ 4,365 ಕುಟುಂಬಗಳು ಅತಿಕ್ರಮಣ ಮಾಡಿದ್ದು, ಸುಮಾರು 50 ಸಾವಿರ ಜನರು ವಾಸವಾಗಿದ್ದಾರೆ. ಅವರಲ್ಲಿ ಬಹುತೇಕರು ಮುಸ್ಲಿಂ ಸಮುದಾಯದವರಾಗಿದ್ದಾರೆ.

ಅತಿಕ್ರಮಣ ತೆರವಿಗೆ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ, ಸಲ್ಲಿಸಲಾಗಿರುವ ಅರ್ಜಿಗಳಿಗೆ ಪ್ರತಿಕ್ರಿಯೆ ನೀಡುವಂತೆ ರೈಲ್ವೆ ಇಲಾಖೆ ಮತ್ತು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿದೆ.



ಉತ್ತರಾಖಂಡದ ಹಲ್ದ್ವಾನಿಯ ಬನ್‌ಭೂಲ್‌ಪುರದಲ್ಲಿ ಗುರುವಾರ ರೈಲ್ವೆಗೆ ಸೇರಿದ ಜಾಗದ ಒತ್ತುವರಿ ತೆರವುಗೊಳಿಸುವಂತೆ ಹೈಕೋರ್ಟ್ ನೀಡಿದ್ದ ಆದೇಶ ವಿರೋಧಿಸಿ ಅಲ್ಲಿನ ನಿವಾಸಿಗಳು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

'ಉತ್ತರಾಖಂಡ ಜಾರಿಗೊಳಿಸಿರುವ ನಿರ್ದೇಶನಗಳಿಗೆ ತಡೆ ಇರುತ್ತದೆ' ಎಂದು ಹೇಳಿದ ನ್ಯಾಯಪೀಠವು, ಪ್ರಕರಣದ ಮುಂದಿನ ವಿಚಾರಣೆಯನ್ನು ಫೆಬ್ರುವರಿ 7ಕ್ಕೆ ಮುಂದೂಡಲಾಗಿದೆ' ಎಂದು ಹೇಳಿದೆ.

'ಭೂಮಿಯ ಯಾವುದೇ ಹಕ್ಕುಗಳನ್ನು ಹೊಂದಿರದ ಜನರನ್ನು ಪ್ರತ್ಯೇಕಿಸಲು ಅಥವಾ ಒಕ್ಕಲೆಬ್ಬಿಸಲು ಕಾರ್ಯಸಾಧ್ಯವಾದ ವ್ಯವಸ್ಥೆಯು ಅವಶ್ಯಕ ಎಂಬುದನ್ನು ನಾವು ನಂಬುತ್ತೇವೆ. ಇದೊಂದು ಮಾನವೀಯ ವಿಷಯವಾಗಿದ್ದು, ಈ ನಿಟ್ಟಿನಲ್ಲಿ ರೈಲ್ವೆಯು ಪರಿಹಾರವನ್ನು ಕಂಡುಕೊಳ್ಳುವಾಗಲೇ ಈಗಾಗಲೇ ಅಸ್ತಿತ್ವದಲ್ಲಿರುವ ಪುನರ್ವಸತಿ ಯೋಜನೆಗಳನ್ನು ಗುರುತಿಸಬೇಕು ಹಾಗೂ ಪ್ರಾಯೋಗಿಕ ಮಾರ್ಗವನ್ನು ಕಂಡುಕೊಳ್ಳಬೇಕು' ಎಂದೂ ಸುಪ್ರೀಂ ಕೋರ್ಟ್ ತಿಳಿಸಿದೆ.

ರೈಲ್ವೆಯ ಅಗತ್ಯಗಳನ್ನು ಮನವರಿಕೆ ಮಾಡಿಕೊಟ್ಟ, ರೈಲ್ವೆಯ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರ ವಾದವನ್ನು ಗಮನಿಸಿದ ನ್ಯಾಯಪೀಠವು, 'ಈ ಭೂಮಿಯನ್ನು ಸಂಪೂರ್ಣವಾಗಿ ರೈಲ್ವೆಗೆ ವಹಿಸಬೇಕೆ ಅಥವಾ ರಾಜ್ಯವು ಅದರಲ್ಲಿ ಒಂದು ಭಾಗವನ್ನು ಪಡೆಯಲಿದೆಯೇ ಎಂಬ ಬಗ್ಗೆ ರಾಜ್ಯ ಸರ್ಕಾರದ ನಿಲವನ್ನು ಪರಿಗಣಿಸಬೇಕಾಗಿರುವುದು ಪ್ರಮುಖ ಅಂಶವಾಗಿದೆ' ಎಂದೂ ಹೇಳಿದೆ.

### ತೀರ್ಪು ಸ್ವಾಗತಿಸಿದ ನಿವಾಸಿಗಳು

ಹಲ್ದ್ವಾನಿ/ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡ ಹೈಕೋರ್ಟ್ ಆದೇಶದಂತೆ ಒತ್ತುವರಿ ತೆರವಿನ ಭೀತಿಯನ್ನು ಎದುರಿಸುತ್ತಿರುವ ಹಲ್ದ್ವಾನಿಯ ಬನ್‌ಭೂಲ್‌ಪುರದ ನಿವಾಸಿಗಳು ಗುರುವಾರ ಸುಪ್ರೀಂ ಕೋರ್ಟ್ ನೀಡಿದ ತಡೆಯಾಜ್ಞೆಯನ್ನು ಸ್ವಾಗತಿಸಿದ್ದಾರೆ.

'ನಮ್ಮ ಬಳಿ ಸೂಕ್ತ ದಾಖಲೆಗಳಿವೆ. ನಾವಿಲ್ಲಿ 100 ವರ್ಷಗಳಿಂದ ವಾಸವಾಗಿದ್ದೇವೆ' ಎಂದು ಅಲ್ಲಿನ ನಿವಾಸಿಯೊಬ್ಬರು ತಿಳಿಸಿದರು.

ಸುಪ್ರೀಂ ಕೋರ್ಟ್ ತಡೆಯಾಜ್ಞೆಗೂ ಮುನ್ನ, ನೂರಾರು ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಮಕ್ಕಳು ಇಲ್ಲಿನ ಮಸೀದಿಯ ಬಳಿ ಪ್ರತಿಭಟನೆ ನಡೆಸಿ, ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು.

# ಉತ್ತರಾಖಂಡ: ಜೋಶಿಮಠದ 30 ಕುಟುಂಬಗಳ ಸ್ಥಳಾಂತರ

ಗೋಪೇಶ್ವರ, ಉತ್ತರಾಖಂಡ (ಪಿಟಿಐ): ಹಿಮಾಲಯ ಪ್ರದೇಶದಲ್ಲಿ ಭೂಮಿಯ ಕಂಪನಗಳಿಂದ ಹಲವು ಮನೆಗಳು ಬಿರುಕು ಬಿಟ್ಟ ಪರಿಣಾಮ ಇಲ್ಲಿನ ಜೋಶಿಮಠದ ಸುಮಾರು 30 ಕುಟುಂಬಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ 6,000 ಅಡಿ ಎತ್ತರದಲ್ಲಿ ಈ ಪಟ್ಟಣ ಇದೆ. ಇದು ಬದರಿನಾಥ ಮತ್ತು ಹೇಮಕುಂಡ್ ಸಾಹಿಬ್‌ಗೆ ಹೋಗುವ ಮಾರ್ಗದಲ್ಲಿದ್ದು, ಈ ಪ್ರದೇಶವನ್ನು ಹೆಚ್ಚಿನ ಅಪಾಯದ ಭೂಕಂಪನದ 'ವಲಯ–ವಿ' ಎಂದು ಗುರುತಿಸಲಾಗಿದೆ.

ಇಲ್ಲಿನ ರವಿಗ್ರಾಮದಲ್ಲಿ 153, ಗಾಂಧಿನಗರದಲ್ಲಿ 127, ಮನೋಹರಬಾಗ್‌ನಲ್ಲಿ 71, ಸಿಂಗ್‌ಧಾರ್‌ನಲ್ಲಿ 52, ಪರ್ಸಾರಿಯಲ್ಲಿ 50, 'ಅಪ್ಪರ್ ಬಜಾರ್'ನಲ್ಲಿ 19, ಸುನೀಲ್‌ನಲ್ಲಿ 27, ಮಾರ್ವಾಡಿಯಲ್ಲಿ 28, 'ಲೋವರ್ ಬಜಾರ್'ನಲ್ಲಿ 24 ಮನೆಗಳು ಬಿರುಕು ಬಿಟ್ಟಿವೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ತಿಳಿಸಿದ್ದಾರೆ.

ತೀವ್ರ ಹಾನಿಗೊಳಗಾದ ಮನೆಗಳಿಂದ 29 ಕುಟುಂಬಗಳನ್ನು ತಾತ್ಕಾಲಿಕವಾಗಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಅಗತ್ಯವಿದ್ದರೆ ಹೆಚ್ಚಿನ ಕುಟುಂಬಗಳನ್ನು ಸ್ಥಳಾಂತರಿಸಲಾಗುವುದು ಎಂದು ಅವರು ಹೇಳಿದ್ದಾರೆ.

'ಜೋಶಿಮಠದ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ. ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸುತ್ತೇನೆ' ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಪ್ರತಿಕ್ರಿಯಿಸಿದ್ದಾರೆ.

**ಸ್ಥಳೀಯರ ಪ್ರತಿಭಟನೆ:** ಜನರನ್ನು ಸ್ಥಳಾಂತರಿಸುವ ಸರ್ಕಾರ ಪ್ರಕ್ರಿಯೆಯನ್ನು ವಿರೋಧಿಸಿ ಸ್ಥಳೀಯರು ಪ್ರತಿಭಟಿಸಿದರು. ಸರ್ಕಾರಕ್ಕೆಗೊಂಡಿರುವ ಎನ್‌ಟಿಪಿಸಿ ಯೋಜನೆಗಳಿಂದ ಈ ದುಸ್ಥಿತಿ ಬಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಸುದ್ದಿ 2 ನಿಮಿಷ

### ಮೂತ್ರವಿಸರ್ಜನೆ ಪ್ರಕರಣ: ಮುಂಬೈ ತೆರಳಿದ ದೆಹಲಿ ಪೊಲೀಸ್ ತಂಡಗಳು

ನವದೆಹಲಿ(ಪಿಟಿಐ): ಏರ್ ಇಂಡಿಯಾ ವಿಮಾನದಲ್ಲಿ ಮಹಿಳಾ ಪ್ರಯಾಣಿಕರೊಬ್ಬರ ಮೇಲೆ ಮೂತ್ರ ವಿಸರ್ಜನೆ ಮಾಡಿದ ಆರೋಪಿ ಶಂಕರ್ ಮಿಶ್ರಾ ಪತ್ತೆಗಾಗಿ ದೆಹಲಿ ಪೊಲೀಸರು ಹಲವು ತಂಡಗಳನ್ನು ಮುಂಬೈಗೆ ಕಳಿಸಿದ್ದಾರೆ ಎಂದು ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

ಸಂತ್ರಸ್ತೆ ನೀಡಿದ ದೂರಿನನ್ವಯ, ಮಿಶ್ರಾ ವಿರುದ್ಧ ದೆಹಲಿ ಪೊಲೀಸರು ಬುಧವಾರ ಎಫ್‌ಐಆರ್ ದಾಖಲಿಸಿದ್ದು, ಆತನ ಪತ್ತೆಗಾಗಿ ಹಲವು ತಂಡಗಳನ್ನು ರಚಿಸಿದ್ದಾರೆ. 'ಆರೋಪಿ ಶಂಕರ್ ಮಿಶ್ರಾ, ಹಣಕಾಸು ಸೇವೆಗಳನ್ನು ಒದಗಿಸುವ ಅಮೆರಿಕ ಮೂಲದ ಬಹುರಾಷ್ಟ್ರೀಯ ಕಂಪನಿಯ ಭಾರತ ಶಾಖೆಯ ಉಪಾಧ್ಯಕ್ಷ. ಈ ಕಂಪನಿಯ ಕೇಂದ್ರ ಕಚೇರಿ ಕ್ಯಾಲಿಫೋರ್ನಿಯಾದಲ್ಲಿದೆ' ಎಂದು ಪೊಲೀಸರು ತಿಳಿಸಿದ್ದಾರೆ.



'ಮಿಶ್ರಾ, ಮುಂಬೈ ನಿವಾಸಿಯಾಗಿದ್ದು ಸದ್ಯ ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗಾಗಿ ಪೊಲೀಸ್ ತಂಡಗಳನ್ನು ಕಳುಹಿಸಲಾಗಿದೆ' ಎಂದಿದ್ದಾರೆ.

ಕಳೆದ ವರ್ಷ ನ. 26 ರಂದು ನ್ಯೂಯಾರ್ಕ್‌ನಿಂದ ದೆಹಲಿಗೆ ಸಂಚರಿಸುತ್ತಿದ್ದ ಏರ್ ಇಂಡಿಯಾ ವಿಮಾನದಲ್ಲಿ ಈ ಘಟನೆ ನಡೆದಿತ್ತು.

**ಡಿಜಿಸಿಎಯಿಂದ ಶೋಕಾಸ್ ನೋಟಿಸ್:** ಈ ಘಟನೆಗೆ ಸಂಬಂಧಿಸಿ ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ಏರ್ ಇಂಡಿಯಾ ಅಧಿಕಾರಿಗಳು ಹಾಗೂ ನ್ಯೂಯಾರ್ಕ್–ದೆಹಲಿ ವಿಮಾನದ ಸಿಬ್ಬಂದಿಗೆ ಗುರುವಾರ ಶೋಕಾಸ್ ನೋಟಿಸ್ ಜಾರಿ ಮಾಡಿದೆ.

### ಮಹಿಳೆಯ ಹೊದಿಕೆ ಮೇಲೆ ಮೂತ್ರವಿಸರ್ಜನೆ: ಮತ್ತೊಂದು ಘಟನೆ

ನವದೆಹಲಿ (ಪಿಟಿಐ): ನ್ಯೂಯಾರ್ಕ್‌ನಿಂದ ದೆಹಲಿಗೆ ಬರುತ್ತಿದ್ದ ವಿಮಾನದಲ್ಲಿ ಮಹಿಳೆ ಮೇಲೆ ಪಾನಮತ್ತ ವ್ಯಕ್ತಿಯೊಬ್ಬ ಮೂತ್ರ ವಿಸರ್ಜಿಸಿದ ಘಟನೆ ನಡೆದ 10 ದಿನಗಳ ಅಂತರದಲ್ಲಿ ಅಂಥದೇ ಘಟನೆಯೊಂದು ಏರ್ ಇಂಡಿಯಾದ ಮತ್ತೊಂದು ವಿಮಾನದಲ್ಲಿ ನಡೆದಿರುವುದು ಗೊತ್ತಾಗಿದೆ.

ಪ್ಯಾರಿಸ್‌ನಿಂದ ದೆಹಲಿಗೆ ಸಂಚರಿಸುತ್ತಿದ್ದ ವಿಮಾನದಲ್ಲಿ ಡಿ. 6ರಂದು ವ್ಯಕ್ತಿಯೊಬ್ಬ ಮಹಿಳಾ ಪ್ರಯಾಣಿಕರೊಬ್ಬರ ಹೊದಿಕೆ ಮೇಲೆ ಮೂತ್ರ ವಿಸರ್ಜನೆ ಮಾಡಿದ್ದರು. ಆದರೆ, ಆ ವ್ಯಕ್ತಿಯು ಲಿಖಿತವಾಗಿ ಕ್ಷಮೆ ಕೇಳಿದ ಹಿನ್ನೆಲೆಯಲ್ಲಿ ಆತನ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಈ ಕುರಿತು ವಿಮಾನ ಸಿಬ್ಬಂದಿ ದೆಹಲಿಯ ಇಂದಿರಾಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಭದ್ರತಾ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು.

ವಿಮಾನ ಇಳಿದ ಕೂಡಲೇ ವ್ಯಕ್ತಿಯನ್ನು ಸಿಐಎಸ್‌ಎಫ್ ಸಿಬ್ಬಂದಿ ವಶಕ್ಕೆ ತೆಗೆದುಕೊಂಡರು. ಆತ, ಲಿಖಿತವಾಗಿ ಕ್ಷಮೆ ಕೋರಿದ. ಇಬ್ಬರು ಪ್ರಯಾಣಿಕರು ರಾಜಿಯಾದ ಹಿನ್ನೆಲೆಯಲ್ಲಿ ಆತನನ್ನು ಬಿಡುಗಡೆ ಮಾಡಲಾಯಿತು ಎಂದು ವಿಮಾನನಿಲ್ದಾಣ ಅಧಿಕಾರಿಗಳು ತಿಳಿಸಿದ್ದಾರೆ.

# ಸಿನಿಮಾ ಪುರವಣಿ



# 'ಸರ್ಕಸ್' ಜಾಕಿಗೊಲಿದ ಜಾಕ್‌ಪಾಟ್

ನಟ, ನಿರ್ದೇಶಕನಾಗಿ ಸೈ ಎನಿಸಿಕೊಂಡ ರೂಪೇಶ್ ಶೆಟ್ಟಿ, ಈಗ ರಿಯಾಲಿಟಿ ಶೋ 'ಬಿಗ್‌ಬಾಸ್' 9ನೇ ಆವೃತ್ತಿಯ ವಿಜೇತರಾಗಿದ್ದಾರೆ. ಸಿನಿಮಾ, ಟಿವಿ ಆಚೆಗಿನ ಬದುಕಿನ ಕಥೆ ಇಲ್ಲಿ ತೆರೆದಿಟ್ಟಿದ್ದಾರೆ.

ಶರತ್ ಹೆಗ್ಡೆ

**• ರೂಪೇಶ್ ಶೆಟ್ಟಿ ಸಾಗಿಬಂದ ಹಾದಿ..**

ನಾನು ಈಗ ಕರ್ನಾಟಕದ ದೊಡ್ಡ ವೇದಿಕೆಯಲ್ಲಿ ಪರಿಚಯಗೊಂಡಿದ್ದೇನೆ. ಆದರೆ ಸುಮಾರು 10, 12 ವರ್ಷಗಳಿಂದಲೂ ಕಲಾ ಕ್ಷೇತ್ರದಲ್ಲಿದ್ದೇನೆ. ಮಂಗಳೂರು ಸಮೀಪ ಉಪ್ಪಳ ನಮ್ಮ ಊರು. ಅಪ್ಪ ತ್ಯಾಂಪಣ್ಣ ಶೆಟ್ಟಿ, ಅಮ್ಮ ಪ್ರೇಮಾ ಶೆಟ್ಟಿ. ಅಕ್ಕ ಮತ್ತು ಸಹೋದರ ಇದ್ದಾರೆ. ಪ್ರಾಥಮಿಕ ಶಿಕ್ಷಣದ ಬಳಿಕ ಮಂಗಳೂರಿಗೆ ಬಂದೆ. ಕುಟುಂಬದಲ್ಲಿ ಬೇರೆ ಬೇರೆ ರೀತಿಯ ಕಷ್ಟಗಳಿದ್ದವು. ದೊಡ್ಡಮ್ಮನ ಮನೆಯಲ್ಲಿದ್ದು ನಾವೆಲ್ಲಾ ಓದಿದೆವು. ಅವರ ಮನಸ್ಸು ತುಂಬಾ ದೊಡ್ಡದು. ಬಿಬಿಎಂ ಪದವಿಯ ಬಳಿಕ ನನ್ನದೇ ಆದ ಆಸಕ್ತಿಯ ವೇದಿಕೆ ಕಟ್ಟಿಕೊಳ್ಳಬೇಕು ಅನಿಸಿತು. ಹಾಗಾಗಿ ಸಣ್ಣಪುಟ್ಟ ಪ್ರಯತ್ನಗಳನ್ನು ಮಾಡುತ್ತಾ ಹೋದೆ. ಕೆಲಕಾಲ ಬ್ಯಾಂಕೊಂದರಲ್ಲಿ ಪ್ರತಿನಿಧಿಯಾಗಿಯೂ ದುಡಿದೆ. ಆ ದಾರಿ ನನ್ನದಲ್ಲ ಅನಿಸಿತು. ಅದನ್ನೂ ತೊರೆದೆ. ಹೀಗೆ ಸಾಗುತ್ತಾ ಇಲ್ಲಿಯವರೆಗೆ ಬಂದಿದ್ದೇನೆ ನೋಡಿ.

**• ಹಾಡು, ಸಾಹಿತ್ಯ, ಗಾಯನ, ನಟನೆ ಈ ಪ್ರಕಾರ ನಿಮ್ಮಲ್ಲಿ ಸಮ್ಮಿಳಿತಗೊಂಡದ್ದು ಹೇಗೆ?**

ನನ್ನ ತಂದೆ ಯಕ್ಷಗಾನ ಕಲಾವಿದರು. ನನಗೂ ಅತ್ತ ಆಸಕ್ತಿ ಇತ್ತು. ಆದರೆ, ಪೂರ್ಣವಾಗಿ ತೊಡಗಿಸಿಕೊಳ್ಳಲು ಆಗಲಿಲ್ಲ. ಶಾಲಾ ದಿನಗಳಲ್ಲಿ ನನ್ನ ಅಕ್ಕ ಅಭಿನಯ, ಗಾಯನ ಮಾಡುತ್ತಿದ್ದಳು. ಅವಳು 10ನೇ ತರಗತಿ ಪಾಸಾಗಿ ಹೋದ ನಂತರ ಶಿಕ್ಷಕರು, ಸ್ನೇಹಿತರು ನನ್ನ ಮೇಲೆ ಒತ್ತಡ ಹೇರಿದರು. ನಾನೂ ಹಾಡಬೇಕು, ಅಭಿನಯಿಸಬೇಕು ಎಂದೆಲ್ಲಾ ಒತ್ತಾಯ ಇತ್ತು. ಶಿಕ್ಷಕರ ಮೇಲಿನ ಭಯದಿಂದಲೋ, ಸ್ನೇಹಿತರ ಒತ್ತಾಯಕ್ಕೋ ಮಣಿದು ಅಭಿನಯ, ನಿರೂಪಣೆ ಮಾಡುತ್ತಿದ್ದೆ. ಮುಂದೆ ಅದೇ ಬದುಕು ಕಟ್ಟಿಕೊಡುತ್ತದೆ ಅಂದುಕೊಂಡಿರಲಿಲ್ಲ. ಈ ಪ್ರದರ್ಶಕ ಕಲೆಗಳಿಗೆ ಬರುತ್ತಿದ್ದ ಪ್ರತಿಕ್ರಿಯೆಗಳು ನನ್ನನ್ನು ಈ ಕ್ಷೇತ್ರದಲ್ಲೇ ಮುಂದುವರಿಯಲು ಉತ್ತೇಜಿಸಿದವು. ಹಾಗೆ ನೋಡಿದರೆ ನನಗೆ ಕ್ರಿಕೆಟ್ ಎಂದರೆ ಪಂಚಪ್ರಾಣ. ಆದರೆ, ಬಾಲ್ಯವನ್ನು ಆಟಗಳಲ್ಲಿ ಕಳೆಯಲು ಆಗಲಿಲ್ಲ. ಅಜ್ಜನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆ. ಸಾಕಷ್ಟು ವ್ಯಾಪಾರವನ್ನೂ ಕಲಿತೆ. ಅದೆಲ್ಲಾ ಈಗ ಸಹಾಯಕ್ಕೆ ಬಂದಿವೆ.

**• ವಿಡಿಯೊ– ರೇಡಿಯೊ ಜಾಕಿ ಬದುಕಿನ ಬಗ್ಗೆ?**

ಇದು ಸುಮಾರು 10 ವರ್ಷಗಳ ಹಿಂದಿನ ಕತೆ. ಆಗ ಡಿಜಿಟಲ್ ವೇದಿಕೆಗಳ ಭರಾಟೆ ಇಷ್ಟೊಂದು ಇರಲಿಲ್ಲ. ಮಲಯಾಳಂನಲ್ಲಿ ಇಂಥ ವಿಡಿಯೊ ಆಲ್ಬಂಗಳು ಹೆಚ್ಚು ಸಿದ್ಧವಾಗುತ್ತಿದ್ದವು. ಆಗ ನಾನೂ ಏಕೆ ಇಂಥ ಪ್ರಯತ್ನ ಮಾಡಬಾರದು ಎಂದು ಮುಂದಾದೆ. ತುಳು ಭಾಷೆಯಲ್ಲಿ ಹತ್ತಾರು ಸಂಗೀತ ಆಲ್ಬಂಗಳ ಸಿ.ಡಿಗಳನ್ನು ರೂಪಿಸಿ ಬಿಡುಗಡೆ ಮಾಡಿದೆ. ಸಾವಿರಾರು ಪ್ರತಿಗಳು ಮಾರಾಟವಾದವು. ಅಂದೂ ಇಂದೂ ಇದಕ್ಕೆ ಬೆಂಬಲಿಸಿದ ನಿರ್ಮಾಪಕರು, ಕೊಂಡು ವೀಕ್ಷಿಸಿದ ಎಲ್ಲರೂ ಈ ಯಶಸ್ಸಿಗೆ ಕಾರಣರು. ಅದೊಂದು ದೊಡ್ಡ ವೇದಿಕೆಯಾಯಿತು. ಈ ಆಲ್ಬಂಗಳೇ ಮುಂದೆ ನಾನು ರೇಡಿಯೊ ಜಾಕಿಯಾಗಲು ಕಾರಣವಾದವು.

**• ಬೆಳ್ಳಿತೆರೆಗೆ ಬಂದದ್ದು?**

ಅದೇನೂ ಸುಲಭದ ದಾರಿ ಆಗಿರಲಿಲ್ಲ. ಸುಮಾರು 10 ಚಿತ್ರಗಳ ಪೈಕಿ 9 ವಿಫಲವಾದವು. ಕೆಲವು ಚಿತ್ರಗಳಲ್ಲಿ ಅಭಿನಯಿಸಿದ್ದು, ಮತ್ತೆ ಕೆಲವು ಚಿತ್ರಗಳಿಗೆ ಕಥೆ, ಸಂಭಾಷಣೆ ಬರೆದು ನಟಿಸಿದ್ದೂ ಇತ್ತು. ವಿಫಲವಾದಾಗ ಮೈತುಂಬಾ ಸಾಲ, ಒತ್ತಡ ಇತ್ತು. ಮತ್ತೆ ಅದೃಷ್ಟ ಪರೀಕ್ಷೆಗೆ ಇಳಿದೆ. ಕಳೆದ ವರ್ಷ ತೆರೆ ಕಂಡ 'ಗಿರ್‌ಗಿಟ್' ತುಳು ಚಿತ್ರ ಆರ್ಥಿಕವಾಗಿ ಸ್ವಲ್ಪ ಸ್ಥಿರಗೊಳಿಸಿತು. ಒಂದು ವೇಳೆ ಅದೂ ಕೈಕೊಟ್ಟಿದ್ದರೆ ಏನಾಗುತ್ತಿತ್ತೋ ಗೊತ್ತಿಲ್ಲ. ಈಗ ಕೈಯಲ್ಲಿ ಎರಡು ಕನ್ನಡ ಚಿತ್ರಗಳಿವೆ. ನನ್ನದೇ ನಿರ್ದೇಶನದ 'ಸರ್ಕಸ್' ಬಿಡುಗಡೆಗೆ ಸಿದ್ಧವಾಗಿದೆ. 'ಮಂಕು ಭಾಯ್ ಫಾಕ್ಸಿ ರಾಣಿ' ಸಿನಿಮಾ ಜ.13ಕ್ಕೆ ತೆರೆಕಾಣುತ್ತಿದೆ. ತುಳು, ಕೊಂಕಣಿ ಪ್ರೇಕ್ಷಕರನ್ನು ತಲುಪಿದ್ದೇನೆ. ಇನ್ನು ಕನ್ನಡ ಪ್ರೇಕ್ಷಕರಿಗೆ ಅದ್ಭುತವಾದ ಸಿನಿಮಾ ಕೊಡಬೇಕು ಎಂಬ ಉತ್ಸಾಹವಿದೆ.

**• ಬಿಗ್‌ಬಾಸ್ ಅನುಭವ?**

ಆ ಒಳ ಪ್ರಪಂಚವೇ ಬೇರೆ. ನಾವು ಇಲ್ಲಿ ನೋಡುತ್ತಿರುವ ಪ್ರಪಂಚವೇ ಬೇರೆ. ಗೆಲುವಂತೂ ಊಹಿಸಿಯೇ ಇರಲಿಲ್ಲ. ಆರಂಭದ ಒಂದೆರಡು ವಾರ ತುಂಬಾ ಕಷ್ಟವೆನಿಸಿತ್ತು. ಹಾಗೆ ನೋಡಿದರೆ ಇದೇ ಸರಳ. ಅಲ್ಲಿ ಸಾಕಷ್ಟು ತಾಳ್ಮೆ, ಸಹಬಾಳ್ವೆ, ನಮ್ಮ ತಪ್ಪನ್ನು ಒಪ್ಪಿಕೊಳ್ಳುವ ಗುಣ... ಹೀಗೆ ಅನೇಕ ವಿಷಯಗಳನ್ನು ಕಲಿತಿದ್ದೇನೆ. ನೋಡಿ, ಅಲ್ಲಿ ಮಾತನಾಡಿದರೂ ಕಷ್ಟ, ಮೌನವಾಗಿದ್ದರೆ ಇನ್ನೂ ಕಷ್ಟ. ಹೀಗೆ ಸಮತೋಲನ ಕಾಯ್ದುಕೊಳ್ಳಬೇಕು. ಐದು ತಿಂಗಳ ಬಳಿಕ ಹೊರ ಪ್ರಪಂಚಕ್ಕೆ ನಿಧಾನಕ್ಕೆ ಒಗ್ಗಿಕೊಳ್ಳುತ್ತಿದ್ದೇನೆ. ತುಂಬಾ ಬದಲಾಗಿದ್ದೇನೆ ಎಂದು ಗೆಳೆಯರು ಹೇಳುತ್ತಿದ್ದಾರೆ.

**• ಸಾಕಷ್ಟು ಗಾಸಿಪ್‌ಗಳಿಗೆ ಒಳಗಾದಿರಿ?**

ನೀವು ಹೇಳುತ್ತಿರುವುದು ಸಾನ್ಯಾ ಅಯ್ಯರ್ ಮತ್ತು ನನ್ನ ಬಗ್ಗೆ. ನಮ್ಮಿಬ್ಬರ ಮಧ್ಯೆ ಶುದ್ಧವಾದ ಸ್ನೇಹ ಇದೆ. ಕಿರುತೆರೆಯಲ್ಲಿ ನಮ್ಮ ಆತ್ಮೀಯತೆಯನ್ನು ನೋಡಿ ಒಬ್ಬೊಬ್ಬರು ಒಂದೊಂದು ರೀತಿ ಭಾವಿಸಿದರು. ಅದಕ್ಕೆ ಏನೂ ಮಾಡಲಾಗದು. ಮದುವೆ, ಪ್ರೀತಿ ಇತ್ಯಾದಿ ಬಗ್ಗೆ ನಾನು ಇನ್ನೂ ಯೋಚಿಸಿಯೇ ಇಲ್ಲ. ಬಿಗ್‌ಬಾಸ್ ಟ್ರೋಫಿ ಸಿಕ್ಕಿದೆಯಲ್ಲಾ. ಅದಕ್ಕೆ ಗೌರವ ತರುವಂತಹ ಸಾಧನೆ ಮಾಡಬೇಕು. ಸಿನಿಮಾಗಳನ್ನು ಮಾಡಬೇಕು. ಒಂದಿಷ್ಟು ಜನರ ಸೇವೆ ಮಾಡಬೇಕು. ಈ ಹಾದಿಯಲ್ಲೇ ಮುಂದುವರಿದಿದ್ದೇನೆ. ❖

ಪ್ರಜಾವಾಣಿ ನೋಡಿಯೋ — ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

# ಲವ್‌ಸ್ಟೋರಿ ಟ್ರ್ಯಾಕ್ ಬಿಟ್ಟು...



**ಹೊಸ ಪ್ರಾಜೆಕ್ಟ್ಸ್ ಯಾವ ಹಂತದಲ್ಲಿದೆ?**

ಶಶಾಂಕ್ ಅವರ 'ಕೌಸಲ್ಯ ಸುಪ್ರಜಾ ರಾಮ' ಚಿತ್ರದ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಂಡಿದೆ. ಮೈಸೂರಿನಲ್ಲಿ ಸೆಕೆಂಡ್ ಶೆಡ್ಯೂಲ್ ಮಾಸಾಂತ್ಯದಲ್ಲಿ ಆರಂಭವಾಗಲಿದೆ. 'ಲವ್ ಬರ್ಡ್ಸ್', 'ಶುಗರ್ ಫ್ಯಾಕ್ಟರಿ' ಚಿತ್ರೀಕರಣ ಪೂರ್ಣಗೊಂಡಿದ್ದು ಶೀಘ್ರದಲ್ಲೇ ಇವು ಬಿಡುಗಡೆಯಾಗಲಿವೆ. ಮತ್ತಷ್ಟು ಸಿನಿಮಾಗಳು ಚರ್ಚೆಯ ಹಂತದಲ್ಲಿವೆ. ಇಲ್ಲಿಯವರೆಗೂ ಸಾಲು ಸಾಲು ಲವ್‌ಸ್ಟೋರಿ ಸಿನಿಮಾಗಳನ್ನು ಮಾಡಿದ್ದೇನೆ. ಇದರಿಂದ ಬ್ರೇಕ್ ತೆಗೆದುಕೊಂಡು, ವಿಷಯಾಧಾರಿತ(ಕಂಟೆಂಟ್) ಚಿತ್ರಗಳನ್ನು ಮಾಡುವ ಅಭಿಲಾಷೆ ಇದೆ. ಈ ನಿಟ್ಟಿನಲ್ಲಿ ಪ್ರಯತ್ನ ಸಾಗಿದೆ. ಕಂಫರ್ಟ್ ಝೋನ್‌ನಿಂದ ಹೊರಬಂದು ಸವಾಲಿರುವ ಪಾತ್ರಗಳನ್ನು ಮಾಡುತ್ತೇನೆ.

ಅಭಿಲಾಷ್ ಪಿ.ಎಸ್.

**ಲವ್‌ಸ್ಟೋರಿ** ಸಿನಿಮಾಗಳಲ್ಲೇ ಮುಳುಗಿರುವ ನಟ 'ಡಾರ್ಲಿಂಗ್' ಕೃಷ್ಣ ಈ ಟ್ರ್ಯಾಕ್‌ನಿಂದ ಕೊಂಚ ಹೊರಹೆಜ್ಜೆ ಇಡುವ ಯೋಚನೆಯಲ್ಲಿದ್ದಾರೆ. 'ಮಿ.ಬ್ಯಾಚುಲರ್' ಸಿನಿಮಾ ಬಿಡುಗಡೆ ಸಂದರ್ಭದಲ್ಲಿ 'ಸಿನಿಮಾ ಪುರವಣಿ' ಜೊತೆ ಮಾತಿಗೆ ಸಿಕ್ಕ ಕೃಷ್ಣ ಅವರು ತಮ್ಮ ಹಿಂದಿನ ಹೆಜ್ಜೆಗಳು, ಮುಂದಿನ ಕನಸನ್ನು ಬಿಚ್ಚಿಟ್ಟಿದ್ದಾರೆ...

'ಹುಚ್ಚ–2 ಸಿನಿಮಾ ಸೋಲಿನ ದಿನಗಳಲ್ಲಿ ಬಂದ ಪ್ರಾಜೆಕ್ಟ್ 'ಮಿ.ಬ್ಯಾಚುಲರ್'. ಈ ಸಿನಿಮಾ ಒಪ್ಪಿಕೊಂಡಾಗ ನನ್ನ ಮನಸ್ಸಲ್ಲಿ 'ಲವ್ ಮಾಕ್ಟೇಲ್' ಸಿನಿಮಾದ ಸಣ್ಣ ಸುಳಿವೂ ಇರಲಿಲ್ಲ. 'ಮಿ.ಬ್ಯಾಚುಲರ್' ನಿರ್ಮಾಪಕರು ನನಗೆ ಒಂದೆರಡು ಲಕ್ಷ ರೂಪಾಯಿ ಅಡ್ವಾನ್ಸ್ ನೀಡಿದ್ದರು. ಇದಾಗಿ ನಾಲ್ಕೈದು ತಿಂಗಳು ಕಳೆದರೂ ಈ ಚಿತ್ರದ ಶೂಟಿಂಗ್ ಆರಂಭವಾಗಿರಲಿಲ್ಲ. ಈ ನಡುವೆ ನನ್ನ ತಲೆಯಲ್ಲಿ 'ಲವ್ ಮಾಕ್ಟೇಲ್' ನಶೆ ಹತ್ತಿತ್ತು. ಹೀಗಾಗಿ 'ಮಿ.ಬ್ಯಾಚುಲರ್' ಸಿನಿಮಾದ ಚಿತ್ರೀಕರಣಕ್ಕಿಂತ ಮೊದಲೇ 'ಲವ್ ಮಾಕ್ಟೇಲ್' ಸೆಟ್ಟೇರಿತ್ತು. ಮೈಸೂರಿನಲ್ಲಿ ಈ ಸಿನಿಮಾದ ಫಸ್ಟ್‌ಹಾಫ್ ಮುಗಿಯುವ ಸಂದರ್ಭದಲ್ಲಿ 'ಮಿ.ಬ್ಯಾಚುಲರ್' ಮುಹೂರ್ತ ನಡೆಯಿತು. ನಿಜ ಹೇಳಬೇಕೆಂದರೆ ನನ್ನ ನಿರ್ದೇಶನದ ಮೊದಲ ಸಿನಿಮಾಗೆ 'ಮಿ.ಬ್ಯಾಚುಲರ್' ಸಿನಿಮಾದ ಅಡ್ವಾನ್ಸ್ ಹಣವೇ ಮೊದಲ ಹೂಡಿಕೆ' ಎನ್ನುತ್ತಾರೆ ಕೃಷ್ಣ.

'ಮದುವೆ ಎಂದರೆ ಜೀವನದಲ್ಲಿ ನಡೆಯುವ ದೊಡ್ಡ ಹಬ್ಬ ಎಂಬ ಅಮ್ಮನ ಮಾತನ್ನು ಕೇಳಿ, ಚಿಕ್ಕ ಹುಡುಗನಾಗಿದ್ದಾಗಲಿಂದಲೇ ಮದುವೆಯ ಕನಸನ್ನೇ ಕಟ್ಟಿಕೊಂಡು ಬೆಳೆದ ಹುಡುಗನ ಜೀವನದ ಕಥೆಯೇ 'ಮಿ.ಬ್ಯಾಚುಲರ್'. ನಾಯ್ಡು ಅವರ ನಿರ್ದೇಶನದ ಚೊಚ್ಚಲ ಚಿತ್ರವಿದು. ಹೊಸಬರ ಜೊತೆ ಕೆಲಸ ಮಾಡಿದಾಗ ಚಿತ್ರದಲ್ಲೂ ಹೊಸತನವಿರುತ್ತದೆ. ಇದು ಈ ಸಿನಿಮಾದಲ್ಲಿದೆ' ಎನ್ನುವುದು ಕೃಷ್ಣ ಅವರ ಮಾತು.

**'ಲವ್ ಮಾಕ್ಟೇಲ್' ಹುಟ್ಟಿದ್ದು...**

'ಗಂಡಿನ ಮನೆಗೆ ಬರುವ ಶಾಸ್ತ್ರಕ್ಕಾಗಿ ಮಿಲನಾ ಅವರ ಮನೆಯವರು ನಮ್ಮ ಮನೆಗೆ ಬಂದಿದ್ದರು. ಈ ಸಂದರ್ಭದಲ್ಲಿ ನನ್ನ ಸಿನಿಮಾ ಪಥ ಎತ್ತ ಸಾಗುತ್ತಿದೆ? ಏನೇನು ಸಿನಿಮಾಗಳನ್ನು ಮಾಡುತ್ತಿದ್ದೇನೆ? ಮದುವೆ ಎಂಬ ಜವಾಬ್ದಾರಿಯನ್ನು ನಿಭಾಯಿಸಲು ಸಿದ್ಧನಾಗಿದ್ದೇನೆಯೇ? ಹೀಗೆ ಯೋಚಿಸುತ್ತಿರುವಾಗ, ನಾನೇ ನಿರ್ದೇಶನಕ್ಕೆ ಇಳಿಯಬೇಕು ಎಂದು ತೆಗೆದುಕೊಂಡ ನಿರ್ಧಾರದ ಫಲವೇ ಲವ್ ಮಾಕ್ಟೇಲ್' ಎಂದು ನೆನಪಿಸಿಕೊಂಡರು ಕೃಷ್ಣ.

**2022 ಲಕ್ಕಿ ಇಯರ್!**

'2022, ಖಂಡಿತವಾಗಿಯೂ ನನ್ನ ಲಕ್ಕಿ ವರ್ಷ. ನಾಲ್ಕು ಸಿನಿಮಾಗಳು ಬಿಡುಗಡೆಯಾದವು. ಈ ಸಿನಿಮಾಗಳಲ್ಲಿ ಎಲ್ಲ ಅನುಭವವೂ ಆಯಿತು. 'ಲವ್ ಮಾಕ್ಟೇಲ್–2' ಬ್ಲಾಕ್‌ಬಸ್ಟರ್ ಆಯಿತು, 'ಲಕ್ಕಿಮ್ಯಾನ್' ಕೂಡಾ ಹಿಟ್ ಆಯ್ತು. 'ದಿಲ್‌ಪಸಂದ್' ಹಾಗೂ 'ಲೋಕಲ್ ಟ್ರೈನ್' ವಿಮರ್ಶೆಯ ಪಟ್ಟಿಯಲ್ಲಿ ಎವರೇಜ್ ಫಿಲ್ಮ್ ಎಂದು ಗುರುತಿಸಿಕೊಂಡಿತು. ಈ ಪೈಕಿ 'ಲಕ್ಕಿಮ್ಯಾನ್', ನಟನಾಗಿ ಬಹಳ ಆನಂದಿಸಿ ಮಾಡಿದ ಸಿನಿಮಾ. ಪುನೀತ್ ಅವರ ಜೊತೆಗೆ ತೆರೆ ಹಂಚಿಕೊಂಡು ನಟಿಸಿದ ಅನುಭವವೇ ಅದ್ಭುತ. 'ಲವ್ ಮಾಕ್ಟೇಲ್'ನಲ್ಲಿ ಒಬ್ಬ ನಿರ್ದೇಶಕನಾಗಿ ನನಗೆ ಹೆಚ್ಚಿನ ಜವಾಬ್ದಾರಿ ಇತ್ತು. ಆದರೆ 'ಲಕ್ಕಿಮ್ಯಾನ್'ನಲ್ಲಿ ನಟನಾಗಿ ಬಹಳ ಇಷ್ಟಪಟ್ಟು ಮಾಡಿದ ಪಾತ್ರವದು. ಆ ಪಾತ್ರ ಸುಲಭದ್ದಾಗಿರಲಿಲ್ಲ. ಪ್ರತಿಯೊಂದು ಸಿನಿಮಾ ಬಳಿಕ ನಮ್ಮ ನಟನಾ ಸಾಮರ್ಥ್ಯ ಹೆಚ್ಚುತ್ತದೆ. 'ಲವ್ ಮಾಕ್ಟೇಲ್' ಮೊದಲ ಭಾಗ ಹಾಗೂ 'ಲಕ್ಕಿಮ್ಯಾನ್'ನಲ್ಲಿನ ಪಾತ್ರ ನನ್ನಿಂದ ಬಹಳ ನಟನೆಯನ್ನು ಬಯಸಿತ್ತು. ಇದಕ್ಕೆ ಹೋಲಿಸಿದರೆ 'ಲವ್ ಮಾಕ್ಟೇಲ್–2'ನಲ್ಲಿನ ನನ್ನ ಪಾತ್ರ ಹೆಚ್ಚು ನಟನೆಯನ್ನು ಬಯಸಲಿಲ್ಲ. ನಟನಾಗಿ ಈ ಸಿನಿಮಾ ನನಗೆ ಸವಾಲಾಗಿರಲಿಲ್ಲ. ಸ್ಕ್ರಿಪ್ಟ್ ಚೆನ್ನಾಗಿದ್ದು, ಅದಕ್ಕೆ ಪೂರಕವಾಗಿ ನಟರು ನಟಿಸಿದಾಗ ಸಿನಿಮಾ ಅದ್ಭುತವಾಗಿಯೇ ಬರುತ್ತದೆ' ಎನ್ನುತ್ತಾರೆ ಕೃಷ್ಣ. ❖

# ಬೆಳ್ಳಿತೆರೆಯ ಹರ್ಷಾರಂಭ

ಇಂದು ತೆರೆಗೆ

**2022**ರಲ್ಲಿ ಸಾಲು ಸಾಲು ಹಿಟ್ ಸಿನಿಮಾಗಳನ್ನು ನೀಡಿದ್ದ ಚಂದನವನ, 2023ಕ್ಕೆ ಹರ್ಷದಿಂದಲೇ ಕಾಲಿಟ್ಟಿದೆ. ಸಂಕ್ರಾಂತಿಯ ಹೊಸ್ತಿಲಲ್ಲಿ, ಗಾಂಧಿನಗರಕ್ಕೆ ಇಂದು(ಜ.6) ಹೊಸಬರ ಸಿನಿಮಾಗಳು ಲಗ್ಗೆ ಇಟ್ಟಿವೆ.

ಡಾರ್ಲಿಂಗ್ ಕೃಷ್ಣ ನಟನೆಯ **'ಮಿ.ಬ್ಯಾಚುಲರ್'** ಸಿನಿಮಾ ತೆರೆಕಂಡಿದ್ದು, ಇದು ನಿರ್ದೇಶಕ ನಾಯ್ಡು ಬಂಡಾರು ಅವರ ಚೊಚ್ಚಲ ಚಿತ್ರ. ನಿಮಿಕ ರತ್ನಾಕರ್ ಚಿತ್ರದ ನಾಯಕಿ. ಮಿಲನಾ ನಾಗರಾಜ್ ಈ ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ನಟಿಸಿದ್ದಾರೆ. ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಅಪರಾಧದ ಸುತ್ತ ನಡೆಯುವ ಕಥೆ ಹೊತ್ತ **'ಸ್ಪೂಕಿ ಕಾಲೇಜ್'** ಹಾರರ್ ಸಿನಿಮಾ. ಧಾರವಾಡದ ಕಾಲೇಜು ಹಾಗೂ ದಾಂಡೇಲಿ ಅರಣ್ಯ ಪ್ರದೇಶದಲ್ಲಿ ಸಿನಿಮಾ ಚಿತ್ರೀಕರಣಗೊಂಡಿದೆ. ಎಚ್.ಕೆ.ಪ್ರಕಾಶ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ವಿವೇಕ್ ಸಿಂಹ ಹಾಗೂ ಖುಷಿ ರವಿ ಜೋಡಿಯಾಗಿ ನಟಿಸಿರುವ ಈ ಚಿತ್ರಕ್ಕೆ ಭರತ್ ಜಿ. ಆ್ಯಕ್ಷನ್ ಕಟ್ ಹೇಳಿದ್ದಾರೆ. ಮನೋಹರ್ ಜೋಶಿ ಛಾಯಾಗ್ರಹಣ, ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ ಹಾಗೂ ಶ್ರೀಕಾಂತ್ (ಕೆ.ಜಿ.ಎಫ್) ಅವರ ಸಂಕಲನ ಚಿತ್ರಕ್ಕಿದೆ.

**'ಥಗ್ಸ್ ಆಫ್ ರಾಮಘಡ'** ಚಿತ್ರ ಉತ್ತರ ಕರ್ನಾಟಕ ಭಾಗದಲ್ಲಿ 1995ರಲ್ಲಿ ನಡೆದ ಸತ್ಯ ಘಟನೆ ಆಧರಿಸಿದೆ ಎಂದಿದೆ ಚಿತ್ರತಂಡ. ಕಾರ್ತಿಕ್ ಈ ಚಿತ್ರದ ನಿರ್ದೇಶಕ. ಚಂದನ್‌ರಾಜ್ ಹಾಗೂ ಮಹಾಲಕ್ಷ್ಮೀ ಜೋಡಿಯಾಗಿ ನಟಿಸಿರುವ ಈ ಚಿತ್ರದಲ್ಲಿ ಸೂರ್ಯ ಕಿರಣ್, ಪ್ರಭು ಹೊಸದುರ್ಗ, ಅಶ್ವಿನ್ ಹಾಸನ್, ಚಂದನ್ ರಾಜ್ ಮತ್ತಿತರರು ತಾರಾಗಣದಲ್ಲಿದ್ದಾರೆ.

ನಟಿ ಪ್ರಿಯಾಂಕಾ ಉಪೇಂದ್ರ ಅಭಿನಯದ **'ಮಿಸ್ ನಂದಿನಿ'** ಸರ್ಕಾರಿ ಶಾಲೆ ಉಳಿಸುವ ಕಥಾಹಂದರ ಹೊಂದಿದೆ. ಈ ಚಿತ್ರದಲ್ಲಿ ಶಿಕ್ಷಕಿಯಾಗಿ ಪ್ರಿಯಾಂಕಾ ಕಾಣಿಸಿಕೊಂಡಿದ್ದಾರೆ. ಶ್ರೀವಿಜಯ್ ಫಿಲಂಸ್ ಮೂಲಕ ನೀಲಕಂಠಸ್ವಾಮಿ ಈ ಚಿತ್ರ ನಿರ್ಮಿಸಿದ್ದಾರೆ. ಆಶಾ ಸಹ ನಿರ್ಮಾಪಕರು. ಗುರುದತ್ ಎಸ್.ಆರ್. ಈ ಚಿತ್ರದ ನಿರ್ದೇಶಕರು.

ವಿಭಿನ್ನ ಶೀರ್ಷಿಕೆಯ **'ಶ್ರೀ ಬಾಲಾಜಿ ಫೋಟೋ ಸ್ಟುಡಿಯೋ'** ಒಬ್ಬ ಫೋಟೊಗ್ರಾಫರ್ ಸುತ್ತ ಹೆಣೆದ ಕಥೆಯಾಗಿದೆ. ಹಳ್ಳಿ ಸೊಗಡಿನ ಈ ಚಿತ್ರದಲ್ಲಿ ಕಿರುತೆರೆ ನಟ ರಾಜೇಶ್ ಧ್ರುವ ನಾಯಕನಾಗಿ ನಟಿಸಿದ್ದಾರೆ. ಅವರೇ ಚಿತ್ರಕ್ಕೆ ಆ್ಯಕ್ಷನ್ ಕಟ್ ಕೂಡಾ ಹೇಳಿದ್ದಾರೆ. ಚಿತ್ರದ ಕಥೆ, ಚಿತ್ರಕಥೆ ಅಭಿಷೇಕ್ ಶಿರಸಿ ಹಾಗೂ ಪೃಥ್ವಿಕಾಂತ್ ಅವರದ್ದು. ❖



ಖುಷಿ ರವಿ



ಪ್ರಿಯಾಂಕಾ ಉಪೇಂದ್ರ

## ಅರಳಿದ 'ಬ್ರಹ್ಮಕಮಲ'



ಅದ್ವಿತಿ ಶೆಟ್ಟಿ

**'ದಾರಿ ಯಾವುದಯ್ಯಾ ವೈಕುಂಠಕೆ'** ಸಿನಿಮಾ ಖ್ಯಾತಿಯ ನಿರ್ದೇಶಕ ಸಿದ್ದು ಪೂರ್ಣಚಂದ್ರ ಅವರ ನಿರ್ಮಾಣ, ನಿರ್ದೇಶನದ ಚಿತ್ರ 'ಬ್ರಹ್ಮಕಮಲ' ಅರಳಿ ನಿಂತಿದೆ. ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಚಿತ್ರಕ್ಕೆ ಸೆನ್ಸಾರ್ ಮಂಡಳಿಯಿಂದ 'ಯು' ಪ್ರಮಾಣಪತ್ರ ಲಭಿಸಿದೆ.

ರಾತ್ರಿ ಹುಟ್ಟಿ, ರಾತ್ರಿಯೇ ಮುರುಟಿ ಹೋಗುವ ಒಂದು ಮಗುವಿನ ಸುತ್ತ ಘಟಿಸುವ ಕಥೆಯೇ 'ಬ್ರಹ್ಮ ಕಮಲ'. ಇದು ಮಹಿಳಾ ಪ್ರಧಾನ ಕಥೆ. ಅದ್ವಿತಿ ಶೆಟ್ಟಿ ಇಲ್ಲಿ ಪ್ರಮುಖ ಪಾತ್ರದಲ್ಲಿದ್ದಾರೆ. ಲೋಕೇಂದ್ರ ಸೂರ್ಯ, ಋತು ಚೈತ್ರ, ಮಮತಾ ರಾಹುತ್, ಪ್ರಮಿಳಾ ಸುಬ್ರಹ್ಮಣ್ಯ, ಬಲ ರಾಜ್ವಾಡಿ, ಸಿದ್ದು ಪೂರ್ಣಚಂದ್ರ, ಆಟೊ ನಾಗರಾಜ್ ತಾರಾಬಳಗದಲ್ಲಿದ್ದಾರೆ. ಲೋಕೇಂದ್ರ ಸೂರ್ಯನಾರಾಯಣ ಛಾಯಾಗ್ರಹಣ, ದೀಪು ಸಿ. ಎಸ್. ಸಂಕಲನ, ಅನಂತ್ ಆರ್ಯನ್ ಸಂಗೀತದ ಹೊಣೆ ಹೊತ್ತಿದ್ದಾರೆ. ಬಿಡುಗಡೆ ದಿನಾಂಕ ಇನ್ನಷ್ಟೇ ಘೋಷಣೆಯಾಗಬೇಕಿದೆ. ❖

## ವಿನಯ್‌ಗೆ 'ಸಿಂಪಲ್' ಆ್ಯಕ್ಷನ್



ವಿನಯ್

**'ಅವತಾರ ಪುರುಷ'** ಸಿನಿಮಾ ಬಳಿಕ, 'ಗತವೈಭವ' ಪ್ರಾಜೆಕ್ಟ್ ಕೈಗೆತ್ತಿಕೊಂಡಿರುವ ನಿರ್ದೇಶಕ 'ಸಿಂಪಲ್' ಸುನಿ ಮತ್ತೊಂದು ಸಿನಿಮಾಗೆ ಸಜ್ಜಾಗಿದ್ದಾರೆ. ರೊಮ್ಯಾಂಟಿಕ್ ಸಬ್ಜೆಕ್ಟ್ ಚಿತ್ರದಲ್ಲಿ ನಟ ವಿನಯ್ ರಾಜ್‌ಕುಮಾರ್ ಅವರಿಗೆ ಆ್ಯಕ್ಷನ್ ಕಟ್ ಹೇಳಲು ಸುನಿ ಸಿದ್ಧತೆ ಆರಂಭಿಸಿದ್ದಾರೆ.


ಸದ್ಯ 'ಪೆಪೆ' ಹಾಗೂ 'ಅಂದೊಂದಿತ್ತು ಕಾಲ' ಸಿನಿಮಾಗಳ ರಿಲೀಸ್‌ಗೆ ವಿನಯ್ ಎದುರು ನೋಡುತ್ತಿದ್ದಾರೆ. ಈ ನಡುವೆ ಅವರು ಸುನಿಗೆ ಕಾಲ್‌ಶೀಟ್ ನೀಡಿದ್ದಾರೆ. ವಿಶೇಷ ಏನೆಂದರೆ ಈ ಚಿತ್ರದ ಮೂಲಕ ಇದೇ ಮೊದಲ ಬಾರಿಗೆ ದೊಡ್ಮನೆ ಹುಡುಗ ವಿನಯ್ ಅವರಿಗೆ ಸುನಿ ನಿರ್ದೇಶನ ಮಾಡುತ್ತಿದ್ದಾರೆ. ಚಿತ್ರಕ್ಕೆ ಪ್ರಸನ್ನ ಕಥೆ ಬರೆದಿದ್ದು, ಚಿತ್ರಕಥೆ, ಸಂಭಾಷಣೆ ಬರೆದು ಸುನಿ ಆ್ಯಕ್ಷನ್ ಕಟ್ ಹೇಳಲಿದ್ದಾರೆ.



'ಸಿಂಪಲ್' ಸುನಿ

ಚಿತ್ರದ ಪ್ರಿ ಪ್ರೊಡಕ್ಷನ್ ಕೆಲಸದಲ್ಲಿ ನಿರತವಾಗಿರುವ ಸುನಿ ಸದ್ಯದಲ್ಲೇ ಚಿತ್ರದ ಶೀರ್ಷಿಕೆ, ತಾರಾಬಳಗ ಎಲ್ಲದರ ಬಗ್ಗೆ ಅಧಿಕೃತ ಮಾಹಿತಿ ಹಂಚಿಕೊಳ್ಳುವುದಾಗಿ ತಿಳಿಸಿದ್ದಾರೆ. ಈ ಚಿತ್ರಕ್ಕೆ ಮೈಸೂರು ರಮೇಶ್ ಬಂಡವಾಳ ಹೂಡುತ್ತಿದ್ದು, ವೀರ್ ಸಮರ್ಥ್ ಸಂಗೀತ ನಿರ್ದೇಶನ, ಸಭಾ ಛಾಯಾಗ್ರಹಣವಿರಲಿದೆ. ❖

### ಷೇರುಪೇಟೆ ವಹಿವಾಟು




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 18,043 |
| ಇಂದಿನ ಅಂತ್ಯ | 17,992 |
| ▼ | 51 |
| ದಿನದ ಕನಿಷ್ಠ | 17,892 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹565 |
| 12 ಮೊಟ್ಟೆಗೆ | ₹72 |
| ಮೈಸೂರು | |
| 100 ಮೊಟ್ಟೆಗೆ | ₹567 |

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1630 (1620) |
| ಸೋಯಾ (ರಿಫೈನ್ಡ್) | ₹1275 (1280) |
| ಸೂರ್ಯಕಾಂತಿ (ರಿಫೈನ್ಡ್) | ₹1320 (1330) |
| ಪಾಮೋಲಿನ್ | ₹958 (965) |

### ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹1400-1600 |
| ಮಧ್ಯಮ | ₹1000-1200 |
| ಸಣ್ಣ | ₹500-800 |

### ರಾಮನಗರ ರೇಷ್ಮೆಗೂಡು ಧಾರಣೆ

| | |
|---|---|
| ಮಿಶ್ರತಳಿ (ಸಿ.ಬಿ) | ₹455-672 |
| ದ್ವಿತಳಿ (ಬಿ.ವಿ) | ₹366-788 |

ಬೆಂಗಳೂರಿನಲ್ಲಿ ನಡೆದ ಮೈಕ್ರೊಸಾಫ್ಟ್ ತಂತ್ರಜ್ಞಾನ ಶೃಂಗ

# ಯುಪಿಐಗೆ ಸತ್ಯ ನಾದೆಲ್ಲ ಪ್ರಶಂಸೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲಾಭದ ಉದ್ದೇಶ ಇಲ್ಲದೆ, ಡಿಜಿಟಲ್ ವೇದಿಕೆಗಳ ಮೂಲಕ ಸಾರ್ವಜನಿಕರಿಗೆ ಒದಗಿಸಲಾಗುತ್ತಿರುವ ಯುಪಿಐ, ಒಎನ್‌ಡಿಸಿ ಮತ್ತು ಆಧಾರ್‌ನಂತಹ ಸೇವೆಗಳನ್ನು ಮೈಕ್ರೊಸಾಫ್ಟ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸತ್ಯ ನಾದೆಲ್ಲ ಅವರು ಮುಕ್ತಕಂಠದಿಂದ ಪ್ರಶಂಸಿಸಿದರು.

ಬೆಂಗಳೂರಿನಲ್ಲಿ ಗುರುವಾರ ಆಯೋಜನೆ ಆಗಿದ್ದ 'ಮೈಕ್ರೊಸಾಫ್ಟ್ ಫ್ಯೂಚರ್ ರೆಡಿ ತಂತ್ರಜ್ಞಾನ ಶೃಂಗ'ದಲ್ಲಿ ಅವರು ಮಾತನಾಡಿದರು. ಜನರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಇಂತಹ ಸೇವೆಗಳ ಪಾತ್ರ ದೊಡ್ಡದು ಎಂದರು.

'ಹಲವು ಯೋಜನೆಗಳು ಹಾಗೂ ತಂತ್ರಜ್ಞಾನದ ನೆರವು ಪಡೆದು ಭಾರತದಲ್ಲಿ ಸಾರ್ವಜನಿಕರಿಗೆ ಒದಗಿಸುತ್ತಿರುವ ಸೇವೆಗಳು ಬಹಳ ಬೃಹತ್ ಆಗಿವೆ. ಇವು ಭಾರತವು ಜಗತ್ತಿಗೆ ನೀಡಬಹುದಾದ ಅತಿದೊಡ್ಡ ಕೊಡುಗೆಗಳು ಎಂದು ನಾನು ಭಾವಿಸಿದ್ದೇನೆ' ಎಂದು ಕಾರ್ಯಕ್ರಮದಲ್ಲಿ ನಾದೆಲ್ಲ ಅವರು ಇನ್ಫೊಸಿಸ್ ಅಧ್ಯಕ್ಷ ನಂದನ್ ನಿಲೇಕಣಿ ಅವರನ್ನು ಉದ್ದೇಶಿಸಿ ಹೇಳಿದರು.

ರಾಷ್ಟ್ರೀಯ ಪಾವತಿ ನಿಗಮ ಅಭಿವೃದ್ಧಿಪಡಿಸಿರುವ ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ), ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರ ನೀಡುತ್ತಿರುವ ಆಧಾರ್ ಸಂಖ್ಯೆ, ಈಚೆಗೆ ಆರಂಭವಾಗಿರುವ ಒಎನ್‌ಡಿಸಿ ವೇದಿಕೆಯಂಥವುಗಳನ್ನು ಡಿಜಿಟಲ್ ವೇದಿಕೆಗಳ ಮೂಲಕ ಸಾರ್ವಜನಿಕರಿಗೆ ಒದಗಿಸಲಾಗುತ್ತಿರುವ ಸೇವೆಗಳು (ಡಿಪಿಜಿ) ಎಂದು ಗುರುತಿಸಲಾಗಿದೆ.

'ಇಂತಹ ಸೇವೆಗಳಲ್ಲಿ ಹಲವು ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯೂ ಇಲ್ಲ. ಹೀಗಾಗಿ, ಇಂತಹ ಸೇವೆಗಳು ಪ್ರತಿ ವ್ಯಕ್ತಿಯನ್ನೂ ಹೇಗೆ ಸಶಕ್ತಗೊಳಿಸುತ್ತಿವೆ ಎಂಬುದಕ್ಕೆ ನಾವೇ ಒಂದು ಉದಾಹರಣೆ' ಎಂದು ಮೈಕ್ರೊಸಾಫ್ಟ್ ಇಂಡಿಯಾ ಅಧ್ಯಕ್ಷ ಅನಂತ್ ಮಹೇಶ್ವರಿ ಹೇಳಿದರು.



ಮೈಕ್ರೊಸಾಫ್ಟ್ ಸಿಇಒ ಸತ್ಯ ನಾದೆಲ್ಲ ಅವರು ಗುರುವಾರ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

**ಇಸ್ರೊ–ಮೈಕ್ರೊಸಾಫ್ಟ್ ಒಪ್ಪಂದ (ಪಿಟಿಐ):** ಭಾರತದಲ್ಲಿ ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಸ್ಟಾರ್ಟ್‌ಅಪ್‌ಗಳ ಬೆಳವಣಿಗೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮತ್ತು ಮೈಕ್ರೊಸಾಫ್ಟ್ ಗುರುವಾರ ಒಪ್ಪಂದವೊಂದಕ್ಕೆ ಸಹಿ ಹಾಕಿವೆ.

ಮೈಕ್ರೊಸಾಫ್ಟ್ ಫ್ಯೂಚರ್ ರೆಡಿ ಟೆಕ್ನಾಲಜಿ ಸಮ್ಮೇಳನದ ಜೊತೆಯಲ್ಲಿಯೇ ಈ ಒಪ್ಪಂದವೂ ನಡೆದಿದೆ. ಭಾರತದ ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದ ಸಂಶೋಧಕರು, ಉದ್ಯಮಿಗಳ ಮಾರುಕಟ್ಟೆ ಸಾಮರ್ಥ್ಯವನ್ನು ಉನ್ನತೀಕರಿಸುವ ಇಸ್ರೊದ ಮುನ್ನೋಟದ ಫಲವಾಗಿ ಈ ಒಪ್ಪಂದ ಏರ್ಪಟ್ಟಿದೆ.

## ಉಕ್ರೇನ್: 36 ಗಂಟೆ ಕದನ ವಿರಾಮ

**ಮಾಸ್ಕೊ (ರಾಯಿಟರ್ಸ್):** ಉಕ್ರೇನ್‌ನಲ್ಲಿ ಸಾಂಪ್ರದಾಯಿಕ ಕ್ರಿಸ್‌ಮಸ್ ಆಚರಣೆ ನಡೆಯುವ ಹಿನ್ನೆಲೆಯಲ್ಲಿ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಕದನ ವಿರಾಮ ಘೋಷಿಸಿದ್ದಾರೆ ಎಂದು ರಷ್ಯಾ ಸಂಸತ್ 'ಕ್ರೆಮ್ಲಿನ್' ಗುರುವಾರ ತಿಳಿಸಿದೆ.



ಪುಟಿನ್

'ಜ.6ರಂದು ಮಧ್ಯಾಹ್ನ 12 ರಿಂದ 36 ಗಂಟೆಗಳ ಕಾಲ ರಷ್ಯಾ ಯೋಧರು ಧಾರ್ಮಿಕ ವಿಧಿಗಳನ್ನು ಆಚರಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ' ಎಂದು ಕ್ರೆಮ್ಲಿನ್ ಪ್ರಕಟಣೆ ತಿಳಿಸಿದೆ. ರಷ್ಯಾ ಹಾಗೂ ಉಕ್ರೇನ್‌ನಲ್ಲಿ ನೆಲೆಸಿರುವ ಸಂಪ್ರದಾಯಸ್ಥ ಕ್ರೈಸ್ತರು ಜ. 6 ಹಾಗೂ 7ರಂದು ಕ್ರಿಸ್‌ಮಸ್ ಆಚರಿಸುತ್ತಾರೆ.

ಆದರೆ, ರಷ್ಯಾದ ಈ ನಡೆಯು ಸಂಶಯಾಸ್ಪದವಾಗಿದೆ ಎಂದು ಉಕ್ರೇನ್ ಪ್ರತಿಕ್ರಿಯಿಸಿದೆ.

## ಭಾರತ ಮೂಲದ ವ್ಯಕ್ತಿಗೆ ಸಜೆ

**ವಾಷಿಂಗ್ಟನ್ (ಪಿಟಿಐ):** ಕಾಲ್ ಸೆಂಟರ್ ಹಗರಣದಲ್ಲಿ ಭಾಗಿಯಾಗಿದ್ದ ಭಾರತ ಮೂಲದ ವ್ಯಕ್ತಿಗೆ 29 ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಈ ಹಗರಣದಲ್ಲಿ ಮೋಯಿನ್ ಇದ್ರಿಶ್ ಭಾಯ್ ಪಿಂಜಾರ ದೋಷಿ ಎಂದು ನ. 30ರಂದು ಸಾಬೀತಾಗಿತ್ತು. ಈ ಹಗರಣದ ಸಂತ್ರಸ್ತರಿಗೆ ₹5.23 ಕೋಟಿ ನೀಡಬೇಕು ಎಂದು ಕೋರ್ಟ್ ಆದೇಶಿಸಿದೆ.

2019ರ ಡಿಸೆಂಬರ್‌ನಿಂದ 2020ರ ಜುಲೈವರೆಗೆ ಪಿಂಜಾರ ಭಾರತ ಮೂಲದ ಕಾಲ್ ಸೆಂಟರ್‌ನ ಉದ್ಯೋಗಿಯಾಗಿದ್ದ. ಈ ಕಾಲ್‌ಸೆಂಟರ್ ಮೂಲಕ ಕರೆ ಮಾಡುವ ಭಾರತೀಯರು ಅಮೆರಿಕ ಪ್ರಜೆಗಳಿಂದ ಹಣ ವಸೂಲಿ ಮಾಡುತ್ತಿದ್ದರು. ನಕಲಿ ಹೆಸರು ಮತ್ತು ಗುರುತು ಬಳಸಿ ಸಂತ್ರಸ್ತರಿಂದ ಬರುವ ಹಣ ಮತ್ತು ಇತರ ವಸ್ತುಗಳನ್ನು ಪಿಂಜಾರ ತೆಗೆದುಕೊಳ್ಳುತ್ತಿದ್ದರು.

## ಕೋವಿಡ್: ಬೀಜಿಂಗ್‌ನ ಆಸ್ಪತ್ರೆಗಳಲ್ಲಿ ಹಾಸಿಗೆ ಸಿಗದೆ ಸೋಂಕಿತರ ಪರದಾಟ

**ಬೀಜಿಂಗ್(ಎಪಿ):** ನಗರದಲ್ಲಿ ಕೊರೊನಾ ಸೋಂಕು ತೀವ್ರವಾಗಿ ಉಲ್ಬಣಗೊಂಡಿದ್ದು, ಆಸ್ಪತ್ರೆಗಳಲ್ಲಿ ಹಾಸಿಗೆಗಳು ಭರ್ತಿಯಾಗಿವೆ. ಸೋಂಕಿತರಲ್ಲಿ ವಯಸ್ಸಾದವರೇ ಹೆಚ್ಚಾಗಿದ್ದು, ಗಾಲಿಕುರ್ಚಿಗಳಲ್ಲಿ ಕುಳಿತು ಆಮ್ಲಜನಕವನ್ನು ಪಡೆಯುವ ಸ್ಥಿತಿ ಎದುರಾಗಿದೆ.

ನಗರದ ಪೂರ್ವದಲ್ಲಿರುವ ಚುಯ್ಯಂಗ್ಲಿಯು ಆಸ್ಪತ್ರೆ ಸೋಂಕಿತರಿಂದ ತುಂಬಿ ತುಳುಕುತ್ತಿದ್ದು, ಹೊಸದಾಗಿ ದಾಖಲಾಗಲು ಬಂದವರಿಗೆ ಹಾಸಿಗೆಗಳು ಸಿಗುತ್ತಿಲ್ಲ. ನರ್ಸ್‌ಗಳು, ವೈದ್ಯರು ತೀವ್ರ ಒತ್ತಡಕ್ಕೆ ಒಳಗಾಗಿದ್ದು ತುರ್ತು ಪ್ರಕರಣಗಳಿಗೆ ಮಾತ್ರ ಚಿಕಿತ್ಸೆ ನೀಡುತ್ತಿದ್ದಾರೆ.

ಕಳೆದ ತಿಂಗಳು ದೇಶದಾದ್ಯಂತ ಕಟ್ಟುನಿಟ್ಟಿನ ನಿಯಮಗಳನ್ನು ಸಡಲಿಸಲಾಗಿತ್ತು. ಅದಾದ ಬಳಿಕ ಅನಾರೋಗ್ಯಕ್ಕೆ ತುತ್ತಾಗುವವರು ಮತ್ತು ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಹೆಚ್ಚಾಗಿದೆ.

ಚೀನಾದಿಂದ ಬರುವ ಪ್ರಯಾಣಿಕರು 48 ಗಂಟೆಗೆ ಮುಂಚೆ ಮಾಡಿಸಿರುವ ಕೋವಿಡ್ ಪರೀಕ್ಷೆಯ ನೆಗೆಟಿವ್ ವರದಿಯನ್ನು ನೀಡಬೇಕು ಎಂದು ಅಮೆರಿಕ ಹೇಳಿದೆ. ಯುರೋಪಿಯನ್ ಒಕ್ಕೂಟ ಸಹ ಚೀನಾದಿಂದ ಬರುವ ಪ್ರಯಾಣಿಕರಿಗೆ ಕೊರೊನಾ ಸೋಂಕು ಪತ್ತೆ ಪರೀಕ್ಷೆಯ ನೆಗೆಟಿವ್ ವರದಿ ಹೊಂದಿರುವುದನ್ನು ಬೆಂಬಲಿಸಿದೆ.

### ಚೀನಾ–ಹಾಂಗ್‌ಕಾಂಗ್ ನಡುವಿನ ಗಡಿ 8ರಿಂದ ಬಳಕೆಗೆ ಮುಕ್ತ

**ಹಾಂಗ್‌ಕಾಂಗ್ (ಎಪಿ):** ಕೋವಿಡ್‌ನಿಂದಾಗಿ ಸುಮಾರು ಮೂರು ವರ್ಷಗಳಿಂದ ಮುಚ್ಚಿದ ಹಾಂಗ್‌ಕಾಂಗ್‌ನೊಂದಿಗಿನ ಗಡಿಯನ್ನು ಇದೇ 8ರಂದು ಮುಕ್ತಗೊಳಿಸಲಾಗುವುದು ಎಂದು ಚೀನಾ ತಿಳಿಸಿದೆ.

ಎರಡೂ ರಾಷ್ಟ್ರಗಳ ಗಡಿಗಳ ಚೆಕ್‌ಪೋಸ್ಟ್‌ನಲ್ಲಿ ತಡೆ ರಹಿತಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದ್ದು, ಭಾನುವಾರದಿಂದ ಚೀನಾ– ಹಾಂಗ್‌ಕಾಂಗ್ ನಡುವೆ ಸಂಚರಿಸುವ ವಿಮಾನಗಳ ಸಂಖ್ಯೆಗಳ ಸಂಖ್ಯೆ ಹೆಚ್ಚಾಗಲಿದೆ. ವಿಮಾನಗಳಲ್ಲಿ ಪ್ರಯಾಣಿಕರ ಸಂಖ್ಯೆಯ ಮಿತಿಯನ್ನು ರದ್ದು ಮಾಡಲಾಗಿದೆ ಎಂದು ಚೀನಾ ಸರ್ಕಾರ ಹೇಳಿದೆ.

ಈ ಎರಡೂ ಗಡಿಗಳ ನಡುವಿನ ಸಂಚಾರ ಪುನರಾರಂಭದ ಮೊದಲ ಹಂತದಲ್ಲಿ ಕಳೆದ 3 ವರ್ಷಗಳಿಂದ ಮುಚ್ಚಿದ್ದ ಏಳು ಚೆಕ್‌ಪೋಸ್ಟ್‌ಗಳ ಪೈಕಿ ನಾಲ್ಕು ಚೆಕ್‌ಪೋಸ್ಟ್‌ಗಳು ಕಾರ್ಯಾರಂಭ ಮಾಡಲಿವೆ. ಪರಿಸ್ಥಿತಿ ಆಧರಿಸಿ ಮುಂದಿನ ದಿನಗಳಲ್ಲಿ ಬದಲಾವಣೆ ಮಾಡಲಾಗುವುದು ಎಂದು ಸರ್ಕಾರ ತಿಳಿಸಿದೆ.

### ಎನ್.ಆರ್.ಪುರ ರಬ್ಬರ್



| | |
|---|---|
| ಆರ್‌ಎಸ್‌ಎಸ್-4 | ₹135 |
| ಆರ್‌ಎಸ್‌ಎಸ್-5 | ₹127 |
| ಗುಡ್ ಲಾಟ್ | ₹121 |

(ಪ್ರತಿ ಕೆ.ಜಿಗೆ)

### ತೆಂಗು ಧಾರಣೆ (ಸಾವಿರಕ್ಕೆ)




| | |
|---|---|
| ಮಂಗಳೂರು | |
| 1ನೇ ದರ್ಜೆ | ₹16000-20000 |
| 2ನೇ ದರ್ಜೆ | ₹12000-15000 |

## ಸುದ್ದಿ 2 ನಿಮಿಷ

### ಭಾರತ, ಚೀನಾಕ್ಕೆ ಹೆಚ್ಚು ಕಚ್ಚಾ ತೈಲ ರಫ್ತು ಮಾಡಿದ ರಷ್ಯಾ

**ಸಿಂಗಪುರ/ನವದೆಹಲಿ (ರಾಯಿಟರ್ಸ್):** ಆರ್ಕ್ಟಿಕ್ ಪ್ರದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲವನ್ನು ರಷ್ಯಾ ಹೆಚ್ಚಿನ ಪ್ರಮಾಣದಲ್ಲಿ, ಹೆಚ್ಚಿನ ರಿಯಾಯಿತಿ ದರದಲ್ಲಿ ಭಾರತ ಮತ್ತು ಚೀನಾಕ್ಕೆ ರಫ್ತು ಮಾಡುತ್ತಿದೆ. ಹಿಂದಿನ ತಿಂಗಳು ಯುರೋಪ್, ರಷ್ಯಾದ ತೈಲದ ಮೇಲೆ ನಿರ್ಬಂಧ ಹೇರಿದ ನಂತರ ಈ ಬೆಳವಣಿಗೆ ಆಗಿದೆ.

ಆರ್ಕ್ಟಿಕ್ ಪ್ರದೇಶದಲ್ಲಿ ಉತ್ಪಾದನೆಯಾಗುವ ಕಚ್ಚಾ ತೈಲವು ಸಾಮಾನ್ಯವಾಗಿ ಪೂರ್ವದ ದೇಶಗಳಿಗೆ ಪೂರೈಕೆ ಆಗುತ್ತಿರಲಿಲ್ಲ. ಆದರೆ ರಷ್ಯಾ ತೈಲದ ಬೆಲೆಯ ಮೇಲೆ ಐರೋಪ್ಯ ಒಕ್ಕೂಟ, ಜಿ7 ದೇಶಗಳು ಮತ್ತು ಆಸ್ಟ್ರೇಲಿಯಾ ಡಿಸೆಂಬರ್‌ನಲ್ಲಿ ಮಿತಿ ಹೇರಿದ ನಂತರದಲ್ಲಿ ರಷ್ಯಾದ ಈ ಕಚ್ಚಾ ತೈಲವನ್ನು ಬೇರೆ ಮಾರುಕಟ್ಟೆಗಳಿಗೆ ರವಾನಿಸಲಾಗುತ್ತಿದೆ.



'ಹಿಂದೆ ಈ ಕಚ್ಚಾ ತೈಲವು ಯುರೋಪಿಗೆ ರಫ್ತಾಗುತ್ತಿತ್ತು. ಈಗ ಅದು ಬೇರೆಡೆ ಮಾರುಕಟ್ಟೆಯನ್ನು ಕಂಡುಕೊಳ್ಳಬೇಕಿದೆ' ಎಂದು ಸಿಂಗಪುರ ಮೂಲದ ವರ್ತಕರೊಬ್ಬರು ತಿಳಿಸಿದ್ದಾರೆ.

ಆರ್ಕ್ಟಿಕ್ ಕಚ್ಚಾ ತೈಲವು ಭಾರತಕ್ಕೆ ಪೂರೈಕೆಯಾಗುವುದು ಮೇ ನಂತರದಲ್ಲಿ ಹೆಚ್ಚಾಗಿದೆ. ನವೆಂಬರ್‌ನಲ್ಲಿ 66.7 ಲಕ್ಷ ಬ್ಯಾರೆಲ್, ಡಿಸೆಂಬರ್‌ನಲ್ಲಿ 41 ಲಕ್ಷ ಬ್ಯಾರೆಲ್ ತೈಲ ಭಾರತಕ್ಕೆ ಬಂದಿದೆ.

### ವಾಹನ ರಿಟೇಲ್ ಮಾರಾಟ ಏರಿಕೆ

**ನವದೆಹಲಿ (ಪಿಟಿಐ):** ವಾಹನಗಳ ರಿಟೇಲ್ ಮಾರಾಟವು 2022ರಲ್ಲಿ 2.11 ಕೋಟಿಗೆ ತಲುಪಿದ್ದು, 2021ರಲ್ಲಿ ಆಗಿದ್ದ ಮಾರಾಟಕ್ಕೆ ಹೋಲಿಸಿದರೆ ಶೇಕಡ 15.28ರಷ್ಟು ಏರಿಕೆ ಆಗಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಗುರುವಾರ ಹೇಳಿದೆ.

2021ರಲ್ಲಿ ರಿಟೇಲ್ ವಾಹನಗಳ ಮಾರಾಟವು 1.83 ಕೋಟಿ ಆಗಿತ್ತು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಪ್ರಯಾಣಿಕ ವಾಹನಗಳು ಮತ್ತು ಟ್ರ್ಯಾಕ್ಟರ್‌ಗಳು ದಾಖಲೆ ಮಾರಾಟ ಕಂಡಿರುವುದೇ ಉತ್ತಮ ಪ್ರಗತಿಗೆ ಕಾರಣವಾಗಿದೆ ಎಂದು ಹೇಳಿದೆ. ಕೇಂದ್ರ ಸರ್ಕಾರವು ಮೂಲಸೌಕರ್ಯ ಅಭಿವೃದ್ಧಿಗೆ ಉತ್ತೇಜನ ನೀಡುತ್ತಿರುವುದರಿಂದ ಲಘು ವಾಣಿಜ್ಯ ವಾಹನಗಳು, ಎಚ್‌ಸಿವಿ, ಬಸ್‌ಗಳು ಹಾಗೂ ನಿರ್ಮಾಣಕ್ಕೆ ಬಳಸುವ ಉಪಕರಣಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ ಎಂದು ಹೇಳಿದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 250-300 |
| ನಡುಗೋಲು | 450-480 |
| ರಾಶಿ | 480-500 |
| ರಾಶಿ ಉತ್ತಮ | 550-600 |
| ಜರಡಿ | 700-750 |
| ಹೆರಕಿದ್ದು | 1000-1100 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-1000 |
| ಹಸಿರು ಅತಿ ಉತ್ತಮ | 1250-1350 |
| ಕಾಳು ಮೆಣಸು | 490 |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 22500-38000 |
| ಹಳತು | 48000-54500 |
| **ಚಿತ್ರದುರ್ಗ** | |
| ಆಪಿ | 46029-46479 |
| ಬೆಟ್ಟೆ | 33619-34099 |
| ಕೆಂಪುಗೋಟು | 29409-29810 |
| ರಾಶಿ | 45539-45969 |
| **ಕಾರ್ಕಳ** | |
| ಹೊಸತು | 30000-39000 |
| ಹಳತು | 40000-54500 |
| **ಕುಮಟ** | |
| ಚಿಪ್ಪು | 23899-33069 |
| ಕೋಕ | 19100-31099 |
| ಹಳೆಚಾಲಿ | 39799-41599 |
| ಹೊಸಚಾಲಿ | 33599-35899 |
| **ಸಾಗರ** | |
| ಬಿಳಿಗೋಟು | 18289-30110 |
| ಚಾಲಿ | 33110-38701 |
| ಕೋಕ | 20619-33839 |
| ಕೆಂಪುಗೋಟು | 23989-36299 |
| ರಾಶಿ | 40199-46579 |
| ಸಿಪ್ಪೆಗೋಟು | 40199-46579 |
| **ಶಿವಮೊಗ್ಗ** | |
| ಬೆಟ್ಟೆ | 47399-53319 |
| ಗೊರಬಲು | 17001-35069 |
| ರಾಶಿ | 39096-46599 |
| ಸರಕು | 53209-78996 |
| **ಸಿದ್ದಾಪುರ** | |
| ಬಿಳಿಗೋಟು | 29099-33199 |
| ಚಾಲಿ | 37669-41099 |
| ಕೋಕ | 26669-32599 |
| ಕೆಂಪುಗೋಟು | 31869-32699 |
| ರಾಶಿ | 44739-45239 |
| ತಟ್ಟಿಬೆಟ್ಟೆ | 41899-43699 |
| **ಯಲ್ಲಾಪುರ** | |
| ಬಿಳಿಗೋಟು | 22669-33899 |
| ಕೋಕ | 16099-28829 |
| ಹಳೆಚಾಲಿ | 36399-42099 |
| ಹೊಸಚಾಲಿ | 32599-34019 |
| ಕೆಂಪುಗೋಟು | 24899-34001 |
| ರಾಶಿ | 44119-50999 |
| ತಟ್ಟಿಬೆಟ್ಟೆ | 36899-43699 |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| ಮೂಡಿಗೆರೆ | ಹಾಸನ | | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 13650 | 13800 | 13600 | 166.30 ಸೆಂಟ್ಸ್ |
| ಎಸಿ | 6720 | 7000 | 6000 | |
| ಆರ್‌ಪಿ | 8000 | 8200 | 7900 | ಲಂಡನ್ |
| ಆರ್‌ಸಿ | 4550 | 166 on OT | 4200 | 1852 ಡಾಲರ್ಸ್ |

## ಸಂಕ್ಷಿಪ್ತ ಸುದ್ದಿ

### 2024ರಲ್ಲಿ ಬಿಎಸ್‌ಎನ್‌ಎಲ್ 5ಜಿ: ವೈಷ್ಣವ್

**ಭುವನೇಶ್ವರ (ಪಿಟಿಐ):** ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ 2024ರಲ್ಲಿ 5ಜಿ ಸೇವೆಗಳನ್ನು ಆರಂಭಿಸಲಿದೆ ಎಂದು ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ತಿಳಿಸಿದ್ದಾರೆ.

ಒಡಿಶಾದಲ್ಲಿ ಜಿಯೊ ಮತ್ತು ಏರ್‌ಟೆಲ್ ಕಂಪನಿಗಳ 5ಜಿ ಸೇವೆಗಳನ್ನು ಆರಂಭಿಸುವ ಸಂದರ್ಭದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

ಬಿಎಸ್‌ಎನ್‌ಎಲ್ ತನ್ನ 4ಜಿ ಸೇವೆಗಳನ್ನು ಆರಂಭಿಸಲು ಟಿಸಿಎಸ್ ಮತ್ತು ಸಿ–ಡಾಟ್ ನೇತೃತ್ವದ ಒಕ್ಕೂಟದ ಹೆಸರನ್ನು ಅಂತಿಮ ಪಟ್ಟಿಗೆ ಸೇರಿಸಿದೆ. 4ಜಿ ಸೇವೆಗಳು ಆರಂಭಗೊಂಡ ಒಂದು ವರ್ಷದ ನಂತರ ಅದನ್ನು 5ಜಿ ಸೇವೆಗಳಿಗೆ ಮೇಲ್ದರ್ಜೆಗೆ ಏರಿಸಲಿದೆ.

**ವೊಡಾಫೋನ್‌ಗೆ ಬಂಡವಾಳ, ಚರ್ಚೆ:** ಸಾಲದ ಸುಳಿಗೆ ಸಿಲುಕಿರುವ ವೊಡಾಫೋನ್ ಐಡಿಯಾ ಕಂಪನಿಗೆ ಬಂಡವಾಳ ಒದಗಿಸುವ ಕುರಿತು ಚರ್ಚೆ ನಡೆಸಲಾಗುತ್ತಿದೆ ಎಂದು ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಕಂಪನಿಗೆ ಎಷ್ಟು ಮೊತ್ತದ ಅಗತ್ಯ ಇದೆ, ಯಾರು ಹೂಡಿಕೆ ಮಾಡಲಿದ್ದಾರೆ ಎನ್ನುವ ಎಲ್ಲಾ ಅಂಶಗಳ ಕುರಿತು ಚರ್ಚೆ ನಡೆಯುತ್ತಿದೆ ಎಂದು ಹೇಳಿದ್ದಾರೆ.

### ಎಂಟು ಐಎಸ್ ಉಗ್ರರ ಹತ್ಯೆ

**ಇಸ್ಲಾಮಾಬಾದ್(ಎಪಿ):** 'ಕಾಬೂಲ್‌ನಲ್ಲಿ ನಡೆದ ಪ್ರತ್ಯೇಕ ದಾಳಿಯಲ್ಲಿ ಇಸ್ಲಾಮಿಕ್ ಸ್ಟೇಟ್‌ನ (ಐಎಸ್) ಎಂಟು ಉಗ್ರರು ಹತ್ಯೆಯಾಗಿದ್ದು, ಇತರೆ ಒಂಬತ್ತು ಮಂದಿಯನ್ನು ಬಂಧಿಸಲಾಗಿದೆ' ಎಂದು ಅಫ್ಗಾನಿಸ್ತಾನದ ತಾಲಿಬಾನ್ ಸರ್ಕಾರದ ಹಿರಿಯ ವಕ್ತಾರರೊಬ್ಬರು ಗುರುವಾರ ತಿಳಿಸಿದ್ದಾರೆ.

'ಕಾಬೂಲ್‌ನ ಲಾಂಗನ್ ಹೋಟೆಲ್, ಪಾಕಿಸ್ತಾನದ ರಾಯಭಾರ ಕಚೇರಿ ಹಾಗೂ ಮಿಲಿಟರಿ ವಿಮಾನ ನಿಲ್ದಾಣಗಳಲ್ಲಿ ಈಚೆಗೆ ದಾಳಿ ನಡೆದ ಹಿನ್ನೆಲೆಯಲ್ಲಿ ಐಎಸ್ ಉಗ್ರರ ವಿರುದ್ಧ ರಾಜಧಾನಿ ಹಾಗೂ ಪಶ್ಚಿಮ ನಿಮ್ರೋಜ್ ಪ್ರಾಂತ್ಯದಲ್ಲಿ ಬುಧವಾರ ಪ್ರತ್ಯೇಕ ದಾಳಿ ನಡೆಸಲಾಯಿತು' ಎಂದು ತಾಲಿಬಾನ್ ಸರ್ಕಾರದ ವಕ್ತಾರ ಜಬಿವುಲ್ಲಾ ಮುಜಾಹಿದ್ ಹೇಳಿದರು.

### 18 ಸಾವಿರ ಸಿಬ್ಬಂದಿ ಮನೆಗೆ: ಅಮೆಜಾನ್

**ವಾಷಿಂಗ್ಟನ್ (ಎಎಫ್‌ಪಿ):** ಅಮೆಜಾನ್ ಕಂಪನಿಯು ತನ್ನ ನೌಕರರಲ್ಲಿ ಒಟ್ಟು 18 ಸಾವಿರ ಜನರನ್ನು ಕೆಲಸದಿಂದ ತೆಗೆಯುವುದಾಗಿ ಬುಧವಾರ ಹೇಳಿದೆ. ಈ ತೀರ್ಮಾನಕ್ಕೆ ಅಮೆಜಾನ್, ಸಾಂಕ್ರಾಮಿಕದ ಅವಧಿಯಲ್ಲಿ ನೇಮಕಾತಿ ಹೆಚ್ಚಾಗಿತ್ತು ಹಾಗೂ ಈಗ ಆರ್ಥಿಕ ಪರಿಸ್ಥಿತಿಯು ಅನಿಶ್ಚಿತತೆಯಿಂದ ಕೂಡಿದೆ ಎಂಬ ಕಾರಣ ನೀಡಿದೆ.

ಅಮೆಜಾನ್ ಸಮೂಹ ನಿರ್ವಹಣೆ ಮಾಡುತ್ತಿರುವ ಮಳಿಗೆಗಳು ಹಾಗೂ ಮಾನವ ಸಂಪನ್ಮೂಲ ವಿಭಾಗದಲ್ಲಿ ಹೆಚ್ಚಿನ ಉದ್ಯೋಗ ಕಡಿತ ಆಗಲಿದೆ ಎಂದು ಕಂಪನಿಯ ಸಿಇಒ ಆ್ಯಂಡಿ ಜಸ್ಸಿ ಹೇಳಿದ್ದಾರೆ.

### ಇಮ್ರಾನ್‌ಖಾನ್ ವಜಾಗೊಳಿಸದಂತೆ ಕೋರ್ಟ್ ತಡೆ

**ಲಾಹೋರ್ (ಪಿಟಿಐ):** ಪಾಕಿಸ್ತಾನ ತೆಹ್ರಿಕ್ ಇ–ಇನ್ಸಾಫ್ (ಪಿಟಿಐ) ಪಕ್ಷದ ಅಧ್ಯಕ್ಷ ಸ್ಥಾನದಿಂದ ಇಮ್ರಾನ್ ಖಾನ್ ಅವರನ್ನು ವಜಾಗೊಳಿಸದಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಗುರುವಾರ ತಡೆ ನೀಡಿದೆ.

ತೋಶಾಖಾನಾ (ರಾಷ್ಟ್ರೀಯ ಠೇವಣಿ) ಪ್ರಕರಣದ ತೀರ್ಪಿನ ನಂತರ ಖಾನ್ ಅವರನ್ನು ತಮ್ಮ ಪಕ್ಷದ ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕುವ ಪ್ರಕ್ರಿಯೆಯನ್ನು ಆಯೋಗ ಕಳೆದ ತಿಂಗಳು ಪ್ರಾರಂಭಿಸಿತ್ತು.

### ಮುಂಬೈ ಧಾರಣೆ

**ಶೇಂಗಾ**

5–1–2023

| | |
|---|---|
| ಜಾವಾ 70/80(ಹೊಸ) | 12150-12200 |
| ಜಾವಾ 80/90(ಹೊಸ) | 11150-11200 |
| ದಪ್ಪ ಮಧ್ಯಪ್ರದೇಶ(ಹೊಸ) | 10500-10600 |
| ದಪ್ಪ ಗುಜರಾತ್(ಹೊಸ) | 11600-11700 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1640 (1630) |
| ಒಂದು ವಾರದ ಡೆಲಿವರಿ | 1630 (1625) |
| ಸೋಯಾ ಕಚ್ಚಾ | 1210 (---) |
| ಪಾಮ್ ವಾರದ ಡೆಲಿವರಿ | 960 (963) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1200 (1220) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
55,550 (55,900)
ಬೆಳ್ಳಿ ಕೆ.ಜಿ 67,650 (69,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

# ದಸುನ್, ಮೆಂಡಿಸ್ ಮಿಂಚು

## ಟಿ20 ಕ್ರಿಕೆಟ್: ಶ್ರೀಲಂಕಾ ಜಯಭೇರಿ; ಅಕ್ಷರ್ ಪಟೇಲ್ ಹೋರಾಟ ವ್ಯರ್ಥ

ಪುಣೆ (ಪಿಟಿಐ): ದಸುನ್ ಶನಕಾ ಮತ್ತು ಕುಶಾಲ ಮೆಂಡಿಸ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ಶ್ರೀಲಂಕಾ ತಂಡವು ಗುರುವಾರ ಇಲ್ಲಿ ನಡೆದ ಎರಡನೇ ಟಿ20 ಪಂದ್ಯದಲ್ಲಿ ಭಾರತವನ್ನು 16 ರನ್‌ಗಳಿಂದ ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ ತಂಡ, ದಸುನ್ (ಅಜೇಯ 56) ಅವರ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 206 ರನ್ ಗಳಿಸಿತು. ಭಾರತ ತಂಡ ನಿಗದಿತ ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 190 ರನ್ ಕಲೆಹಾಕಿತು. ಮೂರು ಪಂದ್ಯಗಳ ಸರಣಿ 1–1 ರಲ್ಲಿ ಸಮಬಲದಲ್ಲಿದ್ದು, ರಾಜ್‌ಕೋಟ್‌ನಲ್ಲಿ ಶನಿವಾರ ನಡೆಯಲಿರುವ ಅಂತಿಮ ಪಂದ್ಯ ನಿರ್ಣಾಯಕ ಎನಿಸಿದೆ.

ಸವಾಲಿನ ಗುರಿ ಬೆನ್ನಟ್ಟಿದ ಆತಿಥೇಯ ತಂಡ ಆರಂಭಿಕ ಆಘಾತಕ್ಕೆ ಒಳಗಾಯಿತು. ಇಶಾನ್ ಕಿಶನ್ (2), ಶುಭಮನ್ ಗಿಲ್ (5) ಮತ್ತು ರಾಹುಲ್ ತ್ರಿಪಾಠಿ (5) ಬೇಗನೇ ಪೆವಿಲಿಯನ್ ಸೇರಿದರು. ನಾಯಕ ಹಾರ್ದಿಕ್ ಪಾಂಡ್ಯ ಮತ್ತು ದೀಪಕ್ ಹೂಡಾ ಕೂಡಾ ವಿಫಲರಾದರು. ಸ್ಕೋರ್ 57 ಆಗುವಷ್ಟರಲ್ಲಿ ಐದು ವಿಕೆಟ್‌ಗಳು ಬಿದ್ದವು.

ಸೂರ್ಯಕುಮಾರ್ ಯಾದವ್ (51 ರನ್, 36 ಎ., 4X3, 6X3) ಮತ್ತು ಅಕ್ಷರ್ ಪಟೇಲ್ (65ರನ್, 31 ಎ., 4X3, 6X6) ಅವರು ಮರುಹೋರಾಟ ನಡೆಸಿ ಪಂದ್ಯಕ್ಕೆ ರೋಚಕತೆ ತುಂಬಿದರು. ಆರನೇ ವಿಕೆಟ್‌ಗೆ 91 ರನ್ ಸೇರಿಸಿದರು. ಸೂರ್ಯಕುಮಾರ್ ಔಟಾದ ಬಳಿಕ ಬಂದ ಶಿವಂ ಮಾವಿ (26 ರನ್, 15 ಎ.) ಅಕ್ಷರ್‌ಗೆ ತಕ್ಕ ಸಾಥ್ ನೀಡಿದರೂ ಭಾರತಕ್ಕೆ ಗೆಲುವು ದಕ್ಕಲಿಲ್ಲ.




ಶ್ರೀಲಂಕಾ ತಂಡದ ದಸುನ್ ಶನಕಾ (ಎಡ). ಭಾರತದ ಅಕ್ಷರ್ ಪಟೇಲ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರಗಳು

**ಉತ್ತಮ ಆರಂಭ:** ಇದಕ್ಕೂ ಮುನ್ನ ಆರಂಭಿಕ ಜೋಡಿ ಫಥುಮ್ ನಿಸಾಂಕ (33; 35ಎ) ಮತ್ತು ಕುಶಾಲ ಮೆಂಡಿಸ್ (52; 31ಎ) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿ ಲಂಕಾ ತಂಡಕ್ಕೆ ಉತ್ತಮ ಆರಂಭ ನೀಡಿದರು. ನಂತರದ 58 ರನ್‌ಗಳು ತಂಡದ ಖಾತೆ ಸೇರುವಷ್ಟರಲ್ಲಿ ಆರು ವಿಕೆಟ್‌ಗಳು ಪತನವಾದವು. ಸ್ಪಿನ್ನರ್ ಅಕ್ಷರ್ ಪಟೇಲ್ (24ಕ್ಕೆ2) ಮತ್ತು ಉಮ್ರಾನ್ ಮಲೀಕ್ (48ಕ್ಕೆ3) ಅವರು ಲಂಕಾ ತಂಡದ ರನ್ ಗಳಿಕೆಯನ್ನು ನಿಯಂತ್ರಿಸಿದರು.

ಆದರೆ, ಕೊನೆಯ 4 ಓವರ್‌ಗಳಲ್ಲಿ ಪಂದ್ಯದ ಚಿತ್ರಣವೇ ಬದಲಾಗಿ ಹೋಯಿತು. ದಸುನ್ ಅಬ್ಬರಕ್ಕೆ 27 ಎಸೆತಗಳಲ್ಲಿ 68 ರನ್‌ಗಳು ಸೇರಿದವು. ದಸುನ್ ಅರ್ಧ ಡಜನ್ ಸಿಕ್ಸರ್ ಸಿಡಿಸಿದರು. ಎರಡು ಬೌಂಡರಿಗಳನ್ನೂ ಬಾರಿಸಿದರು. 254.55ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಭಾರತ ತಂಡದ ನಾಯಕ ಹಾರ್ದಿಕ್ ಯೋಜನೆಗಳು ತಲೆಕೆಳಗಾದವು. ಅವರೂ ಸೇರಿದಂತೆ ಆರು ಬೌಲರ್‌ಗಳ ಆಟ ನಡೆಯಲಿಲ್ಲ. ಮೊದಲ ಪಂದ್ಯದಲ್ಲಿ ನಾಲ್ಕು ವಿಕೆಟ್ ಗಳಿಸಿದ್ದ ಶಿವಂ ಮಾವಿ ಇಲ್ಲಿ ವಿಫಲರಾದರು. ಅಲ್ಲದೇ ನಾಲ್ಕು ಓವರ್‌ಗಳಲ್ಲಿ 53 ರನ್ ಬಿಟ್ಟುಕೊಟ್ಟು ದುಬಾರಿಯಾದರು. ಅರ್ಷದೀಪ್ ಕೇವಲ ಎರಡು ಓವರ್‌ಗಳಲ್ಲಿ 37 ರನ್ ನೀಡಿದರು. ಅಲ್ಲದೇ ಐದು ಬಾರಿ ನೋಬಾಲ್ ಮಾಡಿದರು.

**ಸಂಕ್ಷಿಪ್ತ ಸ್ಕೋರು:** ಶ್ರೀಲಂಕಾ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 206 (ಪಥುಮ್ ನಿಸಾಂಕ 33, ಕುಶಾಲ ಮೆಂಡಿಸ್ 52, ಅಸಲಂಕಾ 37, ದಸುನ್ ಶನಕಾ ಅಜೇಯ 56, ಕರುಣಾರತ್ನೆ ಔಟಾಗದೆ 11, ಉಮ್ರಾನ್ ಮಲಿಕ್ 48ಕ್ಕೆ3, ಅಕ್ಷರ್ ಪಟೇಲ್ 24ಕ್ಕೆ2)
**ಭಾರತ:** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 190 (ಸೂರ್ಯಕುಮಾರ್ ಯಾದವ್ 51, ಹಾರ್ದಿಕ್ ಪಾಂಡ್ಯ 12, ದೀಪಕ್ ಹೂಡಾ 9, ಅಕ್ಷರ್ ಪಟೇಲ್ 65, ಶಿವಂ ಮಾವಿ 26, ದಿಲ್ಶನ್ ಮದುಶಂಕಾ 45ಕ್ಕೆ 2, ಕಸುನ್ ರಜಿತ 22ಕ್ಕೆ 2, ದಸುನ್ ಶನಕಾ 4ಕ್ಕೆ 2) ಫಲಿತಾಂಶ: ಶ್ರೀಲಂಕಾಕ್ಕೆ 16 ರನ್ ಗೆಲುವು

# ಟೆಸ್ಟ್: ಉಸ್ಮಾನ್ ಖ್ವಾಜಾ, ಸ್ಮಿತ್ ಶತಕ

ಸಿಡ್ನಿ (ಎಎಫ್‌ಪಿ): ದ್ವಿಶತಕದತ್ತ ಹೆಜ್ಜೆಯಿಟ್ಟಿರುವ ಉಸ್ಮಾನ್ ಖ್ವಾಜಾ (ಬ್ಯಾಟಿಂಗ್ 195) ಮತ್ತು ಸ್ಟೀವ್ ಸ್ಮಿತ್ (104) ಅವರ ಶತಕದ ನೆರವಿನಿಂದ ಆಸ್ಟ್ರೇಲಿಯಾ ತಂಡ ದಕ್ಷಿಣ ಆಫ್ರಿಕಾ ವಿರುದ್ಧದ ಮೂರನೇ ಕ್ರಿಕೆಟ್ ಟೆಸ್ಟ್‌ನಲ್ಲಿ ಉತ್ತಮ ಮೊತ್ತ ಪೇರಿಸಿದೆ.

ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ (ಎಸ್‌ಸಿಜಿ) ನಡೆಯುತ್ತಿರುವ ಪಂದ್ಯದ ಎರಡನೇ ದಿನದಾಟದ ಅಂತ್ಯಕ್ಕೆ ಆತಿಥೇಯ ತಂಡ 131 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 475 ರನ್ ಗಳಿಸಿದೆ.

ಪ್ಯಾಟ್ ಕಮಿನ್ಸ್ ಬಳಗ 2 ವಿಕೆಟ್‌ಗೆ 147 ರನ್‌ಗಳಿಂದ ಗುರುವಾರ ಆಟ ಮುಂದುವರಿಸಿತ್ತು. ಖ್ವಾಜಾ 54 ರನ್‌ಗಳಿಂದ ಇನಿಂಗ್ಸ್ ಮುಂದುವರಿಸಿದ್ದರು. ಸ್ಮಿತ್– ಖ್ವಾಜಾ ಮೂರನೇ ವಿಕೆಟ್‌ಗೆ 209 ರನ್ ಸೇರಿಸಿದರು.

368 ಎಸೆತಗಳನ್ನು ಎದುರಿಸಿರುವ ಖ್ವಾಜಾ 19 ಬೌಂಡರಿ ಹಾಗೂ ಒಂದು ಸಿಕ್ಸರ್ ಹೊಡೆದರು. ಎಸ್‌ಸಿಜಿಯಲ್ಲಿ ಸತತ ಮೂರನೇ ಶತಕ ಸಾಧನೆಯನ್ನು ಈ ಆರಂಭಿಕ ಬ್ಯಾಟರ್ ಮಾಡಿದರು. ಈ ಹಿಂದೆ ಇಂಗ್ಲೆಂಡ್ ವಿರುದ್ಧ ಅವರು ಇಲ್ಲಿ ಎರಡು ಶತಕ ಗಳಿಸಿದ್ದರು.



ಶತಕ ಗಳಿಸಿದ ಉಸ್ಮಾನ್ ಖ್ವಾಜಾ ಸಂಭ್ರಮ –ಎಎಫ್‌ಪಿ ಚಿತ್ರ

### ಬ್ರಾಡ್ಮನ್ ಹಿಂದಿಕ್ಕಿದ ಸ್ಮಿತ್

ಸ್ಟೀವ್ ಸ್ಮಿತ್ ಟೆಸ್ಟ್‌ನಲ್ಲಿ 30ನೇ ಶತಕ ಗಳಿಸಿದರು. ಈ ಮೂಲಕ ಡಾನ್ ಬ್ರಾಡ್ಮನ್ (29 ಶತಕ) ಅವರನ್ನು ಹಿಂದಿಕ್ಕಿದರು. ಆಸ್ಟ್ರೇಲಿಯಾದ ಬ್ಯಾಟರ್‌ಗಳ ಪೈಕಿ ರಿಕಿ ಪಾಂಟಿಂಗ್ (41) ಮತ್ತು ಸ್ಟೀವ್ ವಾ (32) ಮಾತ್ರ ಸ್ಮಿತ್‌ಗಿಂತ ಹೆಚ್ಚು ಶತಕ ಗಳಿಸಿದ್ದಾರೆ.

ಸ್ಮಿತ್ (8,647 ರನ್) ಅವರು ಇದೇ ವೇಳೆ ಮೈಕಲ್ ಕ್ಲಾರ್ಕ್ ಅವರನ್ನು ಹಿಂದಿಕ್ಕಿ ಟೆಸ್ಟ್‌ನಲ್ಲಿ ಅತಿಹೆಚ್ಚು ರನ್ ಗಳಿಸಿದ ಆಸ್ಟ್ರೇಲಿಯಾದ ಬ್ಯಾಟರ್‌ಗಳ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿದರು. ಪಾಂಟಿಂಗ್, ಆ್ಯಲನ್ ಬಾರ್ಡರ್ ಮತ್ತು ಸ್ಟೀವ್ ವಾ ಅವರು ಸ್ಮಿತ್‌ಗಿಂತ ಮುಂದಿದ್ದಾರೆ.

ಟೆಸ್ಟ್‌ನಲ್ಲಿ ಖ್ವಾಜಾ ಅವರ ವೈಯಕ್ತಿಕ ಶ್ರೇಷ್ಠ ಸ್ಕೋರ್ ಇದು. 2015 ರಲ್ಲಿ ನ್ಯೂಜಿಲೆಂಡ್ ವಿರುದ್ಧ ಬ್ರಿಸ್ಬೇನ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ 174 ರನ್ ಗಳಿಸಿದ್ದು ಈವರೆಗಿನ ಉತ್ತಮ ಸಾಧನೆಯಾಗಿತ್ತು. ಟ್ರಾವಿಸ್ ಹೆಡ್ (70 ರನ್, 59 ಎ.) ಅವರು ಬಿರುಸಿನ ಆಟವಾಡಿ ತಂಡದ ಮೊತ್ತ ಹಿಗ್ಗಿಸಿದರು. ಖ್ವಾಜಾ ಮತ್ತು ಹೆಡ್ ನಾಲ್ಕನೇ ವಿಕೆಟ್‌ಗೆ 112 ರನ್ ಸೇರಿಸಿದರು.

**ಸಂಕ್ಷಿಪ್ತ ಸ್ಕೋರ್:** ಮೊದಲ ಇನಿಂಗ್ಸ್ ಆಸ್ಟ್ರೇಲಿಯಾ 131 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 475 (ಉಸ್ಮಾನ್ ಖ್ವಾಜಾ ಬ್ಯಾಟಿಂಗ್ 195, ಮಾರ್ನಸ್ ಲಾಬುಷೇನ್ 79, ಸ್ಟೀವ್ ಸ್ಮಿತ್ 104, ಟ್ರ್ಯಾವಿಸ್ ಹೆಡ್ 70, ಎನ್ರಿಚ್ ನಾರ್ಕಿಯಾ 55ಕ್ಕೆ 2)

# ಐಪಿಎಲ್‌ಗೆ ಲಭ್ಯ: ಗ್ರೀನ್ ಸ್ಪಷ್ಟನೆ

ಸಿಡ್ನಿ (ಪಿಟಿಐ): ಈ ಬಾರಿಯ ಐಪಿಎಲ್‌ನಲ್ಲಿ ಆಡಲು ಲಭ್ಯವಿರುವುದಾಗಿ ಆಸ್ಟ್ರೇಲಿಯಾದ ಆಲ್‌ರೌಂಡರ್ ಕ್ಯಾಮರಾನ್ ಗ್ರೀನ್ ಸ್ಪಷ್ಟಪಡಿಸಿದ್ದಾರೆ.

ಐಪಿಎಲ್ ಟೂರ್ನಿಯ ಆರಂಭದ ಕೆಲವು ಪಂದ್ಯಗಳಲ್ಲಿ ಗ್ರೀನ್ ಬೌಲಿಂಗ್ ಮಾಡುವುದಿಲ್ಲ. ಬ್ಯಾಟರ್‌ನ ಜವಾಬ್ದಾರಿ ಮಾತ್ರ ನಿಭಾಯಿಸಲಿದ್ದಾರೆ ಎಂದು ವರದಿಯಾಗಿತ್ತು. 'ಅಂತಹ ವರದಿಗಳು ಕೇವಲ ಊಹಾಪೋಹ ಮಾತ್ರ' ಎಂದು ಗ್ರೀನ್ ತಳ್ಳಿಹಾಕಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದ ವೇಳೆ ಗ್ರೀನ್ ಗಾಯಗೊಂಡಿದ್ದರು. ಎನ್ರಿಚ್ ನಾರ್ಕಿಯಾ ಅವರ ಬೌಲಿಂಗ್‌ನಲ್ಲಿ ಚೆಂಡು ಗ್ರೀನ್ ಕೈಬೆರಳಿಗೆ ಬಡಿದಿತ್ತು. ಇದರಿಂದ ಮೂರನೇ ಟೆಸ್ಟ್‌ನಲ್ಲಿ ಅವರು ಆಡುತ್ತಿಲ್ಲ.

ಗ್ರೀನ್ ಅವರನ್ನು ಮಿನಿ ಹರಾಜಿನಲ್ಲಿ ಮುಂಬೈ ಇಂಡಿಯನ್ಸ್ ತಂಡ ₹ 17.50 ಕೋಟಿ ನೀಡಿ ತನ್ನದಾಗಿಸಿಕೊಂಡಿತ್ತು.

'ಕಳೆದ ಕೆಲ ದಿನಗಳಿಂದ ಅಂತಹ ಸುದ್ದಿ ಹರಿದಾಡುತ್ತಿದೆ. ಅದು ಎಲ್ಲಿಂದ ಬಂತು ಎಂಬುದು ನನಗೂ ಗೊತ್ತಿಲ್ಲ. ಐಪಿಎಲ್‌ನಲ್ಲಿ ಆಡಲು ನಾನು ಶೇ 100 ರಷ್ಟು ಲಭ್ಯ' ಎಂದು ಗ್ರೀನ್ ಹೇಳಿದ್ದಾರೆ.

ಫೆ.9 ರಂದು ಆರಂಭವಾಗುವ ಬಾರ್ಡರ್– ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ವೇಳೆಗೆ ಫಿಟ್‌ನೆಸ್ ಮರಳಿ ಪಡೆಯುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

## ಹಾಕಿ: ಬಿಸಿವೈಎ ವೈಲ್ಡ್‌ಬೋರ್ ಪಂದ್ಯ ಡ್ರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿವೈಎ 'ಎ' ಮತ್ತು ಟೀಮ್ ವೈಲ್ಡ್‌ಬೋರ್ ತಂಡಗಳ ನಡುವಣ ಕೆಎಸ್‌ಎಚ್‌ಎ 'ಬಿ' ಡಿವಿಷನ್ ಹಾಕಿ ಲೀಗ್‌ನ ಪಂದ್ಯ 3–3 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು.

ಗುರುವಾರ ನಡೆದ ಪಂದ್ಯದಲ್ಲಿ ಲಕ್ಷೀಕಾಂತ್ (22ನೇ ನಿ.), ಎಸ್. ಪವನ್ (32) ಮತ್ತು ಗೋವಿಂದ ನಾಗ್ (40) ಅವರು ಬಿಸಿವೈಎ ಪರ ಗೋಲು ಗಳಿಸಿದರು.

ವೈಲ್ಡ್‌ಬೋರ್ ತಂಡದ ವಿ.ಪಿ. ಪೂವಣ್ಣ (25 ಹಾಗೂ 57) ಎರಡು ಗೋಲುಗಳನ್ನು ಗಳಿಸಿದರೆ, ಮತ್ತೊಂದು ಗೋಲನ್ನು ಪೆಮ್ಮಯ್ಯ (34) ತಂದಿತ್ತರು.

ಬಳ್ಳಾರಿ ಹಾಕಿ ಕ್ಲಬ್– ಸಂದೀಪ್ ಹಾಕಿ ಕ್ಲಬ್ ತಂಡಗಳ ನಡುವಣ ಪಂದ್ಯ 4–4 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು.

ಬಳ್ಳಾರಿ ತಂಡದ ಪರ ಕಾರ್ತಿಕ್ (5 ಮತ್ತು 29), ಚಂದು (12), ಸುಮಂತ್ (22) ಹಾಗೂ ಸಂದೀಪ್ ಕ್ಲಬ್ ಪರ ಶ್ರೇಯಸ್ (8 ಮತ್ತು 38), ಟಿ.ವಿ.ಪ್ರತೀಕ್ (32), ಸುಂದರ್ (41) ಚೆಂಡನ್ನು ಗುರಿ ಸೇರಿಸಿದರು.

ಶುಕ್ರವಾರ ನಡೆಯುವ ಪಂದ್ಯಗಳಲ್ಲಿ ಬಳ್ಳಾರಿ ಹಾಕಿ ಕ್ಲಬ್– ಟೀಮ್ ವೈಲ್ಡ್‌ಬೋರ್ ಹಾಗೂ ಸಂದೀಪ್ ಹಾಕಿ ಕ್ಲಬ್– ಬಿಸಿವೈಎ 'ಎ' ತಂಡಗಳು ಎದುರಾಗಲಿವೆ.

## ಕಬಡ್ಡಿ: ವೆಸ್ಟರ್ನ್ ರೈಲ್ವೆ ತಂಡಕ್ಕೆ ಪ್ರಶಸ್ತಿ

ಮಹಾಲಿಂಗಪುರ (ಬಾಗಲಕೋಟೆ): ಮುಂಬೈನ ವೆಸ್ಟರ್ನ್ ರೈಲ್ವೆ ತಂಡವು ಪಟ್ಟಣದ ಕೆಎಲ್‌ಇ ಸಂಸ್ಥೆಯ ಮೈದಾನದಲ್ಲಿ ಸಿದ್ದು ಕೊಣ್ಣೂರ ಸ್ಪೋರ್ಟ್ಸ್ ಕ್ಲಬ್‌ನಿಂದ ನಡೆದ ಅಖಿಲ ಭಾರತ 'ಎ' ಗ್ರೇಡ್ ಆಹ್ವಾನಿತ ಮಹಿಳಾ ಕಬಡ್ಡಿ ಟೂರ್ನಿಯ ಪ್ರಶಸ್ತಿಗೆ ಮುತ್ತಿಕ್ಕಿತು.

ಬುಧವಾರ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ವೆಸ್ಟರ್ನ್ ರೈಲ್ವೆ ತಂಡವು 26–21ರಿಂದ ಪಾಲಂ ದೆಹಲಿ ತಂಡವನ್ನು ಮಣಿಸಿ ಟ್ರೋಫಿ ಎತ್ತಿ ಹಿಡಿಯಿತು. ಇದರೊಂದಿಗೆ ₹1.50 ಲಕ್ಷ ನಗದು ಬಹುಮಾನ ಪಡೆಯಿತು.

ದ್ವಿತೀಯ ಸ್ಥಾನ ಪಡೆದ ಪಾಲಂ ದೆಹಲಿ ತಂಡಕ್ಕೆ ₹1 ಲಕ್ಷ ನಗದು ಬಹುಮಾನ ಹಾಗೂ ಟ್ರೋಫಿ ತನ್ನದಾಗಿಸಿಕೊಂಡಿತು.

### ಮುಂಬೈ ರೇಸ್

**ಕೊಯುರ್ ಡಿ ಲಯನ್ ಗೆಲ್ಲುವ ನಿರೀಕ್ಷೆ**

ಸರ್ಜಿಯಂಟ್ ಅಟ್ ಆರ್ಮ್ಸ್ ಟ್ರೋಫಿ ಶುಕ್ರವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕೊಯುರ್ ಡಿ ಲಯನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:30ಕ್ಕೆ ಪ್ರಾರಂಭವಾಗಲಿರುವ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಬ್ರೇವ್ ಬ್ಯೂಟಿ 8, ಜೆರುಸೇಲಂ 10, ಜಿಯೋಗ್ರಾಫಿಕ್ 7
2ನೇ ರೇಸ್: ವರ್ಡ್ಸ್ ಸ್ಮಿತ್ 2, ಚಾಮೋನಿಕ್ಸ್ 1, ಆ ಬೆಲ್ಲಾ 3
3ನೇ ರೇಸ್: ಡ್ರಾಗನ್‌ಲಾರ್ಡ್ 7, ಚಾರ್ಲೀ 9, ಗೋಲ್ಡನ್ ನೀಲ್ 2
4ನೇ ರೇಸ್: ಇಂಟೆನ್ಸ್ ಬಿಲೀಫ್ 4, ಮಾರ್ಲ್‌ಬೋರೊ ಮ್ಯಾನ್ 5, ಮೊಮೆಂಟ್ ಆಫ್ ಮ್ಯಾಡ್‌ನೆಸ್ 2
5ನೇ ರೇಸ್: ಕೊಯುರ್ ಡಿ ಲಯನ್ 7, ಫ್ಲೈಯಿಂಗ್ ಸ್ಕಾಟ್ಸ್ ಮ್ಯಾನ್ 8, ರ‍್ಯಾಂಬ್ಲರ್ 6
6ನೇ ರೇಸ್: ವೈಕಿಕಿ 13, ಬಿಲೀವ್ 2, ಬಿಗ್ ರೆಡ್ 3
7ನೇ ರೇಸ್: ಹಂಟಿಂಗ್ ಗಾಡೆಸ್ 1, ಚ್ಯಾಂಪೇನ್ ಸ್ಟೈಲ್ 9, ಮೊಜೊ 2
8ನೇ ರೇಸ್: ಡ್ರಾಗನ್‌ನೆಸ್ 2, ರೋಡ್ರಿಗೊ 3, ನಾರ್ಥರ್ನ್ ಸಿಂಗರ್ 10
9ನೇ ರೇಸ್: ಔಟ್‌ಲ್ಯಾಂಡರ್ 6, ಡಿವೈನ್ ಥಾಟ್ಸ್ 4, ಇಮ್‌ಪರ್ಮನೆನ್ಸ್ 8

**ಉತ್ತಮ ಬೆಟ್: ಇಂಟೆನ್ಸ್ ಬಿಲೀಫ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ | 3ನೇ ಟ್ರಿಬಲ್ |
|---|---|---|---|
| 4,5,6,7,8,9 | 3,4,5 | 6,7,8 | 7,8,9 |

## ಹಾಕಿ: ಬಿರ್ಸಾ ಮುಂಡಾ ಕ್ರೀಡಾಂಗಣ ಉದ್ಘಾಟಿಸಿದ ಒಡಿಶಾ ಸಿಎಂ

# ಭಾರತ ಗೆದ್ದರೆ ಆಟಗಾರರಿಗೆ ತಲಾ ₹ 1 ಕೋಟಿ

ಭುವನೇಶ್ವರ/ ರೂರ್ಕೆಲಾ (ಪಿಟಿಐ): ಪುರುಷರ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಭಾರತ ಚಿನ್ನದ ಪದಕ ಗೆದ್ದರೆ ತಂಡದ ಆಟಗಾರರಿಗೆ ತಲಾ ₹1 ಕೋಟಿ ನಗದು ಬಹುಮಾನ ನೀಡಲಾಗುವುದು ಎಂದು ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಘೋಷಿಸಿದ್ದಾರೆ.

ದೇಶದ ಅತಿದೊಡ್ಡ ಹಾಕಿ ಕ್ರೀಡಾಂಗಣ ಎನಿಸಿರುವ ರೂರ್ಕೆಲಾದ 'ಬಿರ್ಸಾ ಮುಂಡಾ ಅಂತರರಾಷ್ಟ್ರೀಯ ಹಾಕಿ ಕ್ರೀಡಾಂಗಣ'ವನ್ನು ಅವರು ಗುರುವಾರ ಉದ್ಘಾಟಿಸಿದರು.

'ನಮ್ಮ ತಂಡ ವಿಶ್ವಕಪ್ ಗೆದ್ದರೆ ಎಲ್ಲ ಆಟಗಾರರಿಗೆ ತಲಾ ₹1 ಕೋಟಿ ನಗದು ಬಹುಮಾನ ನೀಡಲಾಗುವುದು. ಭಾರತ ತಂಡ ಶ್ರೇಷ್ಠ ಆಟವಾಡಲಿ ಎಂದು ಶುಭಹಾರೈಸುತ್ತೇನೆ' ಎಂದು ಪಟ್ನಾಯಕ್ ಹೇಳಿದರು.

**21 ಸಾವಿರ ಆಸನ ಸಾಮರ್ಥ್ಯ:** ₹ 146 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಬಿರ್ಸಾ ಮುಂಡಾ ಕ್ರೀಡಾಂಗಣ 21 ಸಾವಿರ ಆಸನ ಸಾಮರ್ಥ್ಯ ಹೊಂದಿದ್ದು, ದೇಶದ ಅತಿದೊಡ್ಡ ಹಾಕಿ ಕ್ರೀಡಾಂಗಣ ಎಂಬ ಗೌರವಕ್ಕೆ ಪಾತ್ರವಾಗಿದೆ. ಇಡೀ ಕ್ರೀಡಾ ಸಂಕೀರ್ಣ 15 ಎಕರೆ ಪ್ರದೇಶದಲ್ಲಿ ಹರಡಿಕೊಂಡಿದೆ.



ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಗುರುವಾರ ಭಾರತ ಹಾಕಿ ತಂಡದ ಆಟಗಾರರ ಜತೆ ಸಂವಾದ ನಡೆಸಿದರು –ಪಿಟಿಐ ಚಿತ್ರ

ಇದೇ ತಿಂಗಳ 13 ರಿಂದ 29ರ ವರೆಗೆ ನಡೆಯಲಿರುವ ವಿಶ್ವಕಪ್ ಟೂರ್ನಿಯ 20 ಪಂದ್ಯಗಳಿಗೆ ಈ ಕ್ರೀಡಾಂಗಣ ಆತಿಥ್ಯ ವಹಿಸಲಿದೆ. ಇನ್ನುಳಿದ 24 ಪಂದ್ಯಗಳು ಭುವನೇಶ್ವರದ ಕಳಿಂಗಾ ಕ್ರೀಡಾಂಗಣದಲ್ಲಿ ನಡೆಯಲಿವೆ.

'ಈ ಕ್ರೀಡಾಂಗಣವು ಇಡೀ ದೇಶಕ್ಕೆ ಒಡಿಶಾದ ಉಡುಗೊರೆ' ಎಂದು ಪಟ್ನಾಯಕ್ ಹೇಳಿದರು.

ಒಡಿಶಾ ರಾಜ್ಯ ಸತತ ಎರಡನೇ ಬಾರಿ ವಿಶ್ವಕಪ್ ಹಾಕಿ ಟೂರ್ನಿಗೆ ಆತಿಥ್ಯ ವಹಿಸಿಕೊಂಡಿದೆ. 2018ರ ಟೂರ್ನಿಯೂ ಇಲ್ಲಿ ನಡೆದಿತ್ತು. ಈ ಪ್ರತಿಷ್ಠಿತ ಟೂರ್ನಿ ಭಾರತದಲ್ಲಿ ನಡೆಯುತ್ತಿರುವುದು ಇದು ನಾಲ್ಕನೇ ಬಾರಿ.

**'ವಿಶ್ವಕಪ್ ಗ್ರಾಮ' ಉದ್ಘಾಟನೆ:** ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ವಿವಿಧ ದೇಶಗಳ ಆಟಗಾರರ ವಾಸ್ತವ್ಯಕ್ಕೆ ನಿರ್ಮಿಸಿರುವ 'ವಿಶ್ವಕಪ್ ಗ್ರಾಮ'ವನ್ನು ಅವರು ಇದೇ ವೇಳೆ ಉದ್ಘಾಟಿಸಿದರು. ದಾಖಲೆಯ 9 ತಿಂಗಳಲ್ಲಿ ನಿರ್ಮಿಸಲಾಗಿರುವ ಕ್ರೀಡಾ ಗ್ರಾಮದಲ್ಲಿ 225 ಕೊಠಡಿಗಳು ಒಳಗೊಂಡಂತೆ ಎಲ್ಲ ಸೌಲಭ್ಯಗಳು ಇವೆ.

## ರಣಜಿ: ಆತಿಥೇಯ ಬ್ಯಾಟರ್‌ಗಳ ವೈಫಲ್ಯ: ಡ್ರಾದತ್ತ ಛತ್ತೀಸಗಢ ಚಿತ್ತ

# ನಿಕಿನ್ ದಿಟ್ಟ ಆಟಕ್ಕೆ ಒಲಿದ ಮುನ್ನಡೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಕರ್ನಾಟಕದ ಅನುಭವಿ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದ ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್‌ನಲ್ಲಿಯೇ ಉದಯೋನ್ಮುಖ ಪ್ರತಿಭೆ ನಿಕಿನ್ ಜೋಸ್ ದಿಟ್ಟ ಆಟವಾಡಿದರು. ತಂಡಕ್ಕೆ ಇನಿಂಗ್ಸ್ ಮುನ್ನಡೆಯ ಕಾಣಿಕೆ ನೀಡಿದರು.

ಇಲ್ಲಿ ನಡೆಯುತ್ತಿರುವ ಸಿ ಗುಂಪಿನ ರಣಜಿ ಪಂದ್ಯದಲ್ಲಿ ಗುರುವಾರ ಛತ್ತೀಸಗಢದ ಅಜಯ್ ಮಂಡಲ್ (93ಕ್ಕೆ4) ಮತ್ತು ಸುಮಿತ್ ರುಯ್ಕರ್ (73ಕ್ಕೆ2) ದಾಳಿಗೆ ಹಿನ್ನಡೆಯ ಭೀತಿಯಲ್ಲಿದ್ದ ಕರ್ನಾಟಕಕ್ಕೆ ನಿಕಿನ್ (67; 134ಎ) ಆಟ ಆಸರೆಯಾಯಿತು. ತಂಡಕ್ಕೆ 55 ರನ್‌ಗಳ ಮುನ್ನಡೆ ಲಭಿಸಿತು. ಆದರೆ ಜಯದ ಆಸೆ ಕ್ಷೀಣಿಸಿತು.



ಕರ್ನಾಟಕ ತಂಡದ ನಿಕಿನ್ ಜೋಸ್ ಬ್ಯಾಟಿಂಗ್ ಸೊಬಗು –ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

ಛತ್ತೀಸಗಢ ತಂಡವು ಎರಡನೇ ಇನಿಂಗ್ಸ್ ಆರಂಭದಲ್ಲಿಯೇ ಆಘಾತ ಅನುಭವಿಸಿದರೂ ಆಶುತೋಷ್ ಸಿಂಗ್ (ಬ್ಯಾಟಿಂಗ್ 8; 47ಎ) ಮತ್ತು ಅಮನದೀಪ್ ಖರೆ (ಬ್ಯಾಟಿಂಗ್ 23, 57ಎ) ಗಟ್ಟಿಯಾಗಿ ನಿಂತರು. ಇದರಿಂದಾಗಿ ಮೂರನೇ ದಿನದಾಟದ ಅಂತ್ಯಕ್ಕೆ ಛತ್ತೀಸಗಢ 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 35 ರನ್ ಗಳಿಸಿತು.

ಮೊದಲ ಇನಿಂಗ್ಸ್‌ನಲ್ಲಿ ದ್ವಿಶತಕದ ಜೊತೆಯಾಟವಾಡಿದ್ದ ಆಶುತೋಷ್ ಮತ್ತು ಅಮನದೀಪ್ ಶುಕ್ರವಾರ ಜಿಗುಟುತನದ ಬ್ಯಾಟಿಂಗ್ ಮಾಡಿದರೆ ಪಂದ್ಯ ಡ್ರಾ ಆಗುವ ಸಾಧ್ಯತೆ ಇದೆ. ಒಂದೊಮ್ಮೆ ಆತಿಥೇಯ ಬೌಲರ್‌ಗಳು ಪ್ರವಾಸಿ ಬಳಗದ ಉಳಿದ ವಿಕೆಟ್‌ಗಳನ್ನು ಬೇಗನೆ ಗಳಿಸಿ, ಸಾಧಾರಣ ಗುರಿ ಪಡೆದು ಗೆಲುವಿನ ಪ್ರಯತ್ನ ಕೂಡ ಮಾಡಬಹುದಾಗಿದೆ.

ಛತ್ತೀಸಗಢ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 311 ರನ್‌ಗಳಿಗೆ ಉತ್ತರವಾಗಿ ಮಯಂಕ್ ಬಳಗವು ಎರಡನೇ ದಿನದ ಕೊನೆಗೆ 64 ಓವರ್‌ಗಳಲ್ಲಿ 1ವಿಕೆಟ್‌ಗೆ 202 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿತ್ತು. ಈ ಅಡಿಪಾಯದ ಮೇಲೆ ದೊಡ್ಡ ಮೊತ್ತ ಕಲೆಹಾಕುವ ಅವಕಾಶ ಆತಿಥೇಯ ತಂಡಕ್ಕೆ ಇತ್ತು. ಆದರೆ, 121.4 ಓವರ್‌ಗಳಲ್ಲಿ 366 ರನ್ ಗಳಿಸಿ ಆಲೌಟ್ ಆಯಿತು.

ದಿನದ ಮೊದಲ 12 ಓವರ್‌ಗಳಲ್ಲಿ ಮಯಂಕ್ ಮತ್ತು ವಿಶಾಲ್ ಒಣತ್ ತಾಳ್ಮೆಯ ಬ್ಯಾಟಿಂಗ್ ಮಾಡಿದರು. ಅದರಲ್ಲೂ ವಿಶಾಲ್ (32; 120ಎ) ಹೆಚ್ಚು ಎಸೆತಗಳನ್ನು ಎದುರಿಸಿದರು. ಸುಮಿತ್ ಬೌಲಿಂಗ್‌ನಲ್ಲಿ ಮಯಂಕ್ (117; 228ಎ) ಔಟಾದ ಮೇಲೆ ಸಮಸ್ಯೆ ಶುರುವಾಯಿತು.

ವಿಶಾಲ್ ರನ್ ಪಡೆಯುವ ಪ್ರಯತ್ನ ಮಾಡಿ ಸುಮಿತ್ ನೇರ ಥ್ರೋಗೆ ರನ್‌ಔಟ್ ಆದರು. ಟಿ.ವಿ. ಅಂಪೈರ್ ಹಲವು ಆಯಾಮಗಳಲ್ಲಿ ಪರಿಶೀಲಿಸಿ ಔಟ್ ನೀಡಿದರು. ಹೋದ ಪಂದ್ಯದಲ್ಲಿ ದ್ವಿಶತಕ ಬಾರಿಸಿದ್ದ ಮನೀಷ್ (5 ರನ್) ಸ್ಟಂಪ್ಡ್ ಆದರು. ಶ್ರೇಯಸ್ ಗೋಪಾಲ್ (23; 38) ಸೌರಭ್ ಮಜುಂದಾರ್ ಎಸೆತದಲ್ಲಿ ಔಟಾದರು. ಊಟದ ವಿರಾಮಕ್ಕೆ ಮುಂಚಿನ ಓವರ್‌ನಲ್ಲಿ ಬಿ.ಆರ್. ಶರತ್ ಕ್ಲೀನ್‌ಬೌಲ್ಡ್ ಆದರು. ಇದೇ ಓವರ್‌ನಲ್ಲಿ ಶರತ್‌ಗೆ ಕ್ಯಾಚ್ ಬಿಟ್ಟಿದ್ದ ವಿಕೆಟ್‌ಕೀಪರ್ ಜೀವದಾನ ನೀಡಿದ್ದರು.

ಇದೆಲ್ಲದರ ನಡುವೆಯೂ 22 ವರ್ಷದ ನಿಕಿನ್ ಮಾತ್ರ ತಾಳ್ಮೆ ಮತ್ತು ಆತ್ಮವಿಶ್ವಾಸಭರಿತ ಆಟವಾಡಿದರು. ವಿರಾಮದ ನಂತರ ಅವರೊಂದಿಗೆ ಸೇರಿದ ಕೆ. ಗೌತಮ್ (18; 24ಎ, 4X3) ರನ್ ಗಳಿಕೆಗೆ ವೇಗ ನೀಡಿದರು. ಇದರಿಂದಾಗಿ ಇನಿಂಗ್ಸ್‌ನ 102ನೇ ಓವರ್‌ನಲ್ಲಿ ಎದುರಾಳಿ ತಂಡದ ಮೊತ್ತವನ್ನು ಚುಕ್ತಾ ಮಾಡಲು ಸಾಧ್ಯವಾಯಿತು. ನಿಕಿನ್ ಸ್ವೀಪ್ ಶಾಟ್‌ಗಳನ್ನು ಪ್ರಯೋಗಿಸಿದರು. ಗೌತಮ್ ಔಟಾದ ನಂತರ ನಿಕಿನ್ ಬಿರುಸಿನ ಆಟಕ್ಕಿಳಿದು ಸಾಧ್ಯವಾದಷ್ಟು ರನ್ ಗಳಿಸಿದರು. ಕ್ರೀಸ್‌ನಿಂದ ಹೊರ ಬಂದು ಚೆಂಡನ್ನು ಸಿಕ್ಸರ್‌ಗೆತ್ತಿದರು.

### ಎರಡೂ ಇನಿಂಗ್ಸ್‌ಗಳಲ್ಲಿ ಸೊನ್ನೆ!

ಛತ್ತೀಸಗಢದ ಆರಂಭಿಕ ಬ್ಯಾಟಿಂಗ್ ಜೋಡಿಯು ಈ ಪಂದ್ಯದ ಎರಡೂ ಇನಿಂಗ್ಸ್‌ನಲ್ಲಿ ಸೊನ್ನೆ ಸುತ್ತಿದರು.

ಛತ್ತೀಸಗಢದ ಅವನೀಶ್ ಧಲಿವಾಲ್ ಮತ್ತು ಅನುಜ್ ತಿವಾರಿ ಖಾತೆಯನ್ನೇ ತೆರೆಯಲಿಲ್ಲ. ಎರಡೂ ಇನಿಂಗ್ಸ್‌ಗಳಲ್ಲಿಯೂ ಅವನೀಶ್ ಅವರು ವೇಗಿ ವಿದ್ವತ್ ಕಾವೇರಪ್ಪ ಮತ್ತು ಅನುಜ್ ತಿವಾರಿ ಅವರು ವಿ. ಕೌಶಿಕ್ ಬೌಲಿಂಗ್‌ನಲ್ಲಿ ಔಟಾಗಿದರು.

ಇದರಿಂದಾಗಿ ತಂಡವು ಈ ಪಂದ್ಯದಲ್ಲಿ ಎರಡು ಸಲವೂ ಖಾತೆ ತೆರೆಯುವ ಮುನ್ನವೇ ಎರಡು ವಿಕೆಟ್ ಕಳೆದುಕೊಂಡಿತು.

### ಸ್ಕೋರ್ ಕಾರ್ಡ್

**ಮೊದಲ ಇನಿಂಗ್ಸ್: ಛತ್ತೀಸಗಢ 311 (109.3 ಓವರ್‌ಗಳಲ್ಲಿ)**
**ಕರ್ನಾಟಕ: 366 (121.4 ಓವರ್‌ಗಳಲ್ಲಿ)**
ಮಯಂಕ್ ಸಿ ಅಜಯ್ ಬಿ ಸುಮಿತ್ 117 (228ಎ, 4X9,6X5), ವಿಶಾಲ್ ರನ್‌ಔಟ್ {ಸುಮಿತ್} 32 (120ಎ,4X3), ನಿಕಿನ್ ಎಲ್‌ಬಿಡಬ್ಲ್ಯು ಸುಮಿತ್ 67 (134ಎ, 4X8, 6X1), ಮನೀಷ್ ಸ್ಟಂಪ್ಡ್ ವರ್ಮಾ ಬಿ ಅಜಯ್ 5 (12ಎ, 4X1), ಶ್ರೇಯಸ್ ಸಿ ಆಶುತೋಷ್ ಬಿ ಸೌರಭ್ 23 (38ಎ, 4X2), ಶರತ್ ಬಿ ರವಿಕಿರಣ 6 (8ಎ, 4X1), ಗೌತಮ್ ಸಿ ಸುಮಿತ್ ಬಿ ಅಜಯ್ 18 (24ಎ, 4X3), ವೈಶಾಖ ಬಿ ಶಶಾಂಕ್ ಸಿಂಗ್ 6 (33ಎ), ಕೌಶಿಕ್ ಎಲ್‌ಬಿಡಬ್ಲ್ಯು ಬಿ ಅಜಯ್ 1 (4ಎ), ವಿದ್ವತ್ ಔಟಾಗದೆ 0 (5ಎ)
**ಇತರೆ:** 10 (ನೋಬಾಲ್ 3, ಬೈ 5, ಲೆಗ್‌ಬೈ 2)
**ವಿಕೆಟ್ ಪತನ:** 2–237 (ಮಯಂಕ್ ಅಗರವಾಲ್; 76.3), 3–236 (ವಿಶಾಲ್ ಒಣತ್; 79.2), 4–241 (ಮನೀಷ್ ಪಾಂಡೆ; 81.6), 5–276 (ಶ್ರೇಯಸ್ ಗೋಪಾಲ್; 94.1), 6–287 (ಶರತ್; 95.5), 7–320 (ಗೌತಮ್;104.6), 8–339 (ವೈಶಾಖ ವಿಜಯಕುಮಾರ್; 115.5), 9–340 (ಕೌಶಿಕ್; 116.3), 10–366 (ನಿಕಿನ್ ಜೋಸ್; 121.4)
**ಬೌಲಿಂಗ್:** ರವಿಕಿರಣ್ 25–4–62–1, ಸೌರಭ್ ಮಜುಂದಾರ್ 20–1–89–1, ಶಶಾಂಕ್ ಸಿಂಗ್ 14–3–42–1, ಅಜಯ್ ಮಂಡಲ್ 37–5–93–4, ಸುಮಿತ್ ರುಯ್ಕರ್ 25.4–4–73–2
**ಎರಡನೇ ಇನಿಂಗ್ಸ್: ಛತ್ತೀಸಗಢ 2ಕ್ಕೆ 35 (20 ಓವರ್‌ಗಳಲ್ಲಿ)**
ಅವನೀಶ್ ಬಿ ವಿದ್ವತ್ 0 (9ಎ), ಅನುಜ್ ಸಿ ಶರತ್ ಬಿ ಕೌಶಿಕ್ 0 (7ಎ), ಅಶುತೋಷ್ ಬ್ಯಾಟಿಂಗ್ 8 (47ಎ), ಅಮನದೀಪ್ ಬ್ಯಾಟಿಂಗ್ 23 (57ಎ, 4X2)
**ಇತರೆ:** 4 (ಬೈ 4)
**ವಿಕೆಟ್ ಪತನ:** 0–1 (ಅವನೀಶ್ ಧಲಿವಾಲ; 2.3), 0–2 (ಅನುಜ್ ತಿವಾರಿ; 3.1)
**ಬೌಲಿಂಗ್:** ವಿದ್ವತ್ ಕಾವೇರಪ್ಪ 6–3–8–1, ವಾಸುಕಿ ಕೌಶಿಕ್ 8–3–7–1, ವಿಜಯಕುಮಾರ್ ವೈಶಾಖ 5–0–15–0, ಕೃಷ್ಣಪ್ಪ ಗೌತಮ್ 1–0–1–0

## ರಣಜಿ: ದೆಹಲಿ ಆಯ್ಕೆ ಸಮಿತಿ ವಜಾ

ನವದೆಹಲಿ (ಪಿಟಿಐ): ದೆಹಲಿ ಕ್ರಿಕೆಟ್ ತಂಡವು ಸೌರಾಷ್ಟ್ರ ಎದುರಿನ ರಣಜಿ ಪಂದ್ಯದಲ್ಲಿ ಹೀನಾಯವಾಗಿ ಸೋತಿದ್ದರಿಂದ ಸೀನಿಯರ್ ತಂಡದ ಆಯ್ಕೆ ಸಮಿತಿಯನ್ನು ಡಿಡಿಸಿಎ ವಜಾ ಮಾಡಿದೆ.

ಭಾರತ ತಂಡದ ಮಾಜಿ ಆಟಗಾರ ಗಗನ್ ಖೋಡಾ, ಮಯಂಕ್ ಸಿದಾನಾ ಮತ್ತು ಅನಿಲ್ ಭಾರದ್ವಾಜ್ ಅವರು ಈ ಸಮಿತಿಯಲ್ಲಿದ್ದರು. ರಾಜ್‌ಕೋಟ್‌ನಲ್ಲಿ ನಡೆದ ಸೌರಾಷ್ಟ್ರದ ವಿರುದ್ಧದ ಪಂದ್ಯದಲ್ಲಿ ದೆಹಲಿ ತಂಡವು ಇನಿಂಗ್ಸ್ ಮತ್ತು 214 ರನ್‌ಗಳಿಂದ ಸೋತಿತು. ಮೊದಲ ಇನಿಂಗ್ಸ್‌ನಲ್ಲಿ ಕೇವಲ 10 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತ್ತು.

ಬುಧವಾರ ರಾಜ್‌ಕೋಟ್‌ನ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ತಂಡದ ಆಯ್ಕೆಯ ಕುರಿತು ಸದಸ್ಯರ ನಡುವೆ ಭಿನ್ನಾಭಿಪ್ರಾಯ ಮೂಡಿತ್ತು. ಆಗ ಸಿದಾನಾ ಸಭಾತ್ಯಾಗ ಮಾಡಿದ್ದರೆನ್ನಲಾಗಿದೆ.

ಈ ಕುರಿತು ಅಪೆಕ್ಸ್ ಕೌನ್ಸಿಲ್‌ಗೆ ಡಿಡಿಸಿಎ ಅಧ್ಯಕ್ಷ ರೋಹನ್ ಜೇಟ್ಲಿ ಇಮೇಲ್ ರವಾನಿಸಿದ್ದಾರೆ. ಕಟುವಾದ ಪದಗಳಲ್ಲಿ ಆಯ್ಕೆ ಸಮಿತಿಯ ಕಾರ್ಯವೈಖರಿಯನ್ನು ವಿವರಿಸಿದ್ದಾರೆ.

ಪ್ರತಿ ಪಂದ್ಯದ ಸಂದರ್ಭದಲ್ಲಿಯೂ 22 ಆಟಗಾರರ ತಂಡವನ್ನು ಆಯ್ಕೆ ಮಾಡುತ್ತಿದ್ದ ಗಗನ್ ಖೋಡಾ ಅವರ ಕ್ರಮವನ್ನು ಜೇಟ್ಲಿ ಆಕ್ಷೇಪಿಸಿದ್ದಾರೆ.

## ವಾಲಿಬಾಲ್: ಮಂಗಳೂರು ವಿವಿಗೆ ಜಯ

ಉಡುಪಿ: ಆತಿಥೇಯ ಮಂಗಳೂರು ವಿಶ್ವವಿದ್ಯಾಲಯ ತಂಡವು ಪೂರ್ಣಪ್ರಜ್ಞ ಕಾಲೇಜಿನಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಮಟ್ಟದ ಪುರುಷರ ವಾಲಿಬಾಲ್ ಟೂರ್ನಿಯಲ್ಲಿ ಪುಣೆಯ ಭಾರತಿ ವಿಶ್ವವಿದ್ಯಾಲಯದ ವಿರುದ್ಧ ಗೆದ್ದು ಮುನ್ನಡೆ ಸಾಧಿಸಿತು.

ಮಂಗಳೂರು ವಿವಿ ಆಟಗಾರರು ಮೊದಲ ಸೆಟ್ (25–12) ಸುಲಭವಾಗಿ ಗೆದ್ದುಕೊಂಡರು. ನಂತರ ತಿರುಗೇಟು ನೀಡಿದ ಭಾರತಿ ವಿವಿ 25–22ರಲ್ಲಿ ಎರಡನೇ ಸೆಟ್ ಗೆದ್ದು ಸಮಬಲ ಸಾಧಿಸಿತು. ನಂತರದ ಎರಡೂ ಸೆಟ್‌ಗಳಲ್ಲಿ ಉತ್ತಮ ಸಾಮರ್ಥ್ಯ ತೋರಿದ ಮಂಗಳೂರು ವಿವಿ ಆಟಗಾರರು 25–23, 25–22 ಅಂಕಗಳೊಂದಿಗೆ ಪಂದ್ಯ ಗೆದ್ದರು.

ಕುರುಕ್ಷೇತ್ರ ವಿವಿ ತಂಡವು ಜೈಪುರದ ರಾಜಸ್ಥಾನ ವಿವಿ ವಿರುದ್ಧ 25–18, 25–17, 25–18ರಿಂದ ಪಂದ್ಯ ಗೆದ್ದಿತು. ಚೆನ್ನೈನ ಮದ್ರಾಸ್ ವಿವಿಯು ಕೋಲ್ಕತ್ತಾದ ಅದಮಾಸ್ ವಿವಿ ವಿರುದ್ಧ 3–2 ಸೆಟ್‌ಗಳಿಂದ ಗೆಲುವು ದಾಖಲಿಸಿದರೆ, ಚೆನ್ನೈನ ಎಸ್‌ಆರ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ ವಿವಿಯು ಗುರುನಾನಕ್ ದೇವ್ ವಿವಿ ವಿರುದ್ಧ ಜಯಿಸಿತು.

## ಬಾಕ್ಸಿಂಗ್: ಫೈನಲ್‌ಗೆ ಥಾಪಾ

ಹಿಸಾರ್ (ಪಿಟಿಐ): ಆರು ಬಾರಿಯ ಏಷ್ಯನ್ ಪದಕ ವಿಜೇತ ಶಿವ ಥಾಪಾ ಅವರು ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಫೈನಲ್ ಪ್ರವೇಶಿಸಿದರು. ಗುರುವಾರ ನಡೆದ 63.5 ಕೆ.ಜಿ ವಿಭಾಗದ ಸೆಮಿಫೈನಲ್‌ನಲ್ಲಿ ಅವರು 5–0 ರಲ್ಲಿ ಮನೀಷ್ ಕೌಶಿಕ್ ವಿರುದ್ಧ ಗೆದ್ದರು.

# ಎಸಿಸಿ ಕ್ಯಾಲೆಂಡರ್ ಏಕಪಕ್ಷೀಯ: ನಜಮ್ ಸೇಥಿ ಅಸಮಾಧಾನ

ನವದೆಹಲಿ (ಪಿಟಿಐ): ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಮುಖ್ಯಸ್ಥ ಜಯ್ ಶಾ ಅವರು ಪ್ರಕಟಿಸಿರುವ ಎರಡು ವರ್ಷದ ಕ್ರಿಕೆಟ್ ವೇಳಾಪಟ್ಟಿಯು ಏಕಪಕ್ಷೀಯವಾಗಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಮುಖ್ಯಸ್ಥ ನಜಮ್ ಸೇಥಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಯ್ ಶಾ ಅವರು ಗುರುವಾರ 2023 ಮತ್ತು 2024ರಲ್ಲಿ ಆಯೋಜಿಸಲಾಗಿರುವ ಕ್ರಿಕೆಟ್ ಟೂರ್ನಿಗಳ ಕ್ಯಾಲೆಂಡರ್ ಪ್ರಕಟಿಸಿದರು.

ಇದೇ ವರ್ಷದ ಸೆಪ್ಟೆಂಬರ್‌ನಲ್ಲಿ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯನ್ನು 50 ಓವರ್‌ಗಳ ಮಾದರಿಯಲ್ಲಿ ಆಯೋಜಿಸಲಾಗುವುದು. ಈ ಬಾರಿ ಪಾಕಿಸ್ತಾನವು ಟೂರ್ನಿಯ ಆತಿಥ್ಯವಹಿಸಲಿದೆ. ಆದರೆ ಭಾರತ ತಂಡವು ಪಾಕ್ ನೆಲದಲ್ಲಿ ಆಡುವುದಿಲ್ಲ ಎಂದು ಬಿಸಿಸಿಐ ಕಾರ್ಯದರ್ಶಿಯೂ ಆಗಿರುವ ಶಾ ಅವರು ಈ ಹಿಂದೆಯೇ ಹೇಳಿದ್ದರು.

'ಜಯ್ ಶಾ ಅವರೇ ತಾವು ಏಕಪಕ್ಷೀಯವಾಗಿ ಎಸಿಸಿ ರೂಪುರೇಷೆ ಮತ್ತು ಕ್ಯಾಲೆಂಡರ್ ಪ್ರಕಟಿಸಿರುವುದಕ್ಕೆ ಧನ್ಯವಾದಗಳು. 2023ರ ಏಷ್ಯಾ ಕಪ್ ಟೂರ್ನಿಯ ಆತಿಥ್ಯವನ್ನು ಪಾಕ್ ವಹಿಸಲಿದೆ. ಆದರೆ ತಾವು ತಾವೇ ನಮ್ಮ ಪಿಎಸ್‌ಎಲ್ ಟೂರ್ನಿಯ ವೇಳಾಪಟ್ಟಿಯ ಬಗ್ಗೆಯೂ ತಾವೇ ನಿರ್ಧಾರ ಕೈಗೊಂಡಂತಿದೆ. ಇದಕ್ಕೆ ಶೀಘ್ರವೇ ಪ್ರತ್ರಿಕ್ರಿಯಿಸುವಿರೆಂದು ಆಶಿಸುವೆ' ಎಂದು ಸೇಥಿ ಟ್ವೀಟ್ ಮಾಡಿದ್ದಾರೆ.

ಏಷ್ಯಾ ಕಪ್ ಟೂರ್ನಿಯಲ್ಲಿ ಭಾರತ, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ, ಅಫ್ಘಾನಿಸ್ತಾನ ಮತ್ತು ಅರ್ಹತಾ ಸುತ್ತಿನಲ್ಲಿ ಗೆದ್ದು ಬರುವ ತಂಡ ಸೇರಿದಂತೆ ಒಟ್ಟು ಆರು ತಂಡಗಳು ಪೈಪೋಟಿ ನಡೆಸಲಿವೆ.

# ಟಾಟಾ ಓಪನ್ ಟೆನಿಸ್: ಹಿಂದೆ ಸರಿದ ಸಿಲಿಚ್

ಪುಣೆ (ಪಿಟಿಐ): ಅಗ್ರಶ್ರೇಯಾಂಕದ ಆಟಗಾರ ಮರಿನ್ ಸಿಲಿಚ್ ಅವರು ಮಂಡಿ ನೋವಿನ ಕಾರಣ ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿಯಿಂದ ಹಿಂದೆ ಸರಿದರು.

2014ರ ಅಮೆರಿಕ ಓಪನ್ ಚಾಂಪಿಯನ್ ಆಗಿರುವ ಸಿಲಿಚ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಗುರುವಾರ ನೆದರ್ಲೆಂಡ್ಸ್‌ನ ಟಾಲೊನ್ ಗ್ರಿಕ್‌ಸ್ಪೂರ್ ಅವರನ್ನು ಎದುರಿಸಬೇಕಿತ್ತು. ಆದರೆ ಬೆಳಿಗ್ಗೆ ಅಭ್ಯಾಸದ ವೇಳೆ ಮಂಡಿನೋವಿಗೆ ಒಳಗಾದರು. ವಾಕ್‌ಓವರ್ ಪಡೆದ ಗ್ರಿಕ್‌ಸ್ಪೂರ್ ಸೆಮಿಫೈನಲ್ ಪ್ರವೇಶಿಸಿದರು.

'ಅಭ್ಯಾಸದ ವೇಳೆ ಗಾಯಗೊಂಡಿದ್ದರಿಂದ ಟೂರ್ನಿಯಿಂದ ಹಿಂದೆ ಸರಿದಿದ್ದೇನೆ. ನನಗೆ ಬೆಂಬಲ ನೀಡಿದ ಇಲ್ಲಿನ ಅಭಿಮಾನಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಇಲ್ಲಿ ಆಡುವುದನ್ನು ಆನಂದಿಸಿದ್ದೇನೆ. ಸಾಧ್ಯವಾದರೆ ಮುಂದಿನ ವರ್ಷ ಮತ್ತೆ ಭಾರತಕ್ಕೆ ಬರುವೆ' ಎಂದು ಸಿಲಿಚ್ ಹೇಳಿದ್ದಾರೆ.

ಸಿಲಿಚ್ ಅವರು ಬುಧವಾರ ನಡೆದಿದ್ದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ 6–3, 3–6, 6–1 ರಲ್ಲಿ ಸ್ಪೇನ್‌ನ ರಾಬರ್ಟೊ ಕಾರ್ಬಲೆಸ್ ಬಯೆನಾ ವಿರುದ್ಧ ಗೆದ್ದಿದ್ದರು.

**ಬಾಲಾಜಿ– ಜೀವನ್‌ಗೆ ಗೆಲುವು:** ಭಾರತದ ಎನ್.ಶ್ರೀರಾಮ್ ಬಾಲಾಜಿ ಮತ್ತು ಜೀವನ್ ನೆಡುಂಚೆಳಿಯನ್ ಅವರು ಡಬಲ್ಸ್ ವಿಭಾಗದಲ್ಲಿ ಅಚ್ಚರಿಯ ಗೆಲುವು ಪಡೆದು ಸೆಮಿಫೈನಲ್ ಪ್ರವೇಶಿಸಿದರು.

ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಜೋಡಿ 7–6, 7–6 ರಲ್ಲಿ ಎರಡನೇ ಶ್ರೇಯಾಂಕ ಹೊಂದಿದ್ದ ಅಮೆರಿಕದ ಜಾಕ್ಸನ್ ವಿತ್ರೊ– ನೇಥನಿಲ್ ಲಮೊನ್ಸ್‌ಗೆ ಆಘಾತ ನೀಡಿತು.

ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಅಸ್ಲನ್ ಕರತ್ಸೆವ್ ಅವರು 6–1, 6–2 ರಲ್ಲಿ ಪೆಡ್ರೊ ಮಾರ್ಟಿನೆಜ್ ವಿರುದ್ಧ ಗೆದ್ದರು.

# ಕ್ರಿಕೆಟ್ ಟೆಸ್ಟ್: ಪಾಕ್ ಗೆಲುವಿಗೆ 319 ರನ್ ಗುರಿ



ಟಾಮ್ ಬ್ಲಂಡೆಲ್ –ಎಎಫ್‌ಪಿ ಚಿತ್ರ

ಕರಾಚಿ (ಎಎಫ್‌ಪಿ): ನ್ಯೂಜಿಲೆಂಡ್ ತಂಡ ಇಲ್ಲಿ ನಡೆಯುತ್ತಿರುವ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಪಾಕಿಸ್ತಾನದ ಗೆಲುವಿಗೆ 319 ರನ್‌ಗಳ ಗುರಿ ನೀಡಿದೆ.

ಸಾಧಾರಣ ಗುರಿ ಬೆನ್ನಟ್ಟಿರುವ ಪಾಕಿಸ್ತಾನ ತಂಡ ರನ್ ಖಾತೆ ತೆರೆಯುವ ಮುನ್ನವೇ ಎರಡು ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿದೆ. ಅಬ್ದುಲ್ಲಾ ಶಫೀಕ್ ಮತ್ತು ಮೀರ್ ಹಮ್ಜಾ ಅವರು ಶೂನ್ಯಕ್ಕೆ ಔಟಾದರು. ಇವರು ಕ್ರಮವಾಗಿ ಟಿಮ್ ಸೌಥಿ ಹಾಗೂ ಇಶ್ ಸೋಧಿಗೆ ವಿಕೆಟ್ ಒಪ್ಪಿಸಿದರು.

ಅಂತಿಮ ದಿನವಾದ ಶುಕ್ರವಾರ ಗೆಲುವಿಗೆ 319 ರನ್ ಗಳಿಸುವ ಸವಾಲು ಪಾಕ್ ಮುಂದಿದೆ. ಇದಕ್ಕೂ ಮುನ್ನ ನ್ಯೂಜಿಲೆಂಡ್ 5 ವಿಕೆಟ್‌ಗಳಿಗೆ 277 ರನ್ ಗಳಿಸಿ ಎರಡನೇ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಟಮ್ ಲಥಾಮ್ (62), ಟಾಮ್ ಬ್ಲಂಡೆಲ್ (74) ಮತ್ತು ಮೈಕಲ್ ಬ್ರೇಸ್‌ವೆಲ್ (ಔಟಾಗದೆ 74) ಅವರು ಅರ್ಧಶತಕ ಗಳಿಸಿದರು. ಬ್ಲಂಡೆಲ್ ಮತ್ತು ಬ್ರೇಸ್‌ವೆಲ್ ಐದನೇ ವಿಕೆಟ್‌ಗೆ 127 ರನ್ ಸೇರಿಸಿದರು.

ಕರಾಚಿಯಲ್ಲಿ ನಡೆದಿದ್ದ ಸರಣಿಯ ಮೊದಲ ಪಂದ್ಯ ಡ್ರಾ ಆಗಿತ್ತು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 131 ಓವರ್‌ಗಳಲ್ಲಿ 449: ಪಾಕಿಸ್ತಾನ: 133 ಓವರ್‌ಗಳಲ್ಲಿ 408. ಎರಡನೇ ಇನಿಂಗ್ಸ್: ನ್ಯೂಜಿಲೆಂಡ್ 82 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 277 ಡಿಕ್ಲೇರ್ಡ್ (ಟಾಮ್ ಲಥಾಮ್ 62, ಕೇನ್ ವಿಲಿಯಮ್ಸನ್ 41, ಟಾಮ್ ಬ್ಲಂಡೆಲ್ 74, ಮೈಕಲ್ ಬ್ರೇಸ್‌ವೆಲ್ ಔಟಾಗದೆ 74, ಮೀರ್ ಹಮ್ಜಾ 38ಕ್ಕೆ 1) ಪಾಕಿಸ್ತಾನ: 2.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 0.